ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 13 ಭಾನುವಾರ 2025


46

ಸಂಪುಟ: 46 | ಸಂಚಿಕೆ: 87 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಪಾಲಿಕೆ ನೌಕರರ ಮುಷ್ಕರ

ತಾತ್ಕಾಲಿಕ ಅಂತ್ಯ

● ಇಂದು ಕಸ ಸಂಗ್ರಹ, ಸ್ವಚ್ಛತಾ ಕಾರ್ಯ ಪುನರಾರಂಭ ● ಬೇಡಿಕೆ ಕುರಿತು ಜು.15ಕ್ಕೆ ಸಭೆ

ಮೈಸೂರು,ಜು.12(ಪಿಎಂ)–ನೀರು ಪೂರೈಕೆ ಹೊರತುಪಡಿಸಿ ಎಲ್ಲಾ ಕೆಲಸ ಕಾರ್ಯ ಸ್ಥಗಿತಗೊಳಿಸಿ ಮೈಸೂರು ಮಹಾನಗರಪಾಲಿಕೆ ನೌಕರರು ಐದು ದಿನಗಳಿಂದ ನಡೆಸುತ್ತಿದ್ದ ಮುಷ್ಕರ ತಾತ್ಕಾಲಿಕವಾಗಿ ಅಂತ್ಯಗೊಂಡಿದೆ.

ಪಾಲಿಕೆ ಪೌರಕಾರ್ಮಿಕರೂ ಮುಷ್ಕರ ನಿರತರಾದ ಕಾರಣ ಮೈಸೂರು ನಗರಾದ್ಯಂತ ಕಸ ವಿಲೇವಾರಿ ಸ್ಥಗಿತಗೊಂಡಿದ್ದು, ಅನೈರ್ಮಲ್ಯಕ್ಕೆ ಕಾರಣವಾಗಿದೆ. ನಗರದ ರಸ್ತೆಬದಿಗಳಲ್ಲಿ ತರಾವರಿ ತ್ಯಾಜ್ಯ ರಾಶಿ ರಾಶಿ ಬಿದ್ದಿದೆ. ಸದ್ಯ, ತಾತ್ಕಾಲಿಕವಾಗಿ ಮುಷ್ಕರ ಕೈಬಿಟ್ಟಿರುವ ಹಿನ್ನೆಲೆಯಲ್ಲಿ ಮನೆ ಮನೆ ಕಸ ಸಂಗ್ರಹ ಹಾಗೂ ಸ್ವಚ್ಛತಾ ಕಾರ್ಯ ಭಾನುವಾರ ಆರಂಭಗೊಳ್ಳಲಿದೆ. ರಾಜ್ಯ ಸರ್ಕಾರಿ ನೌಕರರಿಗೆ ಕಲ್ಪಿಸಿರುವಂತೆಯೇ 7ನೇ ವೇತನ ಆಯೋಗದ ಸೌಲಭ್ಯವನ್ನು ರಾಜ್ಯದ ಎಲ್ಲಾ ಮಹಾನಗರ ಪಾಲಿಕೆ ಅಧಿಕಾರಿಗಳು, ನೌಕರರಿಗೂ ಯಥಾವತ್ತಾಗಿ ವಿಸ್ತರಿಸಬೇಕು. ಸರ್ಕಾರದ ಆರ್ಥಿಕ ಇಲಾಖೆಯಿಂದಲೇ ರಾಜ್ಯ ಹಣಕಾಸು ಆಯೋಗ ನೀಡುವ ವೇತನ ಅನುದಾನದಿಂದಲೇ ಶೇ.100ರಷ್ಟು ಅನುದಾನವನ್ನು ಬಿಡುಗಡೆ ಮಾಡಬೇಕೆಂಬುದು ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ▶ 6ನೇ ಪುಟಕ್ಕೆ

ಅಹಮದಾಬಾದ್ ಏರ್ ಇಂಡಿಯಾ ವಿಮಾನ ದುರಂತದ ಪ್ರಾಥಮಿಕ ವರದಿ

ಇಂಧನ ಪೂರೈಕೆ ಸ್ಥಗಿತವೇ

ದುರಂತಕ್ಕೆ ಕಾರಣ



ನವದೆಹಲಿ, ಜು.12–ಗುಜರಾತ್‌ನ ಅಹಮದಾಬಾದ್‌ನಲ್ಲಿ ಜೂ.12ರಂದು ಸಂಭವಿಸಿದ್ದ ಏರ್ ಇಂಡಿಯಾ ವಿಮಾನ ದುರಂತದ ಪ್ರಾಥಮಿಕ ತನಿಖಾ ವರದಿ ಸಲ್ಲಿಕೆಯಾಗಿದ್ದು, ಎರಡೂ ಇಂಜಿನ್‌ಗಳಿಗೂ ಹಠಾತ್ತನೆ ಇಂಧನ ಪೂರೈಕೆ ಸ್ಥಗಿತಗೊಂಡಿದ್ದೇ ಈ ದುರಂತಕ್ಕೆ ಕಾರಣ ಎಂಬುದು ಬಹಿರಂಗವಾಗಿದೆ.

ಈ ದುರಂತದ ಕುರಿತು ವಿಮಾನಗಳ ಅಪಘಾತ ತನಿಖಾ ಸಂಸ್ಥೆ (ಎಎಐಬಿ) ಸಲ್ಲಿಸಿರುವ 15 ಪುಟಗಳ ವರದಿಯಲ್ಲಿ ಬೋಯಿಂಗ್–787 ಡ್ರೀಮ್ ಲೈನರ್ ವಿಮಾನದಲ್ಲಿ ಅಂದು ಏನೇನೆಲ್ಲಾ ಆಗಿದೆ ಎಂಬುದನ್ನು ಬಹಿರಂಗಪಡಿಸಲಾಗಿದೆ. ವರದಿ ಪ್ರಕಾರ ವಿಮಾನ ಟೇಕಾಫ್ ಆದ ಕೆಲವೇ ಸೆಕೆಂಡುಗಳಲ್ಲಿ ಅದರ ಎರಡು ಇಂಜಿನ್‌ಗಳು ಸ್ಥಗಿತಗೊಂಡ ಕಾರಣ ವಿಮಾನ ಪತನವಾಗಿದೆ. ವಿಮಾನ ಟೇಕಾಫ್ ಆದ ನಂತರ ಇಂಧನ ಪೂರೈಕೆ ಸ್ವಿಚ್‌ಗಳು ರನ್‌ನಿಂದ ಕಟ್ ಆಫ್‌ಗೆ ಬದಲಾಗಿದೆ. ಈ ಘಟನೆ ಕೇವಲ 1 ಸೆಕೆಂಡ್ ಅಂತರದಲ್ಲಿ ಸಂಭವಿಸಿದ್ದು, ಈ ವೇಳೆ ಎಂಜಿನ್‌ಗಳಿಗೆ ಇಂಧನ ಪೂರೈಕೆ ಆಗುವುದು ಸ್ಥಗಿತಗೊಂಡಿದೆ.

ಕಾಕ್‌ಪಿಟ್‌ನಲ್ಲಿ ಪೈಲಟ್‌ಗಳ ನಡುವೆ ನಡೆದ ಸಂಭಾಷಣೆ ಬಗ್ಗೆಯೂ ವರದಿಯಲ್ಲಿ ಉಲ್ಲೇಖಿಸಲಾಗಿದ್ದು, ಕಾಕ್‌ಪಿಟ್ ವಾಯ್ಸ್ ರೆಕಾರ್ಡ್ ಪ್ರಕಾರ ಒಬ್ಬ ಪೈಲಟ್ ಮತ್ತೊಬ್ಬ ಪೈಲಟ್ ಬಳಿ 'ನೀವು ಯಾಕೆ ಎಂಜಿನ್ ಆಫ್ ಮಾಡಿದ್ದೀರಿ?' ಎಂದು ಕೇಳಿದ್ದಾರೆ. ಆಗ ಮತ್ತೋರ್ವ ಪೈಲಟ್ 'ನಾನು ಏನನ್ನೂ ಮಾಡಲಿಲ್ಲ' ಎಂದು ಹೇಳಿದ್ದಾರೆ. ತುರ್ತು ಪರಿಸ್ಥಿತಿ ಅರಿವಿಗೆ ಬರುತ್ತಿದ್ದಂತೆಯೇ ಪೈಲಟ್‌ಗಳು ವಿಮಾನದ ಸ್ವಯಂಚಾಲಿತ ವ್ಯವಸ್ಥೆಯನ್ನು ಸಕ್ರಿಯಗೊಳಿಸಲು ಪ್ರಯತ್ನಿಸಿದ್ದಾರೆ. ಆದರೆ ರಾಮ್ ಏರ್ ಟರ್ಬೈನ್ ಅಂದರೆ ತುರ್ತು ಫ್ಯಾನ್ ಮತ್ತು ಎಪಿಯುನಂತಹ ವ್ಯವಸ್ಥೆಗಳನ್ನು ಸಕ್ರಿಯಗೊಳಿಸಿದ ನಂತರವೂ ವಿಮಾನವನ್ನು ಅಪಘಾತದಿಂದ ರಕ್ಷಿಸಲು ಪೈಲಟ್‌ಗಳಿಗೆ ಸಾಧ್ಯವಾಗಲಿಲ್ಲ. ▶ 6ನೇ ಪುಟಕ್ಕೆ

ಆತುರದ ನಿರ್ಧಾರಕ್ಕೆ ಬರಬೇಡಿ

ನವದೆಹಲಿ,ಜು.12–ಕಳೆದ ತಿಂಗಳು ಅಹಮದಾಬಾದ್‌ನಲ್ಲಿ ಸಂಭವಿಸಿದ ಏರ್ ಇಂಡಿಯಾ ವಿಮಾನ ಅಪಘಾತದ ಕಾರಣದ ಬಗ್ಗೆ ಆತುರದ ತೀರ್ಮಾನಗಳಿಗೆ ಸಾರ್ವಜನಿಕರು ಮತ್ತು ಮಾಧ್ಯಮಗಳು ಬರಬಾರದು ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವ ರಾಮ್‌ಮೋಹನ್ ನಾಯ್ಡು ಹೇಳಿದ್ದಾರೆ.



ವಿಮಾನ ಅಪಘಾತ ತನಿಖಾ ಸಂಸ್ಥೆ ಬಿಡುಗಡೆ ಮಾಡಿದ ಪ್ರಾಥಮಿಕ ತನಿಖಾ ವರದಿಗಳು ಸಂಕೀರ್ಣ ತನಿಖೆ ಆರಂಭ ಮಾತ್ರ. ಇದು ಪ್ರಾಥಮಿಕ ವರದಿ. ಸಚಿವಾಲಯದಲ್ಲಿ ಅದನ್ನು ಕೂಲಂಕುಷವಾಗಿ ವಿಶ್ಲೇಷಿಸುತ್ತಿದ್ದೇವೆ. ಅಗತ್ಯವಿರುವ ಯಾವುದೇ ಬೆಂಬಲ ನೀಡಲು ಎಎಐಬಿಯೊಂದಿಗೆ ಸಮನ್ವಯ ಸಾಧಿಸುತ್ತಿದ್ದೇವೆ. ಅಂತಿಮ ವರದಿ ಶೀಘ್ರದಲ್ಲೇ ಬಿಡುಗಡೆಯಾಗುವ ಸಾಧ್ಯತೆಯಿದ್ದು, ಇದರಿಂದ ನಾವು ಕೆಲವು ನಿರ್ದಿಷ್ಟ ತೀರ್ಮಾನಗಳಿಗೆ ಬರಬಹುದು. ಇದೊಂದು ಸವಾಲಿನ ವಿಷಯ ಎಂದರು.

ಎಎಐಬಿ ತನಿಖಾ ವರದಿಯಲ್ಲಿ ಪಕ್ಷಪಾತ

ಪೈಲಟ್ ಸಂಘದ ಟೀಕೆ

ನವದೆಹಲಿ: ಏರ್ ಇಂಡಿಯಾ ವಿಮಾನ ದುರಂತಕ್ಕೆ ಸಂಬಂಧಿಸಿದಂತೆ 'ವಿಮಾನಗಳ ಅಪಘಾತ ತನಿಖಾ ಸಂಸ್ಥೆ'ಯ ತನಿಖಾ ವರದಿಯನ್ನು ಭಾರತೀಯ ವಿಮಾನಯಾನ ಪೈಲಟ್‌ಗಳ ಸಂಘ ಟೀಕಿಸಿದೆ. ಜು.11ರಂದು ಬಿಡುಗಡೆಯಾಗಿರುವ ವರದಿಯು ಪೈಲಟ್‌ಗಳತ್ತ ಬೊಟ್ಟು ಮಾಡುವಂತಿದೆ ಎಂದು ಆರೋಪಿಸಿರುವ ಸಂಘ, ತನಿಖೆಯ ದಾಟಿ ಹಾಗೂ ಅದರಲ್ಲಿನ ನಿರ್ದೇಶನಗಳು ಪೈಲಟ್‌ಗಳ ದೋಷದ ಕಡೆಗೆ ಪಕ್ಷಪಾತದ ನಿಲುವು ಹೊಂದಿರುವುದನ್ನು ಸೂಚಿಸುತ್ತವೆ. ಊಹಾತ್ಮಕ ವರದಿಯನ್ನು ನಾವು ಸ್ಪಷ್ಟವಾಗಿ ತಿರಸ್ಕರಿಸುತ್ತೇವೆ. ನ್ಯಾಯಯುತ, ವಾಸ್ತವ ಆಧಾರಿತ ತನಿಖೆಗೆ ಒತ್ತಾಯಿಸುತ್ತೇವೆ ಎಂದು ಹೇಳಿದೆ.

ಸಹಿ ಇಲ್ಲದ ವರದಿ ಸೋರಿಕೆ: ಸಂಬಂಧಪಟ್ಟ ಅಧಿಕಾರಿಗಳ ಸಹಿ ಇಲ್ಲದ ವರದಿಯನ್ನು ಮಾಧ್ಯಮಗಳಿಗೆ ಸೋರಿಕೆ ಮಾಡಲಾಗಿದೆ. ತನಿಖೆಯು ರಹಸ್ಯವಾಗಿಯೇ ಮುಂದುವರೆದಿರುವುದರಿಂದ, ವಿಶ್ವಾಸಾರ್ಹತೆ ಹಾಗೂ ಪಾರದರ್ಶಕತೆಯ ಕೊರತೆ ಕಾಡುತ್ತಿದೆ. ತನಿಖಾ ತಂಡಕ್ಕೆ ಅರ್ಹ, ಅನುಭವಿ ಸಿಬ್ಬಂದಿ, ವಿಶೇಷವಾಗಿ ನುರಿತ ಪೈಲಟ್‌ಗಳನ್ನು ಈವರೆಗೆ ಸೇರಿಸಿಲ್ಲ ಎಂದು ಕಿಡಿಕಾರಿದೆ.

ಜು.25ರಿಂದ ಕಬಿನಿ ಜಲಾಶಯದಿಂದ ನಾಲೆಗಳಿಗೆ ನೀರು ಬಿಡುಗಡೆ

ನೀರಾವರಿ ಸಲಹಾ ಸಮಿತಿ ಸಭೆ ತೀರ್ಮಾನ



ಮೈಸೂರು,ಜು.12(ಬಿಎಲ್‌ಯು)–ಮೈಸೂರಿನ ಹೆಚ್.ಡಿ.ಕೋಟೆಯ ಕಬಿನಿ ಜಲಾಶಯ ಭರ್ತಿಯಾಗಿರುವ ಹಿನ್ನೆಲೆಯಲ್ಲಿ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯ ರೈತರು ಭತ್ತ ಹಾಗೂ ಇತರೆ ಬೆಳೆ ಬೆಳೆಯಲು ಜುಲೈ 25ರಿಂದ ಕಟ್ಟು ನೀರು ಪದ್ಧತಿಯಲ್ಲಿ ನಾಲೆಗಳಿಗೆ ನೀರು ಹರಿಸಲು ಕಬಿನಿ ನೀರಾವರಿ ಸಲಹಾ ಸಮಿತಿ ಮಹತ್ವದ ತೀರ್ಮಾನ ಕೈಗೊಂಡಿದೆ.

ಮೈಸೂರಿನ ಕಾಡಾ ಕಚೇರಿಯ ಕಾವೇರಿ ನೀರಾವರಿ ನಿಗಮದ ದಕ್ಷಿಣ ವಲಯದ ಮುಖ್ಯ ಇಂಜಿನಿಯರ್ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಾಲೆ ಹಾಗೂ ಕೆರೆ–ಕಟ್ಟೆಗಳಿಗೆ ನೀರು ಹರಿಸುವ ಬಗ್ಗೆ ಚರ್ಚೆ ನಡೆಸಲಾಯಿತು. ಈ ವೇಳೆ ಅಣೆಕಟ್ಟಿನಲ್ಲಿ ಸಂಗ್ರಹವಾಗಿರುವ ನೀರಿನ ಮಟ್ಟ, ನಾಲಾ ಜಾಲದ ಸ್ಥಿತಿಗತಿ ಬಗ್ಗೆ ಸಚಿವ ಡಾ.ಮಹದೇವಪ್ಪ ಅಧಿಕಾರಿಗಳಿಂದ ಮಾಹಿತಿ ಪಡೆದರು. ಮುಂಗಾರು ಹಂಗಾಮಿಗಾಗಿ ತಿಂಗಳಲ್ಲಿ 15 ದಿನ ನೀರು ▶ 6ನೇ ಪುಟಕ್ಕೆ

ಜು.15ರಿಂದ ಕೆರೆ–ಕಟ್ಟೆಗಳಿಗೆ ನೀರು ಹರಿಸಲು ತೀರ್ಮಾನ

ಮೈಸೂರಿನ ಕಬಿನಿ ಜಲಾನಯನ ಪ್ರದೇಶದ ಕೆರೆ ಕಟ್ಟೆಗಳಿಗೆ ಜು.15ರಿಂದ ನೀರು ಹರಿಸಲು ಕಬಿನಿ ನೀರಾವರಿ ಸಲಹಾ ಸಮಿತಿ ಸಭೆ ತೀರ್ಮಾನ ಕೈಗೊಂಡಿದೆ.

ಜು.25ರಿಂದ ಕಬಿನಿ ಎಡ ಮತ್ತು ಬಲ ದಂಡೆ ನಾಲೆಗಳಿಗೆ ನೀರು ಹರಿಸಿದರೆ, ಇದಕ್ಕೂ ಮುಂಚಿತವಾಗಿ ಜು.15ರಿಂದಲೇ ಕೆರೆ ಕಟ್ಟೆಗಳಿಗೆ ನೀರು ಬಿಡುಗಡೆ ಮಾಡಲು ನಿರ್ಧಾರ ಮಾಡಲಾಯಿತು. ಕೆರೆ ಕಟ್ಟೆಗಳಿಗೆ ನೀರು ಹರಿಸುವುದರಿಂದ ಅಚ್ಚುಕಟ್ಟು ಪ್ರದೇಶದಲ್ಲಿ ಬೆಳೆ ಬೆಳೆಯಲು ಅನುಕೂಲವಾಗುತ್ತದೆ. ಜೊತೆಗೆ ಅಂತರ್ಜಲದ ಪ್ರಮಾಣ ಹೆಚ್ಚಾಗುತ್ತದೆ ಎಂದು ನೀರಾವರಿ ಇಲಾಖೆ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದ್ದಾರೆ ನಾಲೆಗಳಿಗೆ ನೀರು ಹರಿಸುವ ಮುನ್ನ ನಾಲೆಗಳ ಹೂಳು ತೆರವು ಮಾಡಬೇಕು. ಜೊತೆಗೆ ನೀರು ಕೊನೆಯವರೆಗೂ ತಲುಪಬೇಕು. ಪ್ರತಿಯೊಬ್ಬ ರೈತನಿಗೂ ನೀರು ಲಭ್ಯವಾಗಬೇಕು ಎಂದು ಶಾಸಕರು ಆಗ್ರಹಿಸಿದರು.

ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ, ನಾಲೆಗಳಿಗೆ ನೀರು ಹರಿಸುವ ಮುನ್ನವೇ ಹೂಳೆತ್ತಬೇಕು. ನೀರು ನಾಲೆಯ ಕೊನೆಯ ಭಾಗಕ್ಕೂ ತಲುಪಬೇಕು. ಅಧಿಕಾರಿಗಳು ಈ ವಿಚಾರದಲ್ಲಿ ಗಮನಹರಿಸಬೇಕು ಎಂದು ಒತ್ತಾಯಿಸಿದರು.

ಮೈಸೂರು ಮಿತ್ರ

ಭಾನುವಾರ 13 ಜುಲೈ 2025

ಸ್ಥಳೀಯ ಸಂಸ್ಥೆಗಳಲ್ಲಿ ಜನಪ್ರತಿನಿಧಿಗಳು ಇಲ್ಲದೆ ಅಭಿವೃದ್ಧಿ ಕಾರ್ಯ ಕುಂಠಿತ

ಕೂಡಲೇ ಚುನಾವಣೆ ನಡೆಸದಿದ್ದರೆ ಪ್ರಜಾ ಪಾರ್ಟಿಯಿಂದ ಪ್ರತಿಭಟನೆ



ಡಾ.ಬಿ.ಶಿವಣ್ಣ

ಮೈಸೂರು, ಜು.12(ಜಿಎ)–ರಾಜ್ಯದಲ್ಲಿ ಜಿಪಂ, ತಾಪಂ, ನಗರಸಭೆ, ಪುರಸಭೆ, ಪಾಲಿಕೆಗಳಿಗೆ ಚುನಾವಣೆ ನಡೆಯದ ಕಾರಣ ಜನಪ್ರತಿನಿಧಿಗಳಿಲ್ಲ. ಹೀಗಾಗಿ ಎಲ್ಲೆಡೆ ಅಭಿವೃದ್ಧಿ ಕುಂಠಿತವಾಗಿದ್ದು, ಸರ್ಕಾರ ಕೂಡಲೇ ಚುನಾವಣೆ ನಡೆಸಲು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಕರ್ನಾಟಕ ಪ್ರಜಾ ಪಾರ್ಟಿ (ರೈತ ಪರ್ವ) ವತಿಯಿಂದ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಸಂಸ್ಥಾಪಕ ರಾಜ್ಯಾಧ್ಯಕ್ಷ ಡಾ.ಬಿ.ಶಿವಣ್ಣ ಎಚ್ಚರಿಕೆ ನೀಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೀಸಲಾತಿ, ಕ್ಷೇತ್ರ ವಿಂಗಡಣೆ ಮೊದಲಾದ ಅಗತ್ಯ ಅಂಶಗಳನ್ನು ಸರ್ಕಾರ ಕೂಡಲೇ ಚುನಾವಣಾ ಆಯೋಗಕ್ಕೆ ನೀಡಿ, ಚುನಾವಣೆ ನಡೆಸುವಂತೆ ಕೋರಬೇಕು. ಈಗಾಗಲೇ ಜನಪ್ರತಿನಿಧಿಗಳು ಇಲ್ಲದ ಕಾರಣ ಅಧಿಕಾರಿ ವರ್ಗ ತಮ್ಮ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ನಿರಾಸಕ್ತಿ ತೋರುತ್ತಿದ್ದಾರೆ. ಜನರ ಕೆಲಸ ಕಾರ್ಯಗಳೂ ಆಗುತ್ತಿಲ್ಲ. ಆದ್ದರಿಂದ ಸರ್ಕಾರ ವಿಳಂಬ ಧೋರಣೆ ಬಿಟ್ಟು ಚುನಾವಣೆ ನಡೆಸುವಂತೆ ಆಗ್ರಹಿಸಿದರು. ಗೋಷ್ಠಿಯಲ್ಲಿ ಪದಾಧಿಕಾರಿಗಳಾದ ತಾರಾ, ವರಕೋಡು ಕೃಷ್ಣೇಗೌಡ, ಭಾಗ್ಯಮ್ಮ, ಮಂಜುನಾಥ್, ಶ್ರೀನಿವಾಸ್ ಮತ್ತಿತರರಿದ್ದರು.

ಅಮೃತ್ ಗ್ರಾಪಂ ಯೋಜನೆಯಲ್ಲಿ ನಿಯಮ ಉಲ್ಲಂಘನೆ ಆರೋಪ

ನಾಳೆ ಮೈಸೂರು ಜಿಪಂ ಕಚೇರಿ ಮುಂದೆ ಪ್ರತಿಭಟನೆ

ಮೈಸೂರು, ಜು.12(ಜಿಎ)–ಅಮೃತ್ ಗ್ರಾಮ ಪಂಚಾಯಿತಿ ಯೋಜನೆ ಅಡಿಯಲ್ಲಿ ಮೈಸೂರು ಜಿಪಂ ವ್ಯಾಪ್ತಿಯ 32 ಗ್ರಾಪಂಗಳಿಗೆ ವಿವಿಧ ಸೌಕರ್ಯಗಳಿಗಾಗಿ ಬಿಡುಗಡೆ ಮಾಡಿರುವ 7.92 ಕೋಟಿ ಬಳಕೆ ವೇಳೆ ನಿಯಮ ಉಲ್ಲಂಘಿಸಲಾಗಿದೆ. ಹೀಗಾಗಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಜು.14ರ ಬೆಳಗ್ಗೆ 11ಗಂಟೆಗೆ ಜಿಪಂ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು ಎಂದು ಕನ್ನಡಾಂಬೆ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಬಿ.ಬಿ. ರಾಜಶೇಖರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಲಿ ಕಲಿ ಸಾಮಗ್ರಿ, ಸೋಲಾರ್ ಬೀದಿದೀಪ, ಕುಡಿಯುವ ನೀರು ಮೊದಲಾದ ಸೌಕರ್ಯಗಳಿಗಾಗಿ ಅಮೃತ್ ಗ್ರಾಮ ಪಂಚಾಯಿತಿ ಯೋಜನೆಯ ಅಡಿ 32 ಪಂಚಾಯಿತಿಗಳಿಗೆ 7.92 ಕೋಟಿ ಅನುದಾನ ಬಿಡುಗಡೆ ಮಾಡಿದೆ. ಆದರೆ, ಕೆಟಿಪಿಪಿ ನಿಯಮದಡಿ ಟೆಂಡರ್ ಪ್ರಕ್ರಿಯೆ ಮಾಡಬೇಕಿತ್ತು. ಆದರೆ, ಬಹುತೇಕ ಪಂಚಾಯಿತಿಗಳಲ್ಲಿ ಈ ನಿಯಮವನ್ನು ಪಾಲಿಸಿಲ್ಲ. ಬದಲಾಗಿ ನಿಯಮ ಉಲ್ಲಂಘನೆ ಮಾಡಿ ಒಂದೇ ಸಂಸ್ಥೆಗೆ ಟೆಂಡರ್ ನೀಡಿದ್ದಾರೆ. ಈ ಸಂಬಂಧ ಪತ್ರಿಕಾ ಪ್ರಕಟಣೆಯೂ ಹೊರಡಿಸಿಲ್ಲ ಎಂದು ದೂರಿದರು.

ಈ ಅಕ್ರಮದ ವಿರುದ್ಧ ಕೆ.ಆರ್.ನಗರ ತಾಲೂಕಿನ ಹೆಬ್ಬಾಳು ಗ್ರಾಪಂ ಸದಸ್ಯ ಜಲೇಂದ್ರ ಅವರು ಹೋರಾಟ ನಡೆಸುತ್ತ ಜಿಪಂ ಸಿಇಓಗೆ ದೂರು ಸಲ್ಲಿಸಿದ್ದಾರೆ. ಸಿಇಓ ಅವರು ಸಹ ದೂರಿನನ್ವಯ ವರದಿ ನೀಡುವಂತೆ ಆದೇಶಿಸಿದ್ದಾರೆ. ಈವರೆಗೂ ಯಾವುದೇ ವರದಿ ನೀಡಿಲ್ಲ. ಈ ಅಕ್ರಮದ ಬಗ್ಗೆ ಕ್ರಮ ಕೈಗೊಂಡಿಲ್ಲ. ಹೀಗಾಗಿ ಅವರು ಒಳಗೊಂಡಂತೆ ಈ ಪ್ರತಿಭಟನೆ ನಡೆಸಲಾಗುತ್ತಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಜಲೇಂದ್ರ, ಜಿ. ಪ್ರತಾಪ್, ವರಕೋಡು ಕೃಷ್ಣೇಗೌಡ, ಸಂತೋಷ್ ಉಪಸ್ಥಿತರಿದ್ದರು.

ಅಭಿನಂದನೆ...



ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ 2024–2029ನೇ ಸಾಲಿನ ಅವಧಿಗೆ ರಾಜ್ಯ ಉಪಾಧ್ಯಕ್ಷರಾಗಿ ಆಯ್ಕೆಯಾದ ಮೈಸೂರು ಜಿಲ್ಲಾ ಸರ್ಕಾರಿ ನೌಕರರ ಸಂಘದ ನಿಕಟಪೂರ್ವ ಜಿಲ್ಲಾಧ್ಯಕ್ಷ, ಹಾಲಿ ನಿರ್ದೇಶಕರೂ ಆದ ಗೋವಿಂದರಾಜು ಅವರು ರಾಜ್ಯಾಧ್ಯಕ್ಷ ಷಡಕ್ಷರಿ ಅವರನ್ನು ಅಭಿನಂದಿಸಿದರು. ಈ ವೇಳೆ ಮೈಸೂರು ಜಿಲ್ಲಾ ಸರ್ಕಾರಿ ನೌಕರರ ಸಂಘದ ನಿರ್ದೇಶಕರು, ಎಲ್ಲಾ ತಾಲೂಕಿನ ಅಧ್ಯಕ್ಷರು, ಕೈಗಾರಿಕಾ ತರಬೇತಿ, ಉದ್ಯೋಗ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಸೈಬರ್ ಸೆಕ್ಯೂರಿಟಿ, ಡಿಜಿಟಲ್ ಫೋರೆನ್ಸಿಕ್ ಕುರಿತು ಎರಡು ತಿಂಗಳ ಕೋರ್ಸ್ ಆರಂಭ

ಮೈಸೂರು, ಜು.12(ಜಿಎ)–ಮೈಸೂರು ಕೆಆರ್‌ಎಸ್ ರಸ್ತೆ(ರಾಯಲ್ ಇನ್ ಹೋಟೆಲ್)ಯಲ್ಲಿರುವ ಪರಿವರ್ತನ ಬ್ಯುಸಿನೆಸ್ ಶಾಲೆ ವತಿಯಿಂದ ಸೈಬರ್ ಸೆಕ್ಯೂರಿಟಿ ಮತ್ತು ಡಿಜಿಟಲ್ ಫೋರೆನ್ಸಿಕ್ ವಿಷಯ ಕುರಿತ ಎರಡು ತಿಂಗಳ ಕೋರ್ಸ್ ಆರಂಭಿಸಿದ್ದು, ಮೊದಲ ಬ್ಯಾಚ್ ತರಬೇತಿ ಜು.21ರಿಂದ ಆರಂಭವಾಗಲಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ನಿರ್ದೇಶಕ ಡಾ.ಸುಧಾಕರ್ ಈ ವಿಷಯ ತಿಳಿಸಿ, ತಮ್ಮ ಸಂಸ್ಥೆ ಸೈಬರ್ ಭದ್ರತೆ ಮೊದಲಾದ ವಿಷಯ ಕುರಿತಂತೆ ಈಗಾಗಲೇ ಕಾರ್ಯಾಗಾರ, ವಿಚಾರ ಸಂಕಿರಣ ಮೊದಲಾದವನ್ನು ನಡೆಸಿದೆ. ಸೈಬರ್ ಸೆಕ್ಯೂರಿಟಿ ಅತ್ಯಂತ ಹೆಚ್ಚು ಬೇಡಿಕೆಯುಳ್ಳ ಕೋರ್ಸ್ ಆಗಿದೆ. ಎರಡು ತಿಂಗಳ ತರಬೇತಿಗೆ 20 ಸಾವಿರ ಶುಲ್ಕವಿದೆ ಎಂದರು.

ವಿದ್ಯಾರ್ಥಿಗಳು, ಹಿರಿಯ ನಾಗರಿಕರು, ಇನ್ನಿತರ ಉದ್ಯೋಗಿಗಳು ಸಹಾ ಈ ಕೋರ್ಸ್‌ಗೆ ಪ್ರವೇಶ ಪಡೆಯಬಹುದಾಗಿದೆ. ಸೈಬರ್ ವಂಚನೆಯಿಂದ ಪಾರಾಗುವುದು ಹೇಗೆ, ಕೃತ್ಯ ಎಸಗಿದವರ ಜಾಡು ಹಿಡಿಯುವುದು ಹೇಗೆ ಎಂಬ ಮೊದಲಾದ ಉಪಯುಕ್ತ ಮಾಹಿತಿ ಪ್ರಾಯೋಗಿಕವಾಗಿ ನೀಡಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪ್ರೊ.ಎನ್. ರಾಮು, ಪ್ರೊ.ಪ್ರಕಾಶ್ ಉಪಸ್ಥಿತರಿದ್ದರು.

ಇಂದು ಸಸಿ ನೆಡುವ, ಸಂಗೀತ ಕಾರ್ಯಕ್ರಮ

ಮೈಸೂರು, ಜು.12(ಜಿಎ)– ಮೈಸೂರಿನ ನಾಟ್ಯ ಸ್ವರಾಂಜಲಿ ಸಂಗೀತ ಶಾಲೆ ವತಿಯಿಂದ ಜು.13ರಂದು ಮಧ್ಯಾಹ್ನ 3 ಗಂಟೆಗೆ ಶ್ರೀಧರ್ ಲೇಔಟ್ (ಎಸ್‌ಬಿಎಂ) ಬೋಗಾದಿಯಲ್ಲಿ ಸಸಿ ನೆಡುವ ಕಾರ್ಯಕ್ರಮ ಹಾಗೂ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷೆ ಪುಷ್ಪಲತಾ ಶಿವಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಲೆ ವತಿಯಿಂದ ಮೊದಲು ಸಂಗೀತ ಕಾರ್ಯಕ್ರಮಗಳನ್ನು ಮಾತ್ರ ಆಯೋಜಿಸಲಾಗುತ್ತಿತ್ತು. ಆದರೆ, ಈ ಬಾರಿಯಿಂದ ಸಮಾಜಮುಖಿ ಕೆಲಸ ಮಾಡುವ ನಿಟ್ಟಿನಲ್ಲಿ ಲೇಔಟ್‌ನಲ್ಲಿ ಸಸಿ ನೆಡುವ ಕಾರ್ಯಕ್ರಮ ಜೊತೆ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ.

ವಿಶ್ವ ಬ್ರಾಹ್ಮಣ ಮಹಾ ಸಂಸ್ಥಾನದ ಶ್ರೀ ಶಿವಸುಜ್ಞಾನ ತೀರ್ಥ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಶಾಸಕ ಜಿ.ಟಿ.ದೇವೇಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಟಿ.ಎಸ್.ಶ್ರೀವತ್ಸ ಆಗಮಿಸಲಿದ್ದಾರೆ. ವಿಶೇಷ ಅತಿಥಿಗಳಾಗಿ ಡಾ.ಪ್ರಕಾಶ್ ಸವಣೂರು, ಬಸಪ್ಪ, ಬಿ.ಎಲ್.ವೇದಮೂರ್ತಿ, ಡಾ.ಶಂಕರ್, ಜಿ.ಬಸವರಾಜು, ಜಿ.ಪ್ರಸನ್ನಮೂರ್ತಿ ಆಗಮಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಶಿವಕುಮಾರ್, ಸೌಮ್ಯ ಸುರೇಶ್, ಬಸವರಾಜ್, ಜಾಯ್ಸ್ ವೈಶಾಕ್ ಉಪಸ್ಥಿತರಿದ್ದರು.

ಇಂದು ಸ್ವರಾಲಯ ಸಾಂಸ್ಕೃತಿಕ ವೈಭವ

ಮೈಸೂರು, ಜು.12–ಮೈಸೂರಿನ ರಾಮಕೃಷ್ಣನಗರದಲ್ಲಿರುವ ಸ್ವರಾಲಯ ಸಂಗೀತ ಸಂಸ್ಥೆ, ಕನ್ನಡ–ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಜು.13ರಂದು ಸಂಜೆ 4 ಗಂಟೆಗೆ ನಾದಬ್ರಹ್ಮ ಸಂಗೀತ ಸಭಾ ಸಭಾಂಗಣದಲ್ಲಿ ಸ್ವರಾಲಯ ಸಾಂಸ್ಕೃತಿಕ ವೈಭವ 2025 ಇದರ ಮುಂದುವರೆದ ಭಾಗವನ್ನು ಆಯೋಜಿಸಲಾಗಿದೆ. ಸಂಗೀತ ಶಿಕ್ಷಕಿ ಶ್ರೀಮತಿ ವಿದುಷಿ ಹೆಚ್.ವಿ.ವಾಸವಾಂಬ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಮುಖ್ಯ ಅತಿಥಿಯಾಗಿ ಕಲಾವಿದೆ ವಿದುಷಿ ಸುಕನ್ಯಾ ಆಗಮಿಸಲಿದ್ದಾರೆ ಎಂದು ಸ್ವರಾಲಯ ಕಾರ್ಯದರ್ಶಿ ಹೆಚ್.ಎಸ್.ಶ್ರೀಕಾಂತಾಮಣಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ವಂತ ಖರ್ಚಿನಲ್ಲಿ ಮಾಜಿ ಕಾರ್ಪೋರೇಟರ್ ಕೆ.ವಿ.ಶ್ರೀಧರ್ ಸ್ವಚ್ಛತಾ ಕಾರ್ಯ





ಸ್ವಂತ ಖರ್ಚಿನಲ್ಲಿ ಮನೆ ಮನೆಯಿಂದ ಕಸ ಸಂಗ್ರಹಿಸಿ ವಿಲೇವಾರಿ ಮಾಡುವ ಮೂಲಕ ಮಾಜಿ ಕಾರ್ಪೋರೇಟರ್ ಕೆ.ವಿ.ಶ್ರೀಧರ್ ಜನರ ಸಂಕಷ್ಟಕ್ಕೆ ನೆರವಾದರು.

ಹೆಬ್ಬಾಳು ಬಡಾವಣೆಯ ನಿವಾಸಿಗಳ ಸಂಕಷ್ಟಕ್ಕೆ ನೆರವಾದ ಜನಪರ ಪ್ರತಿನಿಧಿ!

ಮೈಸೂರು, ಜು.12–ಸ್ವಂತ ಖರ್ಚಿನಲ್ಲಿ ನಾಲ್ಕು ಟ್ರ್ಯಾಕ್ಟರ್‌ಗಳ ಮೂಲಕ ಮನೆ ಮನೆಯಿಂದ ಕಸ ಸಂಗ್ರಹಿಸಿ ವಿಲೇವಾರಿ ಮಾಡುವ ಮೂಲಕ ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ. ಶ್ರೀಧರ್ ಇಂತಹ ಸಂಕಷ್ಟ ಪರಿಸ್ಥಿತಿಯಲ್ಲಿ ಸಾರ್ವಜನಿಕರ ಸಮಸ್ಯೆಗೆ ಸ್ಪಂದಿಸಿದ್ದಾರೆ.

ನಾನಾ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ನಗರಪಾಲಿಕೆ ಸಿಬ್ಬಂದಿ ಕಳೆದ ಮೂರು ದಿನಗಳಿಂದ ಮುಷ್ಕರ ಕೈಗೊಂಡಿದ್ದಾರೆ. ಪೌರಕಾರ್ಮಿಕರೂ ಈ ಹೋರಾಟದಲ್ಲಿ ಪಾಲ್ಗೊಂಡಿರುವ ಹಿನ್ನೆಲೆಯಲ್ಲಿ ನಗರದಲ್ಲಿ ಕಸ ಸಂಗ್ರಹ, ಸ್ವಚ್ಛತಾ ಕಾರ್ಯ ಸ್ಥಗಿತಗೊಂಡಿದೆ. ಇದರಿಂದ ಎಲ್ಲಿ ನೋಡಿದರೂ ತ್ಯಾಜ್ಯ ರಾಶಿಯೇ ರಾರಾಜಿಸುತ್ತಿದೆ. ಹಲವು ಮನೆಗಳಲ್ಲಿ ಕಸ ವಿಲೇವಾರಿ ಆಗದೇ ದುರ್ನಾತ ಬೀರುತ್ತಿದೆ. ಈ ಹಿನ್ನೆಲೆಯಲ್ಲಿ ಹೆಬ್ಬಾಳು ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಕೆ.ವಿ. ಶ್ರೀಧರ್ ತಮ್ಮ ಸ್ವಂತ ಹಣದಲ್ಲಿ ನಾಲ್ಕು ಟ್ರ್ಯಾಕ್ಟರ್‌ಗಳನ್ನು ಬಾಡಿಗೆಗೆ ಪಡೆದು, ಕೂಲಿ ಆಳುಗಳ ಮೂಲಕ ಬಡಾವಣೆ ಸ್ವಚ್ಛತಾ ಕಾರ್ಯ ಕೈಗೊಂಡಿದ್ದಾರೆ. ಹೆಬ್ಬಾಳು ಬಡಾವಣೆಯ ಮನೆ ಮನೆಗೆ ತೆರಳಿ ತಾವೇ ಮುಂದೆ ನಿಂತು ಕಸ ಸಂಗ್ರಹಿಸಿ ವಿಲೇವಾರಿ ಮಾಡುವ ಮೂಲಕ ಸಾರ್ವಜನಿಕರ ಸೇವೆಗೆ ಮುಂದಾಗಿದ್ದಾರೆ.

ಈ ಬಗ್ಗೆ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ಶ್ರೀಧರ್, ಕಳೆದ ಮೂರು ದಿನಗಳಿಂದ ಮೈಸೂರು ಮಹಾನಗರ ಪಾಲಿಕೆ ನೌಕರರು ಕೆಲಸ ಸ್ಥಗಿತಗೊಳಿಸಿದ್ದಾರೆ. ಹಾಗಾಗಿ ಜಾತಿ ಪ್ರಮಾಣಪತ್ರ, ಜನನ–ಮರಣ ಪ್ರಮಾಣ ಪತ್ರಗಳನ್ನು ಪಡೆಯಲು ಸಾಧ್ಯವಾಗದೇ ಜನರು ಪರದಾಡುವಂತಾಗಿದೆ. ಪಾಲಿಕೆ ಆಡಳಿತ ಸಂಪೂರ್ಣ ಕುಸಿದಿದೆ. ಇದರ ಜತೆಗೆ ಪೌರಕಾರ್ಮಿಕರು ಕೆಲಸ ಸ್ಥಗಿತಗೊಳಿಸಿದ್ದು, ಕಸ ವಿಲೇವಾರಿ ನಡೆಯದೇ ಎಲ್ಲೆಡೆ ತ್ಯಾಜ್ಯದ ರಾಶಿ ಬಿದ್ದಿದೆ. ಯುಜಿಡಿ ಸಂಬಂಧಿತ ಸಮಸ್ಯೆ ಉಲ್ಬಣಿಸಿದೆ. ಹಲವೆಡೆ ರಸ್ತೆಯ ಮೇಲೆ ಕೊಳಚೆ ನೀರು ಹರಿಯುತ್ತಿದೆ. ಇದರಿಂದ ಸೊಳ್ಳೆಗಳ ಕಾಟ ಹೆಚ್ಚಾಗಿದೆ. ಇದನ್ನೆಲ್ಲಾ ನೋಡಲಾಗದೇ ನನ್ನ ಸ್ವಂತ ಖರ್ಚಿನಲ್ಲಿ ನಾಲ್ಕು ಟ್ರ್ಯಾಕ್ಟರ್‌ಗಳನ್ನು ಬಾಡಿಗೆ ಪಡೆದು ಮನೆ ಮನೆಗಳಲ್ಲಿ ಕಸ ಸಂಗ್ರಹಿಸಿ, ನಮ್ಮ ಜನರ ಸಮಸ್ಯೆಗೆ ಸ್ಪಂದಿಸುವ ಕೆಲಸ ಮಾಡುತ್ತಿದ್ದೇನೆ ಎಂದು ತಿಳಿಸಿದರು.

ಸರ್ಕಾರದ ನಿರ್ಲಕ್ಷ್ಯ ಸರಿಯಲ್ಲ

"ಮೈಸೂರು ನಗರಪಾಲಿಕೆ ಸಿಬ್ಬಂದಿ ಮುಷ್ಕರ ಕೈಗೊಂಡಿದ್ದರೂ ಸರಕಾರ ಈ ಬಗ್ಗೆ ನಿರ್ಲಕ್ಷ್ಯ ಭಾವ ತೋರಿರುವುದು ಸರಿಯಲ್ಲ. ನಗರದಲ್ಲಿ ಸ್ವಚ್ಛತೆಯ ಸಮಸ್ಯೆ ದಿನೇ ದಿನೆ ಉಲ್ಬಣಿಸುತ್ತಿದೆ. ಈಗಾಗಲೇ ಕಳೆದ 2 ವರ್ಷಗಳಿಂದ ಪಾಲಿಕೆಯಲ್ಲಿ ಜನಪ್ರನಿಧಿಗಳಿಲ್ಲದೇ ಸಾರ್ವಜನಿಕರ ಸಮಸ್ಯೆಗೆ ಸೂಕ್ತ ಸ್ಪಂದನೆ ಇಲ್ಲದಂತಾಗಿದೆ. ಈ ನಡುವೆ ಪಾಲಿಕೆ ನೌಕರರ ಮುಷ್ಕರ ಆಡಳಿತ ವ್ಯವಸ್ಥೆ ಸಂಪೂರ್ಣವಾಗಿ ಕುಸಿಯುವಂತೆ ಮಾಡಿದೆ. ಇದು ಜನರನ್ನು ಇನ್ನಷ್ಟು ಹೈರಾಣಾಗುವಂತೆ ಮಾಡಿದೆ. ಇದರಿಂದ ಸಾರ್ವಜನಿಕರ ಕೆಲಸ ಕಾರ್ಯಗಳೂ ಆಗುತ್ತಿಲ್ಲ. ಇಷ್ಟಾದರೂ ಸರಕಾರ ಯಾವುದಕ್ಕೂ ಸ್ಪಂದಿಸದೇ ಇರುವುದು ಆಡಳಿತದ ನಿಷ್ಕ್ರಿಯತೆಯನ್ನು ತೋರುತ್ತದೆ. ಜನಸಾಮಾನ್ಯರ ಸೇವೆಗಿಂತ ತಮ್ಮ ಕುರ್ಚಿ ಉಳಿಸಿಕೊಳ್ಳಲು ಹೋರಾಡುವುದರಲ್ಲೇ ಮಗ್ನರಾಗಿರುವಂತೆ ತೋರುತ್ತಿದೆ. ಉಸ್ತುವಾರಿ ಸಚಿವರು, ಜಿಲ್ಲಾಡಳಿತ ಈ ಬಗ್ಗೆ ತುರ್ತು ಗಮನಹರಿಸಬೇಕು. ನೌಕರರ ಸಮಸ್ಯೆಗೆ ಸ್ಪಂದಿಸಿ, ಬೇಡಿಕೆಗಳನ್ನು ಬೇಗನೆ ಈಡೇರಿಸುವ ಕೆಲಸ ಮಾಡಬೇಕು. **–ಕೆ.ವಿ.ಶ್ರೀಧರ್, ಮಾಜಿ ಕಾರ್ಪೋರೇಟರ್**

ಮುಸ್ಲಿಂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಮೈಸೂರು, ಜು. 12–ಕರ್ನಾಟಕ ರಾಜ್ಯ ಸರ್ಕಾರಿ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘದ ಆಶ್ರಯದಲ್ಲಿ 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯ ಕೇಂದ್ರ ಪಠ್ಯದಲ್ಲಿ ಶೇ.85, ರಾಜ್ಯ ಪಠ್ಯದಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕಗಳಿಸಿದ ಮುಸ್ಲಿಂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ. ಅರ್ಹ ಅಭ್ಯರ್ಥಿಗಳು ಅಂಕಪಟ್ಟಿ, ಆಧಾರ್ ಕಾರ್ಡ್ ಪ್ರತಿಗಳು, ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರದೊಂದಿಗೆ ಅರ್ಜಿಯನ್ನು ಅಂಚೆ ಮೂಲಕ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸರ್ಕಾರಿ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘ, 2ನೇ ಹಂತ, ರಾಜೀವ್‌ನಗರ ಈ ವಿಳಾಸಕ್ಕೆ ಜು.23ರೊಳಗೆ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 98809 72551 ಸಂಪರ್ಕಿಸಬಹುದು.

ನಾಳೆ ಸಂಸ್ಥಾಪಕರ ದಿನಾಚರಣೆ

ಮೈಸೂರು,ಜು.12–ಮಹಾರಾಜ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜಿನ ಹಳೇ ವಿದ್ಯಾರ್ಥಿಗಳ ಸಂಘದಿಂದ ಜು. 14ರಂದು ಬೆಳಗ್ಗೆ 10 ಗಂಟೆಗೆ ಸಂಸ್ಥಾಪಕರ ದಿನಾಚರಣೆ, ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್ ಜಯಂತಿ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಕಾಲೇಜು ಮುಂಭಾಗ ಏರ್ಪಡಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಆದಿತ್ಯ ಅಧಿಕಾರಿ ಆಸ್ಪತ್ರೆ ಮ್ಯಾನೇಜಿಂಗ್ ಟ್ರಸ್ಟಿ ಡಾ.ಎನ್.ಚಂದ್ರಶೇಖರ್, ಮಹಾರಾಜ ಕಾಲೇಜು, ಲಲಿತ ಕಲೆಗಳ ಕಾಲೇಜು ನಿವೃತ್ತ ಪ್ರಿನ್ಸಿಪಾಲ್ ಡಾ.ಸಿ.ಎ. ಶ್ರೀಧರ್ ಭಾಗವಹಿಸಲಿದ್ದಾರೆ. ಮಹಾರಾಜ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜಿನ ಹಳೇ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಬಿ.ಎಸ್.ಶ್ರೀಧರರಾಜೇ ಅರಸ್ ಅಧ್ಯಕ್ಷತೆ ವಹಿಸಲಿದ್ದಾರೆ.

ಜು.16ರಿಂದ ಕೆ–ಸೆಟ್, ಯುಜಿಸಿ–ನೆಟ್ ಪರೀಕ್ಷೆಗಳ ತರಬೇತಿ ಶಿಬಿರ ಆರಂಭ

ಮೈಸೂರು, ಜು.12(ಬಿಎಲ್‌ಯು)–ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ನಡೆಯುವ 45 ದಿನಗಳ ಕೆ–ಸೆಟ್ ಮತ್ತು ಯುಜಿಸಿ–ನೆಟ್ ಪರೀಕ್ಷೆಗಳ ತರಬೇತಿ ಶಿಬಿರ ಜುಲೈ 16 ರಿಂದ ಆರಂಭವಾಗಲಿದೆ.

ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಆಯೋಜಿಸಿರುವ ಶಿಬಿರವನ್ನು ಯುಜಿಸಿ ಸ್ಟಿರಿಂಗ್ ಸಮಿತಿ ಅಧ್ಯಕ್ಷೆ ಪ್ರೊ.ಸುಷ್ಮಾ ಯಾದವ್ ಉದ್ಘಾಟಿಸುವರು. ಶಿಬಿರದಲ್ಲಿ ರಾಜ್ಯ ರಸ್ತೆ ಸಾರಿಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ ಪರೀಕ್ಷೆಯ ಸಿದ್ಧತೆ ಕುರಿತು ಅಭ್ಯರ್ಥಿಗಳಿಗೆ ಮಾರ್ಗದರ್ಶನ ಮಾಡಿ, ಶುಭ ಹಾರೈಸುವರು.

ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅಧ್ಯಕ್ಷತೆ ವಹಿಸಲಿದ್ದು, ಕುಲಸಚಿವ ಪ್ರೊ.ಎಸ್.ಕೆ.ನವೀನ್‌ಕುಮಾರ್ ಸೇರಿದಂತೆ ಹಲವು ಗಣ್ಯರು ಉದ್ಘಾಟನಾ ಸಮಾರಂಭದಲ್ಲಿ ಉಪಸ್ಥಿತರಿರುವರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.07.2025 ಭಾನುವಾರ, ಮಳೆ ನಕ್ಷತ್ರ: ಪುನರ್ವಸು, 6.07.2025 ರಿಂದ 19.07.2025 ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಶ್ರವಣ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ವೆರಿಕೋಸ್ ವೇನ್ಸ್ ಮತ್ತು ವೆರಿಕೋಸ್ ಅಲ್ಸರ್‌ಗಳ ಚಿಕಿತ್ಸಾ ಶಿಬಿರ, ಡಯಾಬಿಟಿಕ್ ರೆಟಿನೋಪತಿ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಕುತ್ತಿಗೆ ನೋವು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್.

■ **ಶ್ರೀ ಪ್ರಸನ್ನ ಸಾಯಿ ಮಂದಿರ :** 87ನೇ ಗುರುಪೂರ್ಣಿಮಾ ಮಹೋತ್ಸವ, ಬೆಳಗ್ಗೆ 7.30ಕ್ಕೆ ಕಾಕಡಾರತಿ, ಸಂಜೆ 7ಕ್ಕೆ ಉಯ್ಯಾಲೋತ್ಸವ, 7.30ಕ್ಕೆ ವಿದ್ವಾನ್ ರವಿಕುಮಾರ್ ಮತ್ತು ವೃಂದದವರಿಂದ ಸ್ವರಾಲಯ ವಾದ್ಯ ಸಂಗೀತ, ಸ್ಥಳ: ಶ್ರೀ ಪ್ರಸನ್ನ ಸಾಯಿ ಮಂದಿರ, ತ್ಯಾಗರಾಜ ರಸ್ತೆ, ಕೆ.ಆರ್. ಮೊಹಲ್ಲಾ.

■ **ಶ್ರೀ ಶಾರದಾಮೃತಂ ಧ್ಯಾನ ಸೇವಾ ಚಾರಿಟಬಲ್ ಟ್ರಸ್ಟ್, ಶ್ರೀ ದುರ್ಗಾ ಸಪ್ತಶತಿ ಋಷಿ ಪ್ರಜ್ಞಾ ಆಂದೋಲನ:** ನಾಗದೋಷ ಪರಿಹಾರಾರ್ಥವಾಗಿ ಉಚಿತ ಸಾಮೂಹಿಕ ಆಶ್ಲೇಷಾ ಬಲಿಪೂಜೆ, ಸ್ಥಳ: ಚಾಮುಂಡಿಬೆಟ್ಟದ ತಪ್ಪಲು ಬಳಿಯ ಜೇನುಗವಿ ಅವಧೂತ ಶ್ರೀ ನಂಜುಂಡಪ್ಪನವರ ಆಶ್ರಮ, ಬೆಳಗ್ಗೆ 8 ರಿಂದ.

■ **ಕ್ವಾಲಿಟಿ ಸರ್ಕಲ್ ಫೋರಂ ಇಂಡಿಯಾ, ಮೈಸೂರು ವಿಭಾಗ, ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು :** ಗುಣಮಟ್ಟ ಪರಿಕಲ್ಪನೆ ಕುರಿತು ಕಾರ್ಯಕ್ರಮ, ಮುಖ್ಯ ಅತಿಥಿಗಳು : ಕಾಲೇಜು ಪ್ರಿನ್ಸಿಪಾಲ್ ಡಾ.ಬಿ.ಸದಾಶಿವೇಗೌಡ, ನಾಗರಾಜ ಗರ್ಗೇಶ್ವರಿ, ಅಧ್ಯಕ್ಷತೆ : ಮೈಸೂರು ವಿಭಾಗದ ಅಧ್ಯಕ್ಷೆ ಆರ್.ಸಿ. ಸುಚಿತ್ರಾ, ಸ್ಥಳ: ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಆವರಣ, ಬೆಳಗ್ಗೆ 8.30ಕ್ಕೆ.

■ **ಜನಾಆಶಾ ಗ್ರೂಪ್ ಆಫ್ ಕಂಪನೀಸ್ :** 5ನೇ ವರ್ಷದ ವಾರ್ಷಿಕೋತ್ಸವ ಹಾಗೂ ಬೃಹತ್ ಅಭಿವೃದ್ಧಿ ಸಮ್ಮೇಳನ, ಅಧ್ಯಕ್ಷತೆ : ಅಭಿಷೇಕ್ ಪಾಂಡೆ, ಮುಖ್ಯ ಅತಿಥಿಗಳು : ಗಿರೀಶ್ ಆಲೂರ್, ಡ. ನಂದಕುಮಾರ್, ಎಸ್. ಶಿವಣ್ಣ, ನಂದೀಶ್, ಟಿ. ಶ್ರೀನಿವಾಸ, ಡಿ. ಚೆಲುವಕೃಷ್ಣಮೂರ್ತಿ, ಜಿ. ಜಯಪ್ರಕಾಶ್, ವೈ.ಎಂ. ಮೂರ್ತಿ, ಜಿ.ಎ. ಶಿವಕುಮಾರ್, ಗುರುಪ್ರಸಾದ್ ಮಹಾಬಲ, ಎ.ಜೆ. ಪ್ರಕಾಶ್, ಶ್ರೀಮತಿ ಕೆ. ಪ್ರಭಾವತಿ, ಸ್ಥಳ: ಕರ್ನಾಟಕ ಕಲಾಮಂದಿರ, ಬೆಳಗ್ಗೆ 10ಕ್ಕೆ.

■ **ಶ್ರೀರಾಂಪುರದ ಬಿದಿರು ಸ್ಪೋರ್ಟ್ಸ್ ಅಸೋಸಿಯೇಷನ್ :** ಒಡೆಯರ್ ಕಪ್ ಬ್ಯಾಡ್ಮಿಂಟನ್ ಪಂದ್ಯಾವಳಿ, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಮುಖ್ಯ ಅತಿಥಿಗಳು : ಮಾಜಿ ಮೇಯರ್ ಶಿವಕುಮಾರ್, ಉದ್ಯಮಿ ಚೇತನ್ ವಿಶ್ವನಾಥ್, ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಆಟಗಾರ ಸುನೀಲ್ ಗ್ಲಾಡ್ಸನ್, ಸ್ಥಳ: ಕೆ.ಸಿ. ಬಡಾವಣೆಯ ಫ್ರೆಂಡ್ಸ್ ಸ್ಪೋರ್ಟ್ಸ್ ಜೋನ್ ಬ್ಯಾಡ್ಮಿಂಟನ್ ಅಕಾಡೆಮಿ, ಬೆಳಗ್ಗೆ 10ಕ್ಕೆ.

■ **ಅನುಭೂತಿ ಮತ್ತು ಚಾರು ಸಾಂಸ್ಕೃತಿಕ ಪ್ರತಿಷ್ಠಾನ :** ವೀರಲೋಕ ಬುಕ್ಸ್‌ನ 6 ಕೃತಿಗಳ ಮರು ಬಿಡುಗಡೆ ಸಮಾರಂಭ, ಉಪಸ್ಥಿತರು : ವೀರಕಪುತ್ರ ಶ್ರೀನಿವಾಸ, ಕೃತಿಗಳ ಕುರಿತು : ಡಾ. ವಿನೋದ, ಜಿ. ಸೀತಾರಾಂ, ಮಧುರಾಣಿ ಎಚ್.ಎಸ್., ಡಾ. ತ್ರಿವೇಣಿ, ಕುಸುಮಾ ಆಯರಹಳ್ಳಿ, ದಿವಿಜ ಭಾರದ್ವಾಜ್, ಸ್ಥಳ: ಚಾರು ಸಾಂಸ್ಕೃತಿಕ ಪ್ರತಿಷ್ಠಾನ, ಬೆಳಗ್ಗೆ 10ಕ್ಕೆ.

■ **ಸೌಗಂಧಿಕಾ ಪ್ರಕಾಶನ :** ಕೃತಿ ಬಿಡುಗಡೆ ಸಮಾರಂಭ, ಉದ್ಘಾಟನೆ : ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ ಅಧ್ಯಕ್ಷ ಎಂ.ಬಿ. ಸಂತೋಷ್, ಕೃತಿ ಕುರಿತು : ಡಾ. ಮಲ್ಲಿನಾಥ ಎಸ್. ತಳವಾರ, ಅಧ್ಯಕ್ಷತೆ : ಸಾಹಿತಿ ಗಣೇಶ್ ಪ್ರಸಾದ್ ಪಾಂಡೇಲು, ಮುಖ್ಯ ಅತಿಥಿಗಳು : ಸಿರಿಗನ್ನಡ ವೇದಿಕೆ ನಿಕಟಪೂರ್ವ ರಾಜ್ಯಾಧ್ಯಕ್ಷೆ ಶ್ರೀಮತಿ ಎ. ಹೇಮಗಂಗಾ, ಸಾಹಿತಿ ಡಾ. ಸೌಗಂಧಿಕಾ ವಿ. ಜೋಯಿಸ್, ಸ್ಥಳ: ಐಡಿಯಲ್ ಜಾವಾ ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10ಕ್ಕೆ.

■ **ಸಂಸ್ಕೃತಿ ಬುಕ್ ಏಜೆನ್ಸೀಸ್ :** ಆಕಾಶವಾಣಿ ನಿವೃತ್ತ ನಿರ್ದೇಶಕ ಡಾ. ಎಂ.ಎಸ್. ವಿಜಯಾಹರನ್ ಅವರ 'ಆಕಾಶವಾಣಿಯ ಆ ದಿನಗಳು' ಕೃತಿ ಲೋಕಾರ್ಪಣೆ ಸಮಾರಂಭ, ಉಪಸ್ಥಿತರು : ದೂರದರ್ಶನ (ನಿವೃತ್ತ) ಉಪನಿರ್ದೇಶಕ ಎ.ಎಸ್. ಚಂದ್ರಮೌಳಿ, ಆಕಾಶವಾಣಿ ನಿವೃತ್ತ ನಿರ್ದೇಶಕರಾದ ಡಾ. ಎಂ.ಎಸ್. ವಿಜಯಾಹರನ್, ಅಧ್ಯಕ್ಷತೆ : ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ಜಯಲಕ್ಷ್ಮಿಪುರಂ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಭಾವಸಾರ ಕ್ಷತ್ರಿಯ ಪದವೀಧರರ ಸಂಘ, ಶ್ರೀ ವಿಠ್ಠಲ ರುಕ್ಮಿಣಿ ಚಾರಿಟಬಲ್ ಟ್ರಸ್ಟ್ :** 43ನೇ ವಾರ್ಷಿಕ ಸನ್ಮಾನ, ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿ ವೇತನ ವಿತರಣಾ ಸಮಾರಂಭ, ಮುಖ್ಯ ಅತಿಥಿಗಳು : ಕರ್ನಾಟಕ ಉಚ್ಚ ನ್ಯಾಯಾಲಯ ನ್ಯಾಯಾಧೀಶ ಸಂಜೀವಕುಮಾರ್ ಹಂಚಾಟಿ, ಸನ್ಮಾನಿತರು : ಡಾ. ಎಲ್.ಡಿ. ಸತ್ಯನಾರಾಯಣ ಲಾಲೆ, ಪ್ರಾಂಶುಪಾಲ ಎನ್.ಆರ್. ರಾಜೇಶ್ ನಾಯಕ್, ಅಧ್ಯಕ್ಷತೆ : ಮೈಸೂರು ಜಿಲ್ಲಾ ಭಾವಸಾರ ಕ್ಷತ್ರಿಯ ಪದವೀಧರರ ಸಂಘದ ಅಧ್ಯಕ್ಷ ಪಿ.ಎ. ಮಂಜುನಾಥ್ ಪತಂಗೆ, ವಿಶೇಷ ಅತಿಥಿಗಳು : ಸಂಘದ ನಿಕಟಪೂರ್ವ ಅಧ್ಯಕ್ಷ ಎಸ್. ಶಂಕರರಾವ್ ಅಂಚಳಕರ್, ಸ್ಥಳ: ಶ್ರೀ ವಿಠ್ಠಲ ರುಕ್ಮಿಣಿ ಕನ್‌ವೆನ್‌ಷನ್ ಹಾಲ್, ವಿಜಯನಗರ 3ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಶ್ರೀಮತಿ ಮಲ್ಲಿಕಾ ಮಳವಳ್ಳಿ ಅಭಿನಂದನಾ ಸಮಿತಿ:** ಸಾಹಿತಿ ಮಲ್ಲಿಕಾ ಮಳವಳ್ಳಿಯವರ ಅಭಿನಂದನಾ ಕೃತಿ ಸದಾಚಾರ ಸಂಪನ್ನೆ ಬಿಡುಗಡೆ ಮತ್ತು ಅಭಿನಂದನಾ ಸಮಾರಂಭ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ಮಾಜಿ ಉಪಸಭಾಪತಿ ಮರಿತಿಬ್ಬೇಗೌಡ, ಕೃತಿ ಬಿಡುಗಡೆ: ಉದ್ಯಮಿ ಮಾಣಿಕ್‌ಚಂದ್ ಬಲ್ಡೋಟ, ಕೃತಿ ಪರಿಚಯ: ಸಾಹಿತಿ ಡಾ.ಪ್ರದೀಪ್‌ಕುಮಾರ್ ಹೆಬ್ರಿ, ಎಡಿಸಿ ಡಾ.ಪಿ.ಶಿವರಾಜು, ಸಾಹಿತಿ ಡಾ.ಎಸ್.ಶಿವರಾಜಪ್ಪ, ಅಭಿನಂದಿತರು: ಸಾಹಿತಿ ಮಲ್ಲಿಕಾ, ಪ್ರಾಸ್ತಾವಿಕ ನುಡಿ: ಡಾ.ಎಚ್.ಎಸ್.ಮುದ್ದೇಗೌಡ, ಸ್ಥಳ: ಮಂತ್ರ ಮಹರ್ಷಿ ಸಭಾಭವನ, ಸರಸ್ವತಿಪುರಂ, ಬೆಳಗ್ಗೆ 11ಕ್ಕೆ.

■ **ಶ್ರೀ ವಿಜಯ ವಿನಾಯಕ ಸೇವಾ ಸಮಿತಿ :** ಸನ್ಮಾನ ಸಮಾರಂಭ, ವಾರ್ಷಿಕ ಸಭೆ, ಉದ್ಘಾಟನೆ : ಶಾಸಕ ಜಿ.ಟಿ.ದೇವೇಗೌಡ, ಮುಖ್ಯ ಅತಿಥಿಗಳು : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಕೆ.ಆರ್. ರಕ್ಷಿತ್, ಹೂಟಗಳ್ಳಿ ನಗರಸಭೆ ಪೌರಾಡಳಿತ ಆಯುಕ್ತ ಬಿ.ಎನ್. ಚಂದ್ರಶೇಖರ್, ಸೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ. ಮುನಿಗೋಪಾಲರಾಜು, ಮೈಸೂರು ನಗರಪಾಲಿಕೆ ವಿಭಾಗೀಯ ನಿಯಂತ್ರಣಾಧಿಕಾರಿ ಹೆಚ್.ಟಿ. ವೀರೇಶ್, ಸಹಾಯಕ ಕಾರ್ಯಪಾಲಕ ಅಭಿಯಂತರ ಮಧುಸೂದನ್, ಆರಕ್ಷಕ ನಿರೀಕ್ಷಕ ಎಸ್.ಪಿ. ಸುರೇಶ್‌ಕುಮಾರ್, ಅಧ್ಯಕ್ಷತೆ : ಸಮಿತಿ ಅಧ್ಯಕ್ಷ ಎನ್.ಬಿ. ಜಗದೀಶ್, ಸ್ಥಳ: ಗಣಪತಿ ಪ್ರತಿಷ್ಠಾಪನಾ ಸ್ಥಳ, ವಿಜಯನಗರ 4ನೇ ಹಂತ, ಬೆಳಗ್ಗೆ 11ಕ್ಕೆ.

■ **ಶ್ರೀ ವಾಸವಿ ಆರ್ಯವೈಶ್ಯ ಅಭಿವೃದ್ಧಿ ಸಮಿತಿ :** 36ನೇ ವರ್ಷದ ಗಾಳಿಪಟ ಹಬ್ಬದ ಅಂಗವಾಗಿ ಸಂತೋಷ ಸಂಜೆ, ಸ್ಥಳ: ದೊಡ್ಡಕೆರೆ ಮೈದಾನ, ಮಧ್ಯಾಹ್ನ 3ಕ್ಕೆ.

■ **ನಾಟ್ಯ ಸ್ವರಾಂಜಲಿ ಸಂಗೀತ ಶಾಲೆ :** ಸಸಿ ನೆಡುವ ಕಾರ್ಯಕ್ರಮ ಹಾಗೂ ಸಂಗೀತ ಕಾರ್ಯಕ್ರಮ, ಸಾನ್ನಿಧ್ಯ : ವಿಶ್ವ ಬ್ರಾಹ್ಮಣ ಮಹಾಸಂಸ್ಥಾನದ ಶ್ರೀ ಶಿವಸುಜ್ಞಾನತೀರ್ಥ ಸ್ವಾಮೀಜಿ, ಉದ್ಘಾಟನೆ : ಶಾಸಕ ಜಿ.ಟಿ. ದೇವೇಗೌಡ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಅಧ್ಯಕ್ಷತೆ : ನಾಟ್ಯ ಸ್ವರಾಂಜಲಿ ಸಂಗೀತ ಶಾಲೆ ಅಧ್ಯಕ್ಷೆ ಶ್ರೀಮತಿ ಪುಷ್ಪಲತಾ ಶಿವಕುಮಾರ್, ಸ್ಥಳ: ಶ್ರೀಧರ್ ಲೇಔಟ್ (ಎಸ್‌ಬಿಎಂ), ಬೋಗಾಧಿ, ಮಧ್ಯಾಹ್ನ 3ಕ್ಕೆ.

■ **ಸ್ವರಾಲಯ ಸಂಗೀತ ಸಂಸ್ಥೆ, ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಸ್ವರಾಲಯ ಸಾಂಸ್ಕೃತಿಕ ವೈಭವ 2025, ಉದ್ಘಾಟನೆ : ಸಂಗೀತ ಶಿಕ್ಷಕಿ ಶ್ರೀಮತಿ ವಿದುಷಿ ಹೆಚ್.ವಿ.ವಾಸವಾಂಬ, ಮುಖ್ಯ ಅತಿಥಿಗಳು : ಕಲಾವಿದೆ ವಿದುಷಿ ಸುಕನ್ಯಾ, ಅಧ್ಯಕ್ಷತೆ : ಸ್ವರಾಲಯ ಸಂಸ್ಥಾಪಕ ಅಧ್ಯಕ್ಷೆ ಶ್ರೀಮತಿ ವಿದುಷಿ ಸುಮಾ ಹರಿನಾಥ್, ವಿಶೇಷ ಆಹ್ವಾನಿತರು : ವಸಂತಮಹಲ್‌ನ ಉಪನ್ಯಾಸಕಿ ಹಾಗೂ ಗಾಯಕಿ ಕೆ.ಸವಿತಾ, ಅಮೆರಿಕಾದಲ್ಲಿ ವಾಸವಾಗಿರುವ ಕಲಾಪೋಷಕರಾದ ಡಾ. ಸ್ವರ್ಣಂಭ ಲೋಕೇಶ್, ಸ್ಥಳ: ನಾದಬ್ರಹ್ಮ ಸಂಗೀತ ಸಭಾ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 4ಕ್ಕೆ.

■ **ಇನ್ನರ್ ವ್ಹೀಲ್ ಕ್ಲಬ್ ಆಫ್ ಮೈಸೂರು ಗೋಲ್ಡ್:** ಮೈಸೂರು ರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು: ಸಂಸದ ಯದುವೀರ್ ಒಡೆಯರ್, ಗೌರವ ಅತಿಥಿಗಳು: ಸಿಂಡಿಕೇಟ್ ಸದಸ್ಯ ಡಾ.ಚಂದ್ರಶೇಖರ್, ಇನ್ನರ್ ವ್ಹೀಲ್ ಕ್ಲಬ್ ಆಫ್ ಮೈಸೂರು ಗೋಲ್ಡ್ ಅಧ್ಯಕ್ಷೆ ಡಾ.ಪ್ರೇಮಾ ರವಿ, ಗಿರೀಶ್, ಡಾ.ಜೆ.ದುಂಡರಾಜ, ಹೆಚ್.ಲೀಲಾವತಿ, ಸ್ಥಳ: ರೋಟರಿ ವೆಸ್ಟ್, ಕಾಮಾಕ್ಷಿ ಆಸ್ಪತ್ರೆ ಎದುರು, ಸಂಜೆ 4.30ಕ್ಕೆ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ :** ವಿದ್ವಾನ್ ಗಣೇಶ್‌ಶರ್ಮಾರಿಂದ ಶ್ರೀಮದ್ ಭಾಗವತ ಪ್ರವಚನ, ಸ್ಥಳ: ಶ್ರೀ ರಾಮಮಂದಿರದ ಆವರಣ, ಶಿವರಾಂಪೇಟೆ, ಸಂಜೆ 6.30ರಿಂದ 7.45ರವರೆಗೆ.

■ **ರಂಗಾಯಣ :** ಸಿಜಿಕೆ ನೆನಪಿನ ಗ್ರೀಷ್ಮ ರಂಗೋತ್ಸವ–2025, ವರ್ಕ್‌ಶಾಪ್ ಇನ್ ಮೈಸೂರು ಫಾರ್ ಥಿಯೇಟರ್ ತಂಡದಿಂದ ಅಹಲ್ಯ ಬಿ.ಡಿ. ನಾಟಕ ಪ್ರದರ್ಶನ, ಮೂಲ : ಹೆನ್ರಿಕ್ ಇಬ್ಸನ್, ಅನುದಾದ : ಎಸ್. ಸುರೇಂದ್ರನಾಥ್, ನಿರ್ದೇಶನ : ಯತೀಶ್ ಎನ್. ಕೊಳ್ಳೇಗಾಲ, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ.

■ **ನಾಲ್ವಡಿ ಸೋಶಿಯಲ್, ಕಲ್ಚರಲ್ ಅಂಡ್ ಎಜುಕೇಷನಲ್ ಟ್ರಸ್ಟ್ :** ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಜೀವನಾಧಾರಿತ ನಾಟಕ ಆಳಿದ ಮಾಸ್ವಾಮಿಗಳು, ವಸ್ತ್ರ ವಿನ್ಯಾಸ, ನಿರ್ದೇಶನ : ದಿನೇಶ್ ಚಮ್ಮಾಳಿಗೆ (ನೀನಾಸಂ), ಸ್ಥಳ: ಕಿರುರಂಗಮಂದಿರ, ಸಂಜೆ 7ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಪಿ.ಎಸ್.ರಂಜನಿ ಹಾಗೂ ಸದಾಶಿವ ಪಾಟೀಲ್, ವ್ಯಾಖ್ಯಾನ–ಪ್ರೊ.ಮೈಸೂರು ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ ಸ್ಥೂಲಕಾಯದವರನ್ನು ಕಾಡುವ ಶ್ವಾಸಕೋಶದ ತೊಂದರೆಗಳು, ಪರಿಹಾರ ಮತ್ತು ಚಿಕಿತ್ಸೆ ಕುರಿತು ಶ್ವಾಸಕೋಶ ತಜ್ಞರಾದ ಡಾ. ಆರ್. ಲಕ್ಷ್ಮೀನರಸಿಂಹನ್ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ, 10.00 ಕೇಳಿಗಿಳಿಗಳೇ–ಕಥೆ ಕೇಳು ಪುಟ್ಟ, ಪ್ರಸ್ತುತಿ–ಬಿ.ಜಿ.ಕವಿತಾ, 10.30 KRISH-TRISH and Balty boy ನಾವು ಭಾರತೀಯರು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪ: ಚೈತನ್ಯ ಚಿಲುಮೆ–ಅಂತರಾಷ್ಟ್ರೀಯ ಲಾನ್ ಟೆನ್ನಿಸ್‌ನ ಉದಯೋನ್ಮುಖ ಆಟಗಾರ್ತಿ ಪದ್ಮಪ್ರಿಯಾ ರಮೇಶ್ ಕುಮಾರ್ ಅವರೊಂದಿಗೆ ಮಾತುಕತೆ. ಪ್ರಸ್ತುತಿ–ಬಿ.ದಿಗ್ವಿಜಯ್ **ಮಧ್ಯಾಹ್ನ:** 12.00 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ–ಪುಟ್ಟಸಿದ್ದಯ್ಯ ಮತ್ತು ಸಂಗಡಿಗರಿಂದ ಮಂಟೇಸ್ವಾಮಿ ಪದ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ರೇಣುಕಾ ನಾಕೋಡ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ನಕ್ಷತ್ರ ಲೋಕ–ಖ್ಯಾತ ಚಿತ್ರಸಾಹಿತಿ ಕವಿರಾಜ್ ಅವರೊಂದಿಗೆ ನಡೆಸಿದ ಸಂದರ್ಶನದ ಮರುಪ್ರಸಾರ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ–ಆಲತ್ತೂರ್ ಸಹೋದರರಿಂದ ಹಾಡುಗಾರಿಕೆ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.51ಕೃಷಿರಂಗ : ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ–ಎನ್.ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿ ಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ–ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ–ಆರ್.ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ನಾದಮೀಮಾಸೆ–ಕರ್ನಾಟಕ ಶಾಸ್ತ್ರೀಯ ಸಂಗೀತದ ರೂಪು ರೇಷೆ ಕುರಿತ ಸರಣಿ ಸಂಶೋಧನೆ ಹಾಗೂ ಸಾಹಿತ್ಯ–ಡಾ.ಸಿ.ಎ.ಶ್ರೀಧರ್, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು–ಎಂ.ಎಸ್.ವೆಂಕಟರಾವ್ ಕುಪ್ಪ, 9.30 ಸವಿನೆನಪು, 10.00 ರವಿವಾಸರೀಯ ಅಖಿಲ ಭಾರತ ಸಂಗೀತ ಸಭಾ–ಪೊಪುರಿ ಗೌರಿನಾಥ್–ಕರ್ನಾಟಕ ಶಾಸ್ತ್ರೀಯ ಸಂಗೀತ


ಆಕ್ಸ್‌ಫರ್ಡ್ ಮಟ್ಟದ ವಿದ್ವತ್‌ಪೂರ್ಣ ಡಿಕ್ಷ್ನರಿಗಳ ರೂಪಿಸಿದ ಹೆಗ್ಗಳಿಕೆ ಮೈಸೂರು ವಿವಿ ಪ್ರಸಾರಾಂಗದ್ದು

ದೇಶ-ವಿದೇಶಗಳ 400ಕ್ಕೂ ಅಧಿಕ ಪರಾಮರ್ಶನ ಗ್ರಂಥಗಳ ಸಂರಕ್ಷಣೆ





ದೇಶ-ವಿದೇಶಗಳ ನಿಘಂಟುಗಳನ್ನು ಸಂರಕ್ಷಣೆ ಮಾಡುತ್ತಿರುವ ಪ್ರಸಾರಾಂಗದ ನಿರ್ದೇಶಕ ಡಾ.ನಂಜಯ್ಯ ಹೊಂಗನೂರು



ಪ್ರಸಾರಾಂಗ ಹೊರತಂದಿರುವ ಇಂಗ್ಲಿಷ್-ಕನ್ನಡ ಡಿಕ್ಷ್ನರಿಗಳು

ಮೈಸೂರು, ಜು.12(ಎಂಕೆ)- ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯ ಹೊರತಂದಿರುವ ವಿದ್ವತ್‌ಪೂರ್ಣ ಇಂಗ್ಲಿಷ್-ಕನ್ನಡ ನಿಘಂಟುಗಳ ತಯಾರಿಕೆಗೆ ದೇಶ-ವಿದೇಶಗಳಿಂದ ತರಿಸಲಾಗಿದ್ದ 400 ಕ್ಕೂ ಹೆಚ್ಚು ಪರಾಮರ್ಶನ ಗ್ರಂಥಗಳನ್ನು ಸಂರಕ್ಷಣೆ ಮಾಡಲಾಗಿದೆ.

ಇಂಗ್ಲಿಷ್-ಕನ್ನಡ ನಿಘಂಟುಗಳನ್ನು ಮುದ್ರಿಸಿ, ಪ್ರಕಟಿಸುವಲ್ಲಿ ದೇಶದ ಗಮನ ಸೆಳೆದಿದ್ದ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗವು ನಿಘಂಟುಗಳ ರಚನೆಗಾಗಿ ಅಧ್ಯಯನ ಮಾಡಿದ್ದ ಹಳೆಯ ಪರಾಮರ್ಶನ ಗ್ರಂಥಗಳನ್ನು ಸುರಕ್ಷಿತವಾಗಿರಿಸಲಾಗಿದೆ.

ಮೈಸೂರು ವಿವಿಯಲ್ಲಿ 1940ರ ಸುಮಾರಿಗೆ ಇಂಗ್ಲಿಷ್-ಕನ್ನಡ ನಿಘಂಟು ತರುವ ಕಾರ್ಯ ಆರಂಭಗೊಂಡಿತು. ಮೊದಲಿಗೆ 1480 ಪುಟಗಳ ಒಂದು ನಿಘಂಟು ತರಲಾಯಿತು. ಕಾಲಾಂತರದಲ್ಲಿ ನಾಲ್ಕು ಸಂಪುಟಗಳಾಗಿ ರೂಪಿತವಾದ ನಿಘಂಟುಗಳು ಶ್ರೇಷ್ಠತೆ, ಉತ್ಕೃಷ್ಟತೆಯಲ್ಲಿ ಹೆಸರುವಾಸಿಯಾಗಿವೆ.

ಲಂಡನ್, ಇಂಗ್ಲೆಂಡ್, ನ್ಯೂಯಾರ್ಕ್, ಯುಎಸ್‌ಎ, ಆಕ್ಸ್‌ಫರ್ಡ್ ವಿವಿ, ಹಿಟನ್ ಬರ್ಗ್, ಕೇಂಬ್ರಿಡ್ಜ್, ಚಿಕಾಗೋ, ಹಾಂಗ್ ಕಾಂಗ್, ಸಿಂಗಾಪೂರ್, ನೆದರ್‌ಲ್ಯಾಂಡ್, ದೆಹಲಿ, ವಾರಣಾಸಿ, ಮದ್ರಾಸ್, ಅಸ್ಸಾಂ, ಪೂನಾ, ಪ್ರಯಾಗ್, ಬಾಂಬೆ, ಅಲಹಾಬಾದ್, ಕಲ್ಕತ್ತ ವಿವಿಗಳಿಂದ ಅಂದಿನ ವಿದ್ವಾಂಸರು, ಭಾಷಾ ತಜ್ಞರು, ಪ್ರಸಿದ್ಧ ಲೇಖಕರು ಜಗತ್ತಿನ ಪತ್ರ ವ್ಯವಹಾರ ನಡೆಸಿ ಡಿಕ್ಷ್ನರಿಗಳನ್ನು ತರಿಸಿಕೊಂಡು ಅಧ್ಯಯನ ನಡೆಸಿದ್ದರು.

ಸುಮಾರು 55 ವರ್ಷಗಳ ಕಾಲ ಅಧ್ಯಯನ ನಡೆಸಿ(1878-1933ರವರೆಗೆ) ಆಕ್ಸ್‌ಫರ್ಡ್ ಡಿಕ್ಷ್ನರಿ ರೂಪಿಸಲಾಗಿದೆ. ಇದರ ಮೂಲ ಕೃತಿಯೂ ಪ್ರಸಾರಾಂಗದಲ್ಲಿದ್ದು, ಆಕ್ಸ್‌ಫರ್ಡ್ ಡಿಕ್ಷ್ನರಿ ಅಷ್ಟೇ ವಿದ್ವತ್‌ಪೂರ್ಣವಾದ ಇಂಗ್ಲಿಷ್-ಕನ್ನಡ ಡಿಕ್ಷ್ನರಿಗಳನ್ನು ಮೈಸೂರು ವಿವಿ ಹೊರತಂದಿದೆ ಎಂದು ಅನೇಕ ವಿದ್ವಾಂಸರು ಮೆಚ್ಚುಗೆ ವ್ಯಕ್ತಪಡಿಸಿದ್ದರು. ಇಂತಹ ನಿಘಂಟುಗಳ ತಯಾರಿಕೆಗೆ ಪೂರಕವಾದ ಹಳೆಯ ಪರಾಮರ್ಶನ ಗ್ರಂಥಗಳ ಸಂರಕ್ಷಣೆಗೆ ಪ್ರಸಾರಾಂಗ ಮುಂದಾಗಿದೆ.

ಅತ್ಯಮೂಲ್ಯ ನಿಘಂಟುಗಳು ಪತ್ತೆ: ಪ್ರಸಾರಾಂಗದ ಗೋದಾಮಿನಲ್ಲಿ ಅಜ್ಞಾತವಾಗಿದ್ದ ಸುಮಾರು 400ಕ್ಕೂ ಹೆಚ್ಚು ಅಮೂಲ್ಯವಾದ ನಿಘಂಟುಗಳನ್ನು ಪತ್ತೆ ಮಾಡಿ, ಸಂರಕ್ಷಣೆ ಮಾಡಲಾಗಿದೆ. ಈ ನಿಘಂಟುಗಳ ಅಧ್ಯಯನ ನಡೆಸಿಯೇ ಮೈಸೂರು ವಿವಿಯಿಂದ ಇಂಗ್ಲಿಷ್-ಕನ್ನಡ ನಿಘಂಟು ಹೊರತರಲಾಗಿತ್ತು ಎಂದು ಪ್ರಸಾರಾಂಗ ನಿರ್ದೇಶಕ ಡಾ.ನಂಜಯ್ಯ ಹೊಂಗನೂರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಪ್ರಸಾರಾಂಗದ ಗೋದಾಮಿನಲ್ಲಿ ದಾಸ್ತಾನು ಪರಿಶೀಲನೆ ಮಾಡುವಾಗ ಅಜ್ಞಾತವಾಗಿ ಉಳಿದಿದ್ದ ಡಿಕ್ಷ್ನರಿಗಳು ಪತ್ತೆಯಾದವು. ಸುಮಾರು 2 ದಶಕಗಳಿಂದ ಈ ಗ್ರಂಥಗಳು ಯಾರ ಗಮನಕ್ಕೂ ಬಂದಿರಲಿಲ್ಲ. ಅವುಗಳನ್ನೂ ಪರಿಶೀಲನೆ ಮಾಡಿದಾಗ ಮೈಸೂರು ವಿವಿಯು ಡಿಕ್ಷ್ನರಿ ತಯಾರಿಸುವಾಗ ತರಿಸಲಾದ ಪುಸ್ತಕಗಳೆಂಬುದು ಗಮನಕ್ಕೆ ಬಂತು. ಅವುಗಳಲ್ಲಿ ಸುಸ್ಥಿತಿಯಲ್ಲಿರುವ 381 ಪರಾಮರ್ಶನ ಗ್ರಂಥಗಳನ್ನು ಸಂರಕ್ಷಣೆ ಮಾಡಿದ್ದೇವೆ ಎಂದು ತಿಳಿಸಿದರು.

ಅಧ್ಯಯನಕ್ಕೆ ಮಹತ್ವದ ಆಕರಗಳಾಗಿವೆ: ತಂತ್ರಜ್ಞಾನದ ಬಳಕೆಯೇ ಇಲ್ಲದ ಕಾಲದಲ್ಲಿ ಮೈಸೂರು ವಿವಿಯ ವಿದ್ವಾಂಸರು ಅತ್ಯಂತ ಶ್ರಮವಹಿಸಿ ಜಗತ್ತಿನ ಡಿಕ್ಷ್ನರಿಗಳನ್ನು ಪರಾಮರ್ಶನ ನಡೆಸಿ ಎಲ್ಲ ಜ್ಞಾನಶಾಸ್ತ್ರವನ್ನು ಬಳಸಿಕೊಂಡು ದೇಶದ ವಿಶ್ವವಿದ್ಯಾನಿಲಯಗಳು ತಿರುಗಿ ನೋಡುವಂತೆ ಇಂಗ್ಲಿಷ್-ಕನ್ನಡ ನಿಘಂಟು ರೂಪಿಸಿದ್ದಾರೆ. ಈ ಡಿಕ್ಷ್ನರಿ ಭಾರತದ ದೇಶಿ ಭಾಷೆಗಳ ವಿವಿಗಳಲ್ಲೇ ಮೊದಲು. ನಿಘಂಟುಗಳು ಮಾನವರ ಸಂಸ್ಕೃತಿ, ಭಾಷೆ, ಸಾಹಿತ್ಯ, ಸಮಾಜ, ಚರಿತ್ರೆ, ಪರಂಪರೆಗಳ ಅಧ್ಯಯನಕ್ಕೆ ಮಹತ್ವದ ಆಕರಗಳಾಗಿವೆ. ಕಣ್ಮರೆಯಾಗಿದ್ದ ಅತ್ಯಮೂಲ್ಯ ಪರಾಮರ್ಶನ ಗ್ರಂಥಗಳ ಸಂರಕ್ಷಣೆಗೆ ಪ್ರಸಾರಾಂಗದ ಅಧೀಕ್ಷಕ ಚನ್ನಬಸಪ್ಪ, ಸಿಬ್ಬಂದಿಗಳಾದ ವಿನೋದ, ಪ್ರದೀಪ್, ಅನುಷಾ ಸೇರಿ ಎಲ್ಲ ಸಿಬ್ಬಂದಿ ವರ್ಗ ಸಹಕರಿಸಿದ್ದಾರೆ ಎಂದು ತಿಳಿಸಿದರು.

ಪ್ರಸಾರಾಂಗದಲ್ಲಿ ಡಿಕ್ಷ್ನರಿಗಳು ಲಭ್ಯ...!

ಮೈಸೂರು ವಿವಿ ಹೊರತಂದಿರುವ ವಿದ್ವತ್‌ಪೂರ್ಣ ಇಂಗ್ಲಿಷ್-ಕನ್ನಡ ನಿಘಂಟುಗಳು ಪ್ರಸಾರಾಂಗದಲ್ಲಿ ಲಭ್ಯವಿದ್ದು, ಕಡಿಮೆ ಬೆಲೆಗೆ ಓದುಗರು ಕೊಂಡುಕೊಳ್ಳಬಹುದಾಗಿದೆ. ನಾಲ್ಕು ಸಂಪುಟಗಳ ಇಂಗ್ಲಿಷ್-ಕನ್ನಡ ಡಿಕ್ಷ್ನರಿಗೆ 800 ರೂ., ನಾಲ್ಕು ಸಂಪುಟವನ್ನು ಒಳಗೊಂಡ ಸಮಗ್ರ ಆವೃತ್ತಿ ನಿಘಂಟಿಗೆ 500 ರೂ. ಬೆಲೆ ನಿಗದಿಪಡಿಸಲಾಗಿದೆ. 200 ರೂ. ಸಮಗ್ರ ಡಿಕ್ಷ್ನರಿಯೂ ಲಭ್ಯವಿದೆ.

ಪ್ರಸಾರಾಂಗಕ್ಕೆ 92 ವರ್ಷ...!

ರಾಷ್ಟ್ರಕವಿ ಕುವೆಂಪು ಅವರ ಶೈಕ್ಷಣಿಕ ಕನಸಿನ ಸಂಸ್ಥೆಯಾದ ಮೈಸೂರು ವಿವಿ ಪ್ರಸಾರಾಂಗ 1933ರಲ್ಲಿ ಆರಂಭವಾಯಿತು. 92 ವರ್ಷಗಳ ಇತಿಹಾಸವುಳ್ಳ ಪ್ರಸಾರಾಂಗವೂ ವಿದ್ವತ್ ವಲಯಕ್ಕೆ ಸೀಮಿತವಾದ ಜ್ಞಾನಧಾರೆಯನ್ನು ಗ್ರಾಮಾಂತರ ಪ್ರದೇಶಕ್ಕೂ ವಿಸ್ತರಿಸಿದ ಹಿರಿಮೆಯನ್ನು ಹೊಂದಿದೆ. ಈ ಮೂಲಕ ಜಾಗತಿಕ ಮಟ್ಟದಲ್ಲಿಯೂ ಶ್ಲಾಘನೆಗೆ ಪಾತ್ರವಾಗಿದೆ. ಮೌಲಿಕ ಪ್ರಕಟಣೆಗಳಿಂದ ಶೈಕ್ಷಣಿಕ ವಲಯದಲ್ಲಿ ತನ್ನ ಖ್ಯಾತಿಯನ್ನು ಹೆಚ್ಚಿಸಿಕೊಂಡಿದೆ.

ಪ್ರೊ.ಪ್ರಭುಶಂಕರ ಅವರ ನೇತೃತ್ವದಲ್ಲಿ ಪರಿಷ್ಕರಣಾ ಕಾರ್ಯ

1964ರಲ್ಲಿ ಮೈಸೂರು ವಿವಿ ಪ್ರಸಾರಾಂಗದ ನಿರ್ದೇಶಕರಾಗಿದ್ದ ಪ್ರೊ.ಪ್ರಭುಶಂಕರ ಅವರ ನೇತೃತ್ವದಲ್ಲಿ ಡಿಕ್ಷ್ನರಿಗಳ ಪರಿಷ್ಕರಣೆ ಕಾರ್ಯ ಸುಮಾರು 38 ವರ್ಷಗಳ ಕಾಲ ನಡೆದಿದ್ದು, ಪರಿಷ್ಕರಣಾ ಸಲಹಾ ಮಂಡಳಿ ಸಮಿತಿಯಲ್ಲಿ ಡಾ.ಶಿವರಾಮ ಕಾರಂತ, ಕು.ಶಿ.ಹರಿದಾಸ ಭಟ್ಟ, ಆರ್.ಸಿ. ಹಿರೇಮಠ, ಎಸ್.ಎಸ್.ಭೂಸನೂರು ಮಠ, ಪ್ರೊ.ಎಸ್.ವಿ.ರಂಗಣ್ಣ, ಎನ್.ಬಸವರಾಧ್ಯ ಮೊದಲಾದವರಿದ್ದರು. ಹಾಗೆಯೇ ವಿವಿಯಿಂದ ಇಂಗ್ಲಿಷ್-ಕನ್ನಡ ನಿಘಂಟಿನ ಮೊದಲ ಸಂಪುಟ ಎ-ಡಿ 1989ರಲ್ಲಿ, ಎರಡನೇ ಸಂಪುಟ ಇ-ಎಲ್ 1996ರಲ್ಲಿ, ಎಂ-ಆರ್ 3ನೇ ಸಂಪುಟ 1999ರಲ್ಲಿ, ಎಸ್-ಜೆಡ್ 4ನೇ ಸಂಪುಟ 2004ರಲ್ಲಿ ಪ್ರಕಟವಾಯಿತು.

ಕೆ.ಆರ್.ಆಸ್ಪತ್ರೆಯಲ್ಲಿ ರೋಗಿಗಳಿಗೆ ನಿಗದಿತ ಸಮಯಕ್ಕೇ ಊಟ-ತಿಂಡಿ ವ್ಯವಸ್ಥೆ!



ಕೆ.ಆರ್.ಆಸ್ಪತ್ರೆಯ ಹಳೆ ಜಯದೇವ ಕಟ್ಟಡದಲ್ಲಿರುವ ಒಳರೋಗಿಗಳಿಗೆ ಶನಿವಾರ ರಾತ್ರಿ 7 ಗಂಟೆ ನಂತರ ಊಟ ನೀಡುತ್ತಿರುವುದನ್ನು ಕಾಣಬಹುದು

ಮೈಸೂರು ಮಿತ್ರ ಫಲಶ್ರುತಿ

ಮೈಸೂರು, ಜು.12(ಎಂಕೆ)- ಮೈಸೂರಿನ ಕೆ.ಆರ್.ಆಸ್ಪತ್ರೆ, ಚೆಲುವಾಂಬ, ಟ್ರಾಮಾಕೇರ್, ಪಿಕೆಟಿಬಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ಒಳರೋಗಿಗಳಿಗೆ ಸೂಕ್ತ ಸಮಯದಲ್ಲಿ ಆಹಾರ ಪೂರೈಕೆಗೆ ಕ್ರಮವಹಿಸಲಾಯಿತು.

'ಮೈಸೂರು ಮಿತ್ರ'ನಲ್ಲಿ ಜು.11 ರಂದು 'ಕೆ.ಆರ್.ಆಸ್ಪತ್ರೆ ರೋಗಿಗಳಿಗೆ ರಾತ್ರಿ ಊಟ ಮಧ್ಯಾಹ್ನವೇ ಪೂರೈಕೆ! ಒಣಗಿ ತಂಗಳಾದ ಅನ್ನ-ಸಾಂಬಾರ್ ಕಸದ ಬುಟ್ಟಿಗೆ' ಶೀರ್ಷಿಕೆಯಡಿ ವರದಿ ಪ್ರಕಟವಾಗಿತ್ತು. ಇದರಿಂದ ಎಚ್ಚೆತ್ತ ಆಸ್ಪತ್ರೆ ಅಧಿಕಾರಿ ವರ್ಗ ಹಾಗೂ ಗುತ್ತಿಗೆದಾರರು ರಾತ್ರಿ ವೇಳೆಯ ಊಟವನ್ನು ರಾತ್ರಿ 7 ಗಂಟೆಯ ನಂತರ ನೀಡಲು ಮುಂದಾಗಿದ್ದಾರೆ.

ರಾತ್ರಿ ಊಟವನ್ನು ಮಧ್ಯಾಹ್ನ 3-30 ರಿಂದಲೇ ನೀಡಲಾಗುತ್ತದೆ. ರಾತ್ರಿ ಚಳಿ ಇರಲಿದ್ದು, ತಣ್ಣಗಾಗಿರುವ ಊಟವನ್ನು ತಿನ್ನಲಾಗದೆ ಹಲವು ಮಂದಿ ಕಸದ ಬುಟ್ಟಿಗೆ ಸುರಿದು ಪೋಲು ಮಾಡುತ್ತಿದ್ದರು. ಹಾಗಾಗಿ ಒಳರೋಗಿಗಳು ಬಿಸಿ ಊಟವನ್ನು ಹೊರಗಡೆ ಹೋಟೆಲ್‌ಗಳಿಂದ ತರಿಸಿಕೊಳ್ಳುವುದು ಸಾಮಾನ್ಯವಾಗಿತ್ತು.

ವೇಳಾಪಟ್ಟಿಯಂತೆ ವಿತರಣೆ: ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಕೆ.ಆರ್.ಆಸ್ಪತ್ರೆ ವೈದ್ಯಕೀಯ ಅಧೀಕ್ಷಕಿ ಹೆಚ್.ಟಿ.ಶೋಭಾ, ಒಳರೋಗಿಗಳಿಗೆ ಆಸ್ಪತ್ರೆಯ ವೇಳಾಪಟ್ಟಿಯಂತೆ ಬೆಳಗ್ಗೆ, ಮಧ್ಯಾಹ್ನ ಹಾಗೂ ರಾತ್ರಿ ವೇಳೆ ಊಟ-ತಿಂಡಿ ನೀಡಲಾಗುವುದು. ಡಯಾಬಿಟೀಸ್ ರೋಗಿಗಳಿಗೆ ತೊಂದರೆಯಾಗಬಾರದು ಎಂಬ ಕಾರಣಕ್ಕೆ ರಾತ್ರಿ ವೇಳೆ ನೀಡುವ ಊಟವನ್ನು ಸ್ವಲ್ಪ ಮುಂಚಿತವಾಗಿಯೇ ನೀಡಲಾಗುತ್ತಿತ್ತು ಆದರೆ, ಸಾಕಷ್ಟು ಮಂದಿ ಅನ್ನ ವ್ಯರ್ಥ ಮಾಡುತ್ತಿರುವುದನ್ನು ತಿಳಿದು ವೇಳಾಪಟ್ಟಿಯಂತೆ ಊಟ-ತಿಂಡಿ ನೀಡುವಂತೆ ಗುತ್ತಿಗೆದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಒಳರೋಗಿಗಳ ಅನುಕೂಲತೆಗಾಗಿ ರಾತ್ರಿ ಊಟ ಸ್ವಲ್ಪ ಬೇಗ ನೀಡಲಾಗುತ್ತಿತ್ತು. ಆದರೆ, ವ್ಯರ್ಥ ಮಾಡುತ್ತಿರುವ ಕುರಿತು ಗಮನಕ್ಕೆ ಬಂದಿರಲಿಲ್ಲ. ಹಾಗಾಗಿ ವೇಳಾಪಟ್ಟಿಯಂತೆ ನಿಗದಿತ ಸಮಯಕ್ಕೆ ಊಟ-ತಿಂಡಿ ನೀಡಲಾಗುವುದು. ಹಾಗೆಯೇ ಮಧ್ಯಾಹ್ನದ ವೇಳೆ ಮೊಸರು, ರಾತ್ರಿ ವೇಳೆ ಮಜ್ಜಿಗೆಯನ್ನು ನೀಡಲಾಗುವುದು.
- ಪುನೀತ್, ಗುತ್ತಿಗೆದಾರರು, ಜಗದೀಶ್ ಟ್ರೇಡಿಂಗ್ ಕಂಪನಿ

ಡಿಕೆಶಿಗೆ ಆತುರವೂ ಇಲ್ಲ; ಆತಂಕವೂ ಇಲ್ಲ

ಶಾಸಕರ ಬಲಾಬಲ ಪ್ರದರ್ಶಿಸುವ ವ್ಯಕ್ತಿತ್ವ ಅವರದಲ್ಲ; ಮಾಜಿ ಸಂಸದ ಡಿ.ಕೆ.ಸುರೇಶ್ ಸ್ಪಷ್ಟನೆ



ಬೆಂಗಳೂರು, ಜು.12- ಕೆಪಿಸಿಸಿ ಅಧ್ಯಕ್ಷರು ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಆತುರದಲ್ಲೂ ಇಲ್ಲ, ಆತಂಕದಲ್ಲೂ ಇಲ್ಲ ಎಂದು ಡಿಕೆಶಿ ಸಹೋದರರೂ ಆದ ಮಾಜಿ ಸಂಸದ ಡಿ.ಕೆ ಸುರೇಶ್ ಸ್ಪಷ್ಟಪಡಿಸಿದರು.

ಬೆಂಗಳೂರಿನಲ್ಲಿ ಮಾತನಾಡಿದ ಅವರು, ನಾಯಕತ್ವ ಬದಲಾವಣೆ ಬಗ್ಗೆ ಮಾತನಾಡಬಾರದು ಎಂದು ಹೈಕಮಾಂಡ್ ನಿರ್ದೇಶನವಿದ್ದರೂ ಸಿಎಂ ಮೂರು ಬಾರಿ ನಾನೇ 5 ವರ್ಷ ಸಿಎಂ ಎಂದು ಹೇಳಿರುವ ಬಗ್ಗೆ ಕೇಳಿದಾಗ, ಕಾಂಗ್ರೆಸ್ ಪಕ್ಷದಲ್ಲಿ ಯಾವುದೇ ಜಗಳವಿಲ್ಲ. ಕಾಂಗ್ರೆಸ್ ಪಕ್ಷದ ವರಿಷ್ಠರು, ಮುಖ್ಯಮಂತ್ರಿಗಳು, ಅಧ್ಯಕ್ಷರು ಹಾಗೂ ಡಿಸಿಎಂ ಆಗಿರುವ ಡಿ.ಕೆ. ಶಿವ ಕುಮಾರ್ ಅವರು ಕೂಡ ಈಗಾಗಲೇ ಈ ವಿಚಾರವಾಗಿ ಸ್ಪಷ್ಟನೆ ನೀಡಿದ್ದು, ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆ ಎಂದು ಹೇಳಿದ್ದಾರೆ.

ಆದರೂ ಮಾಧ್ಯಮಗಳಿಗೆ ಯಾಕೆ ಗೊಂದಲವಿದೆ ಎಂದು ಗೊತ್ತಿಲ್ಲ. ಶಿವಕುಮಾರ್ ಅವರು ಪಕ್ಷ ಕೊಟ್ಟಿರುವ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ಪಕ್ಷದ ಕಾರ್ಯಕರ್ತನಾಗಿ ಮುನ್ನಡೆಸುತ್ತಿದ್ದಾರೆ. ಪಕ್ಷದ ಸೂಚನೆಯಂತೆ ಅವರು ಕೆಲಸ ಮಾಡುತ್ತಿದ್ದಾರೆ. ಇದರ ಹೊರತಾಗಿ ಹೆಚ್ಚಿನ ವಿಚಾರ ಏನೂ ಇಲ್ಲ ಎಂದರು.

ಇದೇ ನನ್ನ ಕೊನೆ ಚುನಾವಣೆ ಎಂದಿದ್ದ ಸಿದ್ದರಾಮಯ್ಯ ಅವರು ಈಗ 2028ಕ್ಕೂ ನನ್ನದೇ ನೇತೃತ್ವದಲ್ಲಿ ಚುನಾವಣೆ ಎಂದು ಹೇಳಿರುವ ಬಗ್ಗೆ ಕೇಳಿದಾಗ, ಸಿದ್ದರಾಮಯ್ಯ ಅವರು ಹಿರಿಯ ನಾಯಕರು. ರಾಜಕೀಯದಲ್ಲಿ ನಿವೃತ್ತಿ ಇಲ್ಲ. ರಾಜಕೀಯ ಇಚ್ಛಾಶಕ್ತಿ ಇರಬೇಕು. ಮುಖ್ಯಮಂತ್ರಿಗಳಿಗೆ ಇಚ್ಛಾಶಕ್ತಿ ಇದೆ. ಹೀಗಾಗಿ ಅವರು ಕೆಲವು ವಿಚಾರವನ್ನು ನಿಮ್ಮ ಜೊತೆ ಹಂಚಿಕೊಂಡಿರಬಹುದು ಎಂದು ತಿಳಿಸಿದರು. ಮುಖ್ಯಮಂತ್ರಿ ಕುರ್ಚಿ ಖಾಲಿ ಇಲ್ಲ ಎಂದಮೇಲೆ ಸಿಎಂ ಪದೇ ಪದೇ ನಾನೇ ಸಿಎಂ ಎಂದು ಹೇಳುವ ಅಗತ್ಯವಿದೆಯೋ ಎಂದು ಕೇಳಿದಾಗ, ಈ ವಿಚಾರವಾಗಿ ಮಾತನಾಡಲು ನಾನು ಬಹಳ ಸಣ್ಣವನು ಎಂದರು.

ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರಾಗಿದ್ದಾರೆ. ಶಾಸಕರ ಬೆಂಬಲ ಕೇಳುವ ಸಮಯವಲ್ಲ. ಶಿವಕುಮಾರ್ ಅವರದ್ದು ಬಲಾಬಲ ಪ್ರದರ್ಶನ ಮಾಡುವ ವ್ಯಕ್ತಿತ್ವವಲ್ಲ. ಶಿವಕುಮಾರ್ ಅವರು ಕಾಂಗ್ರೆಸ್ ಪಕ್ಷದ ಪ್ರಾಮಾಣಿಕ ಕಾರ್ಯಕರ್ತ. ಕಾಂಗ್ರೆಸ್ ವರಿಷ್ಠರಿಗೆ ಗೌರವ ನೀಡುವ ವ್ಯಕ್ತಿತ್ವ ಹೊಂದಿರುವವರು. ಅವರು ಬೇರೆಯವರಿಗೆ ಮಾರ್ಗದರ್ಶಕರಾಗಿ ಕೆಲಸ ಮಾಡುತ್ತಿದ್ದಾರೆ ಎಂದರು.

ಡಿ.ಕೆ.ಶಿವಕುಮಾರ್ ಅವರು ನಂಬುವ ಗುರುಗಳೇ ಈ ಅವಧಿಯಲ್ಲಿ ಅವರು ಸಿಎಂ ಆಗುತ್ತಾರೆ ಎಂದು ಹೇಳಿದ್ದಾರೆ ಎಂದು ಕೇಳಿದಾಗ, ನನಗೆ ಈ ವಿಚಾರ ಗೊತ್ತಿಲ್ಲ. ಪ್ರತಿಯೊಬ್ಬರಿಗೂ ಒಬ್ಬೊಬ್ಬರು ಸಿಎಂ ಆಗಲಿ ಎಂದು ಆಸೆ ಪಡುತ್ತಾರೆ. ಪ್ರತಿ ಜಿಲ್ಲೆ, ಸಮುದಾಯದವರು ನಮ್ಮವರು ಸಿಎಂ ಆಗಲಿ ಎಂದು ಆಶಯ ವ್ಯಕ್ತಪಡಿಸುವುದು ಸಹಜ. ಇದು ಇಂದು ನಡೆದಿರುವ ವಿಚಾರವಲ್ಲ. ಪ್ರತಿ ಅವಧಿಯಲ್ಲೂ ಇಂತಹ ಬೆಳವಣಿಗೆ ನಡೆದುಕೊಂಡು ಬಂದಿದೆ ಎಂದರು.

ಮಹಿಳೆ ಅಡ್ಡಗಟ್ಟಿ ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ದೋಚಿದ ಖದೀಮರು

ಮೈಸೂರು, ಜು.12- ಇಬ್ಬರು ಖದೀಮರು ಸ್ಕೂಟರ್‌ನಲ್ಲಿ ತೆರಳುತ್ತಿದ್ದ ಮಹಿಳೆಯನ್ನು ಅಡ್ಡಗಟ್ಟಿ ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ಹಾಗೂ ಮೊಬೈಲ್ ಕಿತ್ತುಕೊಂಡು ಪರಾರಿಯಾದ ಘಟನೆ ಮೈಸೂರಿನ ಗೋಕುಲಂ ಬಡಾವಣೆಯಲ್ಲಿ ಶುಕ್ರವಾರ ನಡೆದಿದೆ. ಗೋಕುಲಂ 2ನೇ ಹಂತದ ನಿವಾಸಿ ಬಿ.ವಿದ್ಯಾಶ್ರೀ ಅವರ 40 ಗ್ರಾಂ ಮಾಂಗಲ್ಯ ಸರ, 25 ಗ್ರಾಂನ ಇನ್ನೊಂದು ಸರ ಸೇರಿ ಒಟ್ಟು 2.30 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಹಾಗೂ 15 ಸಾವಿರ ಬೆಲೆಯ ಓಪೋ ಮೊಬೈಲ್ ಅನ್ನು ಖದೀಮರು ಕಿತ್ತುಕೊಂಡು ಹೋಗಿದ್ದಾರೆ.

ವಿದ್ಯಾಶ್ರೀ ಅವರು ಶುಕ್ರವಾರ ಮಧ್ಯಾಹ್ನ 3 ಗಂಟೆ ವೇಳೆಯಲ್ಲಿ ಗೋಕುಲಂ ಸ್ಕೂಲ್ ಪಾರ್ಕ್ ಹತ್ತಿರ ಸ್ಕೂಟರ್‌ನಲ್ಲಿ ಹೋಗುತ್ತಿದ್ದಾಗ ಮೊಬೈಲ್ ರಿಂಗ್ ಆಗಿದೆ. ಯಾರೋ ಫೋನ್ ಮಾಡಿದ್ದಾರೆಂದು ನೋಡಲು ಸ್ಕೂಟರ್ ನಿಲ್ಲಿಸಲು ವೇಗ ತಗ್ಗಿಸಿದ್ದಾರೆ. ಅಷ್ಟರಲ್ಲೇ ಬೈಕ್‌ನಲ್ಲಿ ಬಂದ ಇಬ್ಬರು ಹೆಲ್ಮೆಟ್‌ಧಾರಿ ಖದೀಮರು ವಿದ್ಯಾಶ್ರೀ ಅವರ ಸ್ಕೂಟರ್ ಅಡ್ಡ ಹಾಕಿ, ಚಿನ್ನದ ಸರಗಳು ಹಾಗೂ ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದಾರೆ.

ಈ ಸಂಬಂಧ ಜಯಲಕ್ಷ್ಮೀಪುರಂ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಖದೀಮರ ಪತ್ತೆಗೆ ಶೋಧ ಮುಂದುವರೆಸಿದ್ದಾರೆ.

ಡಿಕೆಶಿ ದಂಪತಿಯಿಂದ ಶಿರಡಿ ಸಾಯಿಬಾಬಾಗೆ ವಿಶೇಷ ಪೂಜೆ



ಕೆಪಿಸಿಸಿ ಅಧ್ಯಕ್ಷರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಪತ್ನಿ ಉಷಾ ಅವರೊಂದಿಗೆ ಶನಿವಾರ ಮಹಾರಾಷ್ಟ್ರದ ಶ್ರೀಕ್ಷೇತ್ರ ಶಿರಡಿಯಲ್ಲಿ ಸಾಯಿಬಾಬಾ ದರ್ಶನ ಮಾಡಿ, ವಿಶೇಷ ಪೂಜೆ ಸಲ್ಲಿಸಿದರು.

ಶೇ.95ರಷ್ಟು ವಿದ್ಯಾರ್ಥಿಗಳು ಶಾರೀರಿಕವಾಗಿ ಚಟುವಟಿಕೆಯಿಂದಿಲ್ಲ

ಕೆಮ್ಸ್ ಅಧ್ಯಯನ ಆತಂಕ!



ಬೆಂಗಳೂರು, ಜು.12- ಕರ್ನಾಟಕ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಅಸೋಸಿಯೇಟೆಡ್ ಮ್ಯಾನೇಜ್ ಮೆಂಟ್ಸ್ ಕೆಮ್ಸ್ ನಡೆಸಿದ ಸಮೀಕ್ಷೆಯಿಂದ ಶಾಲೆಗಳಲ್ಲಿ ಶೇ.95ಕ್ಕೂ ಹೆಚ್ಚು ವಿದ್ಯಾರ್ಥಿಗಳು ನಿಗದಿತ ದೈಹಿಕ ತರಬೇತಿ ಅವಧಿಗಳಲ್ಲಿಯೂ ದೈಹಿಕ ಚಟುವಟಿಕೆ ಗಳಲ್ಲಿ ಭಾಗವಹಿಸುವುದಿಲ್ಲ ಎಂದು ತಿಳಿದುಬಂದಿದೆ.

ಶಾಲಾ ಮಕ್ಕಳಲ್ಲಿ ಹೆಚ್ಚುತ್ತಿರುವ ಆರೋಗ್ಯ ಅಪಾಯಗಳ ಹಿನ್ನೆಲೆಯಲ್ಲಿ ಈ ಸಮೀಕ್ಷೆಯನ್ನು ನಡೆಸಲಾಯಿತು. ಇತ್ತೀಚಿನ ವರ್ಷಗಳಲ್ಲಿ ಮಕ್ಕಳಲ್ಲಿ ಹೆಚ್ಚು ಆಯಾಸ, ಕಡಿಮೆ ರಕ್ತದೊತ್ತಡ ಮತ್ತು ಆರಂಭಿಕ ಹೃದಯ ಸಂಬಂಧಿತ ಅಪಾಯಗಳು ತೀವ್ರಏರಿಕೆ ಕಂಡುಬಂದಿದೆ ಎಂದು ಉಲ್ಲೇಖಿಸಲಾಗಿದೆ

ಶಾಲಾ ಮಟ್ಟದ ವರ್ಷಗಳ ಅವಲೋಕನದ ಆಧಾರದ ಮೇಲೆ ವಿದ್ಯಾರ್ಥಿಗಳ ಆರೋಗ್ಯ ಹದಗೆಡಲು ಹೆಚ್ಚುತ್ತಿರುವ ಜಡ ಜೀವನಶೈಲಿ, ಕಳಪೆ ಆಹಾರ ಪದ್ಧತಿ ಮತ್ತು ಮನೆಯಲ್ಲಿ ಮತ್ತು ಶಾಲೆಗಳಲ್ಲಿ ದೈಹಿಕ ಚಟುವಟಿಕೆಯ ಕೊರತೆಯೇ ಕಾರಣ ಎಂದು ಹೇಳುತ್ತದೆ.

ಶೇಕಡಾ 95ಕ್ಕೂ ಹೆಚ್ಚು ವಿದ್ಯಾರ್ಥಿಗಳು ದೈಹಿಕ ಚಟುವಟಿಕೆಗಳಲ್ಲಿ ಭಾಗವಹಿಸುವುದಿಲ್ಲ. ವ್ಯಾಯಾಮ ಮತ್ತು ಸಾಂಸ್ಕೃತಿಕ ಒಳಗೊಳ್ಳುವಿಕೆಗೆ ರಚನಾತ್ಮಕ ಅವಕಾಶಗಳನ್ನು ವಿದ್ಯಾರ್ಥಿಗಳು ನಿರ್ಲಕ್ಷಿಸುತ್ತಿದ್ದಾರೆ. ಅನೇಕರು ದೈಹಿಕ ಅಥವಾ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಿಕೆಯಲ್ಲಿ ಸಂಪೂರ್ಣ ನಿರಾಸಕ್ತಿ ತೋರಿಸುತ್ತಿದ್ದಾರೆ. ಪಿಟಿ ತರಗತಿಗಳಲ್ಲಿ ಮಕ್ಕಳು ಸುಮ್ಮನೆ ಕೂರುವುದು ಅಥವಾ ಇತರ ಬೇರೆ ಕೆಲಸಗಳನ್ನು ಮಾಡುವುದು. ಆ ಅವಧಿಯಲ್ಲಿ ಬೇರೆ ಶಿಕ್ಷಕರು ತರಗತಿ ತೆಗೆದುಕೊಳ್ಳುವುದು ಮಾಡುತ್ತಾರೆ ಎಂದು ಕೆಮ್ಸ್ ಸಮೀಕ್ಷೆ ಹೇಳಿದೆ.

ನನ್ನ ಶಾಲಾ ಭೇಟಿಯ ಸಮಯದಲ್ಲಿಯೂ ವಿದ್ಯಾರ್ಥಿಗಳು ದೈಹಿಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವುದು ಕಡಿಮೆ ಕಾಣುತ್ತದೆ. ವಿದ್ಯಾರ್ಥಿಗಳು ಜಾಗಿಂಗ್, ವ್ಯಾಯಾಮ ಅಥವಾ ಯೋಗ ಆಗಿರಬಹುದು ಅಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಹೆಚ್ಚಿನ ಶಾಲೆಗಳಲ್ಲಿ, ಶೇಕಡಾ 1ರಿಂದ ಶೇಕಡಾ 2ರಷ್ಟು ವಿದ್ಯಾರ್ಥಿಗಳು ಸಹ ಇದನ್ನು ನಿಯಮಿತವಾಗಿ ಮಾಡುವುದನ್ನು ಕಾಣುವುದಿಲ್ಲ ಎಂದು ಕೆಮ್ಸ್‌ನ ಪ್ರಧಾನ ಕಾರ್ಯದರ್ಶಿ ಶಶಿಕುಮಾರ್ ಹೇಳಿದ್ದಾರೆ.

ಮಕ್ಕಳ ಇಂತಹ ವರ್ತನೆಗೆ ಮನೆಯಲ್ಲಿ ಪೋಷಕರೂ ಕಾರಣವಾಗಿರುತ್ತಾರೆ. ಸಂಸ್ಕರಿಸಿದ ಮತ್ತು ಜಂಕ್ ಆಹಾರಗಳ ಹೆಚ್ಚಿನ ಸೇವನೆಯಿಂದ ಕಳಪೆ ಪೌಷ್ಟಿಕಾಂಶದ ಆಯ್ಕೆಗಳು ಮತ್ತು ಮನೆಯ ಜವಾಬ್ದಾರಿಗಳಲ್ಲಿ ಭಾಗವಹಿಸುವಿಕೆಯ ಕೊರತೆಯು ಮಕ್ಕಳಲ್ಲಿ ಕಡಿಮೆ ತ್ರಾಣ ಮಟ್ಟಗಳಿಗೆ ಕಾರಣವಾಗಿದೆ. ಈ ಮಾದರಿಗಳು ಅನಿಯಂತ್ರಿತ ಡಿಜಿಟಲ್ ಬಳಕೆಯಿಂದ ಸಂಯೋಜಿಸಲ್ಪಟ್ಟಿವೆ.

ರಕ್ತಹೀನತೆ, ಕಡಿಮೆ ಸಹಿಷ್ಣುತೆ, ಅಪೌಷ್ಟಿಕತೆ ಮತ್ತು ನಿಷ್ಕ್ರಿಯತೆಗೆ ಸಂಬಂಧಿಸಿದ ಇತರ ರೋಗಲಕ್ಷಣಗಳನ್ನು ಹೆಚ್ಚಾಗಿ ತೋರಿಸುತ್ತಿರುವ ಬಾಲಕಿಯರ ಬಗ್ಗೆ ಕೆಮ್ಸ್ ಕಳವಳ ವ್ಯಕ್ತಪಡಿಸಿದೆ. ಅನೇಕರು ಅಂತಹ ಪರಿಸ್ಥಿತಿಗಳನ್ನು ಕೋವಿಡ್ ನಂತರದ ತೊಡಕುಗಳು ಅಥವಾ ಪರಿಸರ ಅಂಶಗಳಿಗೆ ಕಾರಣವೆಂದು ಹೇಳಿದರೆ, ಈ ಪ್ರಕರಣಗಳಲ್ಲಿ ಹೆಚ್ಚಿನವು ಜೀವನಶೈಲಿ-ಪ್ರೇರಿತ ಮತ್ತು ತಡೆಗಟ್ಟಬಹುದಾದವು ಎಂದು ಕೆಮ್ಸ್ ಒತ್ತಿಹೇಳಿದೆ.

ನಾಲ್ಕು ಅಂಶಗಳ ಕ್ರಿಯಾ ಯೋಜನೆ: ಪೋಷಕರು ಮನೆಯಲ್ಲಿ ದೈನಂದಿನ ದೈಹಿಕ ಚಟುವಟಿಕೆಯನ್ನು ಖಚಿತಪಡಿಸಿಕೊಳ್ಳುವ ಜವಾಬ್ದಾರಿಯನ್ನು ತೆಗೆದು ಕೊಳ್ಳಬೇಕು. ಶಾಲೆಗಳು ವೈದ್ಯಕೀಯ ಆಧಾರದ ಮೇಲೆ ಮಾತ್ರ ವಿದ್ಯಾರ್ಥಿಗಳಿಗೆ ಶಾರೀರಿಕ ಚಟುವಟಿಕೆಗಳಿಂದ ವಿನಾಯ್ತಿ ನೀಡಬೇಕು. ಆರೋಗ್ಯ ಶಿಕ್ಷಣವು ಮನೆ ಯಿಂದಲೇ ಪ್ರಾರಂಭವಾಗಬೇಕು. ವಿದ್ಯಾರ್ಥಿಗಳು ಮೊಬೈಲ್ ನೋಡುವ ಸಮಯ ಮತ್ತು ಆಹಾರ ಪದ್ಧತಿಗಳನ್ನು ಸಕ್ರಿಯವಾಗಿ ಮೇಲ್ವಿಚಾರಣೆ ಮಾಡಬೇಕು ಮತ್ತು ಮನೆಯವರು ಅದನ್ನು ಸರಿಪಡಿಸಬೇಕು.

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಶ್ರೀ ಸಂದೀಪ್ ಯು. ಶ್ರೀ ಬನಶಂಕರಿ ನಿಲಯ, ಸಂ. 91, 5ನೇ ಕ್ರಾಸ್, 1ನೇ ಮೇನ್, ವಿವೇಕಾನಂದ ನಗರ, ಬಿ.ಎಸ್.ಕೆ. III ಹಂತ, ಬೆಂಗಳೂರು - 560085, ರವರು ಕೆಳಗಿನ ಅನುಸೂಚಿಯಲ್ಲಿ ವಿವರಿಸಿರುವ ಭೂಮಿಯನ್ನು ಖರೀದಿಸಲು ಉದ್ದೇಶಿಸಿದ್ದಾರೆ.

ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಕಾನೂನು ಬದ್ಧ ಹಕ್ಕು, ಹಿತಾಸಕ್ತಿ ಅಥವಾ ಭಾದ್ಯತೆಗಳಿದ್ದರೆ, ಈ ಪತ್ರಿಕಾ ಪ್ರಕಟಣೆಯ ದಿನಾಂಕದಿಂದ ಹತ್ತು (10) ದಿನಗಳ ಒಳಗಾಗಿ, ಸಂಬಂಧಪಟ್ಟ ದಾಖಲೆಗಳೊಂದಿಗೆ ನನ್ನನ್ನು ಸಂಪರ್ಕಿಸಿ ತಕರಾರು ಸಲ್ಲಿಸತಕ್ಕದ್ದು. ಇಲ್ಲದಿದ್ದರೆ, ಯಾವುದೇ ವ್ಯಕ್ತಿಗೆ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಲಾಗುವುದು.

ಈ ಸಮ್ಮತಿ ಪತ್ರವು ಮೈಸೂರು ಮಿತ್ರ ಪತ್ರಿಕೆಗಳಲ್ಲಿ ಒಂದೇ ಬಾರಿ ಮಾತ್ರ ಪ್ರಕಟಣೆಗೆ ಮಾನ್ಯವಾಗುತ್ತದೆ ಮತ್ತು ಈ ಪತ್ರದ ದಿನಾಂಕದಿಂದ ಹತ್ತು (10) ದಿನಗಳವರೆಗೆ ಮಾನ್ಯವಾಗಿರುತ್ತದೆ.

ಈ ಸಮ್ಮತಿ ಕೇವಲ ಮೇಲ್ಕಂಡ ಉದ್ದೇಶಕ್ಕಾಗಿ ಮಾತ್ರ ಅನ್ವಯವಾಗುತ್ತದೆ ಮತ್ತು ಯಾವುದೇ ಕಾನೂನು ಬದ್ಧತೆಯು ಇರುವುದಿಲ್ಲ.

ಅನುಸೂಚಿ ಸ್ವತ್ತು

ಪಾಳ್ಯ ಹೋಬಳಿ, ಕೊಳ್ಳೇಗಾಲ ತಾಲ್ಲೂಕು, ಧನಗೇರೆ ಗ್ರಾಮ, ಚಾಮರಾಜನಗರ ಜಿಲ್ಲೆಯಲ್ಲಿ ಸರ್ವೆ ನಂ. **28/H3B** ರಲ್ಲಿ ಸ್ಥಿತಿಗೊಂಡಿರುವ 1.69 ಎಕರೆ ವಿಸ್ತೀರ್ಣವುಳ್ಳ ಕೃಷಿ ಜಮೀನಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಪೂರ್ವಕ್ಕೆ: ಶಿವಸ್ವಾಮಿ ಅವರಿಗೆ ಸೇರಿದ ಜಮೀನು ; ಪಶ್ಚಿಮಕ್ಕೆ ಮಾದೇಗೌಡ ಅವರಿಗೆ ಸೇರಿದ ಜಮೀನು ; ಉತ್ತರಕ್ಕೆ ವೆಂಕಟರಮಣ ಅವರಿಗೆ ಸೇರಿದ ಜಮೀನು ; ದಕ್ಷಿಣಕ್ಕೆ: ರೇಚಣ್ಣಸ್ವಾಮಿ ಅವರಿಗೆ ಸೇರಿದ ಜಮೀನು.

ಸಹಿ/- ನಂಜುಂಡಯ್ಯ ಆರ್., ವಕೀಲರು
2nd Floor, No. 334/22, 41st Cross Road, Above Bank of Baroda, 8th Block, Jayanagar, Bangalore-560 070.
Mob: 9844823555 / 9535267722
ಸ್ಥಳ: ಬೆಂಗಳೂರು
12-07-2025

25ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಹೆಜ್ಜಿಗೆ ರಾಮಯ್ಯ ರವರು

ನಂಜನಗೂಡು ತಾಲ್ಲೂಕು ಬೋರ್ಡ್ ಹಾಗೂ ಜಿಲ್ಲಾ ಪರಿಷತ್ ಸದಸ್ಯರಾಗಿ
ತಾಲ್ಲೂಕಿನ ಅಭಿವೃದ್ಧಿಯಲ್ಲಿ ಸಾಕಷ್ಟು ಶ್ರಮವಹಿಸಿ ಜನಸೇವೆ ಮಾಡಿ
ಜನಾನುರಾಗಿಯಾಗಿ ಹೆಜ್ಜಿಗೆರಾಮಯ್ಯನವರೆಂದೇ ಪ್ರಖ್ಯಾತರಾಗಿದ್ದ
ನಿಮ್ಮ 25ನೇ ಪುಣ್ಯ ಸ್ಮರಣೆ

ತಾವು ನಮ್ಮೆಲ್ಲರನ್ನೂ ಅಗಲಿ ಇಂದಿಗೆ 25 ವರ್ಷಗಳಾದರೂ ನಿಮ್ಮ ಜನಸೇವೆಯೇ ನಮ್ಮ ಜನ ಸೇವೆ
ಎಂದೂ ಭಾವಿಸಿ ನೀವು ತೋರಿದ ದಾರಿಯಲ್ಲಿ ಅನುದಿನವೂ ಸಾಗುತ್ತ ನಿತ್ಯ ನಿಮ್ಮ ಸ್ಮರಣೆಯಲ್ಲಿ ತೊಡಗಿರುವ

ಇಂತಿ ದುಃಖತಪ್ತರು : ಶ್ರೀಮತಿ ಚೌಡೇಶ್ವರಿ ಹೆಜ್ಜಿಗೆ ರಾಮಯ್ಯನವರು, ಶ್ರೀ ಆರ್.ಮೋಹನ್‌ದಾಸ್ ಪುಟ್ಟಣ್ಣ,
ಆರ್.ಭಾಸ್ಕರ್, ಹೆಣ್ಣು ಮಕ್ಕಳು ಮತ್ತು ಅಳಿಯಂದಿರು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು

ಶ್ರೀ ಆರ್.ಇಂಧನ್ ಬಾಬು

ಶ್ರೀಕಂಠೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಮಾಜಿ ಅಧ್ಯಕ್ಷರು
ಮಾಲೀಕರು, ಚಾಮುಂಡೇಶ್ವರಿ ಎಂಟರ್‌ಪ್ರೈಸಸ್ ಹಾಗೂ ಬಂಧು-ಮಿತ್ರರು ಮತ್ತು ಹೆಜ್ಜಿಗೆ ಗ್ರಾಮಸ್ಥರು

ನಕ್ಕರೆ ಅದೇ ಸ್ವರ್ಗ

ಅತ್ತೆ : ಅಳಿಯಂದ್ರೆ ನಾನು, ನಿಮ್ಮ ಹೆಂಡ್ತಿ ಇಬ್ರೂ ಹುಲಿ ಬೋನಿನಲ್ಲಿ ಸಿಕ್ಕಿ ಹಾಕಿಕೊಂಡ್ರೆ ಯಾರನ್ನು ಮೊದಲು ಕಾಪಾಡ್ತೀರ?

ಅಳಿಯ : 'ಹುಲೀನ' ಅತ್ತೆ.

ಮೈಸೂರು ಮಿತ್ರ

ಭಾನುವಾರ, 13 ಜುಲೈ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ದಾನದಿಂದ ಮನೆ ಸಂಪದ್ಭರಿತ, ಧ್ಯಾನದಿಂದ ಮನಸ್ಸು ಸಂಪದ್ಭರಿತ, ಪ್ರೀತಿಯಿಂದ ಹೃದಯ ಸಂಪದ್ಭರಿತ, ನಂಬಿಕೆಯಿಂದ ಸಂಬಂಧಗಳು ಸಂಪದ್ಭರಿತ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹುಟ್ಟುತ್ತಾ ಅಣ್ಣ – ತಮ್ಮಂದಿರು ಬೆಳೆಯುತ್ತಾ ದಾಯಾದಿಗಳು

ನಿಮ್ಮ ಪತ್ರಗಳು

■ ಸರ್ಕಾರಿ ಶಾಲೆಗಳ ನಿರ್ವಹಣೆ ನಮ್ಮೆಲ್ಲರ ಹೊಣೆಯಾಗಲಿ

ಮಾನ್ಯರೆ,

ಇತ್ತೀಚಿಗೆ ಪತ್ರಿಕೆಗಳಲ್ಲಿ ಸರ್ಕಾರಿ ಶಾಲೆಗೆ ಸ್ವಂತ ಖರ್ಚಿನಲ್ಲಿ ಬೋರ್‌ವೆಲ್ ಕೊರೆಸಿದ ಶಿಕ್ಷಕಿಯರು ಎಂಬ ಸುದ್ದಿ ಓದಿ ತುಂಬಾನೇ ಖುಷಿ ಆಯಿತು. ಸರ್ಕಾರಿ ಶಾಲೆ ಎಂದರೆ ಎಲ್ಲದಕ್ಕೂ ಸರ್ಕಾರವೇ ಹೊಣೆ ಹೊರಲಿ ಎಂದು ಉದಾಸೀನ ತೋರುವವರೆ ಹೆಚ್ಚು. ಅಂತಹದರಲ್ಲಿ ಸರ್ಕಾರಿ ಶಾಲೆಯ ಮಕ್ಕಳಿಗೆ ನೀರಿನ ಅಭಾವ ಉಂಟಾದಾಗ ಸರ್ಕಾರದ ನೆರವಿಗೆ ಕಾಯದೆ ತಮ್ಮ ಸ್ವಂತ ಖರ್ಚಿನಲ್ಲಿ (2.50 ಲಕ್ಷ ರೂ.) ಬೋರ್‌ವೆಲ್ ಕೊರೆಯಿಸಿ ಮಕ್ಕಳ ನೀರಿನ ದಾಹ ತಣಿಸಿದ ಚಿಕ್ಕಮಗಳೂರು ಜಿಲ್ಲೆ ಮಾಚಗೊಂಡನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಇಬ್ಬರು ಶಿಕ್ಷಕಿಯರ ಕಾರ್ಯ ಸಾಧನೆ ನಿಜಕ್ಕೂ ಪ್ರಸಂಶನಾರ್ಹ. ಮಕ್ಕಳ ಸಂಕಷ್ಟವನ್ನು ಅರಿತು ಕೊಳವೆ ಬಾವಿ ಕೊರೆಯಿಸಿರುವುದು ಶಿಕ್ಷಕಿಯರ ಬಹುದೊಡ್ಡ ಕಾರ್ಯ. ಮಕ್ಕಳ ಭವಿಷ್ಯಕ್ಕಾಗಿ ಚಿಂತಿಸುವ ಇಂತಹ ಶಿಕ್ಷಕರು ಸಿಗುವುದು ಬಹಳ ಅಪರೂಪ. ಇವರಿಬ್ಬರ ಮಾದರಿಯ ನಡೆ ಎಲ್ಲರಿಗೂ ಆದರ್ಶನೀಯ.

ಏಕೆಂದರೆ ಸರ್ಕಾರಿ ಶಾಲೆಗಳು ಭಾರತದ ಶೈಕ್ಷಣಿಕ ವ್ಯವಸ್ಥೆಯ ಪ್ರಮುಖ ಅಂಗವಾಗಿದೆ. ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿರುವ ಬಡ ಮತ್ತು ಮಧ್ಯಮ ವರ್ಗದ ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಸರ್ಕಾರಿ ಶಾಲೆಗಳ ಪಾತ್ರ ಅಪಾರ. ರಾಜ್ಯದ ಬಹುತೇಕ ಸರ್ಕಾರಿ ಶಾಲೆಗಳು ಹಲವು ಮೂಲಭೂತ ಸೌಲಭ್ಯಗಳ ಕೊರತೆಯನ್ನು ಅನುಭವಿಸುತ್ತಿವೆ. ಕುಡಿಯುವ ನೀರು ಸೇರಿದಂತೆ ಶೌಚಾಲಯ, ಆಸನ ವ್ಯವಸ್ಥೆ, ಆಟದ ಮೈದಾನ, ಉತ್ತಮ ಕಟ್ಟಡ, ಶೈಕ್ಷಣಿಕ ಉಪಕರಣಗಳು ಮತ್ತು ಶಿಕ್ಷಕರ ಕೊರತೆ ಮುಂತಾದವುಗಳು ಶಾಲೆಯಲ್ಲಿನ ಶಿಕ್ಷಣದ ಮಟ್ಟವನ್ನು ಕುಗ್ಗಿಸುತ್ತಿವೆ. ಅಲ್ಲದೆ ಈ ಕಾರಣಗಳಿಂದಲೇ ನಮ್ಮ ಸರ್ಕಾರಿ ಶಾಲೆಗಳು, ವಿದ್ಯಾರ್ಥಿಗಳು ಹಾಗೂ ಪಾಲಕರನ್ನು ಸೆಳೆಯುವಲ್ಲಿ ವಿಫಲವಾಗುತ್ತಿವೆ. ಇಷ್ಟಕ್ಕೂ ಸರ್ಕಾರಿ ಶಾಲಾ ಸಮಸ್ಯೆಗಳನ್ನು ಸರ್ಕಾರವೇ ನಿವಾರಣೆ ಮಾಡಲಿ ಎಂಬ ಧೋರಣೆ ತಪ್ಪಬೇಕಿದೆ. ನಮ್ಮ ಸರ್ಕಾರಿ ಶಾಲಾ ಮಕ್ಕಳ ಬಗ್ಗೆ ಕಾಳಜಿವಹಿಸಿ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಸಮಾಜದ ಪ್ರತಿಯೊಬ್ಬರು ಸರ್ಕಾರದೊಂದಿಗೆ ಕೈಜೋಡಿಸುವುದು ಅಗತ್ಯವಾಗಿದೆ. ಈಗಾದಾಗ ಸರ್ಕಾರಿ ಶಾಲೆಗಳ ಸಬಲೀಕರಣ ಮತ್ತಷ್ಟು ಹೆಚ್ಚಾಗಿ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಹಾಗೂ ಹಾಜರಾತಿ ಇನ್ನಷ್ಟು ವೃದ್ಧಿಸುತ್ತದೆ.

– ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

■ ರೈತರ ಆತ್ಮಹತ್ಯೆಗೆ ಶಾಶ್ವತ ಪರಿಹಾರ ಕಂಡುಹಿಡಿಯಿರಿ

ಮಾನ್ಯರೆ,

ನಮ್ಮ ದೇಶದ ಬೆನ್ನೆಲುಬು ನಮ್ಮ ರೈತ ಅಂತಾರೆ. ಆದರೆ, ಅವನ ಆತ್ಮಹತ್ಯೆಗಳು ಮಾತ್ರ ನಿಂತಿಲ್ಲ. ಪತ್ರಿಕೆಗಳಲ್ಲಿ ಮತ್ತು ದೃಶ್ಯ ಮಾಧ್ಯಮಗಳಲ್ಲಿ ದಿನನಿತ್ಯ ನಮ್ಮ ರಾಜ್ಯದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡ ಬಗ್ಗೆ ಸುದ್ದಿ ಇರುವುದು ಮಾಮೂಲಿಯಾಗಿದೆ. ಅವನ ಈ ಆತ್ಮಹತ್ಯೆಗೆ ಅನೇಕ ಕಾರಣಗಳು ಇರುತ್ತವೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಪರಿಹಾರಗಳು ಮಾತ್ರ ಶೂನ್ಯ. ಇಂತಹ ಘಟನೆಗಳು ಮರುಕಳಿಸದಂತೆ ಮಾಡಲು ಸರ್ಕಾರದ ಪ್ರಯತ್ನಗಳು ಮುಂದುವರಿದೇ ಇದೆ. ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬದವರಿಗೆ ಆರ್ಥಿಕ ಸಹಾಯವನ್ನು ಮಾಡುವುದಲ್ಲದೆ ಅವರ ಕುಟುಂಬದಲ್ಲಿ ವಿದ್ಯಾವಂತರು ಇದ್ದರೆ ಅವರಲ್ಲೊಬ್ಬರಿಗೆ ಸರ್ಕಾರಿ ಕೆಲಸವನ್ನು ಅವರವರ ವಿದ್ಯಾಭ್ಯಾಸಕ್ಕೆ ತಕ್ಕಂತಹ ಕೊಡುತ್ತಿದೆ. ಹೀಗೆ ಕೆಲಸ ಕೊಡುವುದು ಸರ್ಕಾರದ ಜವಾಬ್ದಾರಿ ಅಲ್ಲದಿದ್ದರೂ, ಮಾನವೀಯ ದೃಷ್ಟಿಯಿಂದ ಕೆಲಸ ಕೊಡುತ್ತಿದೆ. ಇದರಿಂದ ಹಲವಾರು ರೈತರ ಆರ್ಥಿಕ ಸಮಸ್ಯೆಗಳು ಸ್ವಲ್ಪ ಮಟ್ಟಿಗೆ ಪರಿಹಾರವಾಗಿದೆ

ವ್ಯವಸಾಯ ಸೇವಾ ಸಂಘಗಳು, ಪಿಎಲ್‌ಡಿ. (Primary Land Development) ಬ್ಯಾಂಕುಗಳು ಬೆಳೆಸಾಲ, ಅವಧಿ ಸಾಲಗಳನ್ನು ಕೊಡುತ್ತಿವೆ. ವಾಣಿಜ್ಯ ಬ್ಯಾಂಕುಗಳೂ ಸಹ ಈ ಎರಡೂ ತರಹ ಸಾಲಗಳನ್ನು ನೀಡುತ್ತಿವೆ. ಇದಲ್ಲದೆ ರೈತರು ಧನವಂತರಿಂದ ಕೈಸಾಲ ಪಡೆದು ಅತಿ ಹೆಚ್ಚಿನ ಬಡ್ಡಿಯನ್ನು ನೀಡುತ್ತಿದ್ದಾರೆ. ಕೆಲವು ಸಲ ಸಾಲ ತೀರಿಸಲಾಗದೆ ಅತಿ ಕಡಿಮೆ ಬೆಲೆಗೆ ತಮ್ಮ ಜಮೀನು ಮಾರಾಟ ಮಾಡಿ ಸಾಲ ತೀರಿಸುತ್ತಿದ್ದಾರೆ. ಮಾನವಂತರಾಗಿ ಬದುಕುವ ರೈತರು, ತಾವು ಪಡೆದ ಸಾಲವನ್ನು ತೀರಿಸಲು ಅವಕಾಶ ಇಲ್ಲದೇ ಇದ್ದಾಗ ವಿಧಿಯಿಲ್ಲದೆ ಆತ್ಮಹತ್ಯೆಯ ದಾರಿಯನ್ನು ಹಿಡಿದಿದ್ದಾರೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡು ಹಿಡಿಯಬೇಕಾಗಿದೆ.

–ಬೇಲೂರು ದ ಶಂ.ಪ್ರಕಾಶ್, ಮೈಸೂರು.

■ ಪಾಲಿಕೆ ಮುಷ್ಕರದ ನಡುವೆಯೂ ಕರ್ತವ್ಯ ನಿಷ್ಠೆ!

ಮಾನ್ಯರೇ,



ಇತ್ತೀಚೆಗೆ ಮೈಸೂರು ನಗರಪಾಲಿಕೆ ನೌಕರರು ಮುಷ್ಕರ ನಡೆಸುತ್ತಿದ್ದ ಸಂದರ್ಭದಲ್ಲಿ ಮೈಸೂರಿನ ವಿ.ವಿ.ಮೊಹಲ್ಲದ 2ನೇ ಮುಖ್ಯರಸ್ತೆ ಯಲ್ಲಿರುವ (ಕ್ಲಬ್ ಹಿಂಭಾಗ) ವಾರ್ಡ್ ಸಂಖ್ಯೆ 19ರ ವ್ಯಾಪ್ತಿಗೆ ಒಳಪಡುವ ಕನ್ಸರ್‌ವೆನ್ಸಿಯಲ್ಲಿ ಗಿಡ–ಗಂಟಿಗಳು ಬೃಹದಾಕಾರವಾಗಿ ಬೆಳೆದು ವಿಷ ಜಂತುಗಳಿಗೆ ಆಶ್ರಯ ತಾಣವಾಗಿತ್ತು. ಇಲ್ಲಿನ ನಿವಾಸಿಗಳು ಇದನ್ನು ಸ್ವಚ್ಛಗೊಳಿಸುವಂತೆ ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳಿಗೆ ಕೇವಲ ದೂರವಾಣಿ ಮೂಲಕ ಮನವಿ ಸಲ್ಲಿಸಿದ್ದರು. ಕೂಡಲೇ ಎಚ್ಚೆತ್ತುಕೊಂಡ ಪಾಲಿಕೆ ಸಿಬ್ಬಂದಿ ಸಮಸ್ಯೆಗೆ ಸ್ಪಂದಿಸಿ, ಈ ಸ್ಥಳವನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಿ ಮಾನವೀಯತೆ ಮೆರೆದಿದ್ದಾರೆ. ಹೀಗೆ ನಗರದ ಬಹುತೇಕ ಮೊಹಲ್ಲಾಗಳ ಕನ್ಸರ್‌ವೆನ್ಸಿಗಳಲ್ಲಿ ಹುಲ್ಲುಗಳು ಬೆಳೆದು ಅಲ್ಲಿನ ನಿವಾಸಿಗಳಿಗೆ ಆತಂಕ ಮೂಡಿಸಿದೆ. ಬೇರೆ ವಾರ್ಡ್‌ನವರು ಇವರಂತೆಯೇ ಅಲ್ಲಿಯೂ ಸ್ವಚ್ಛತೆಗೆ ಆದ್ಯತೆ ಕೊಟ್ಟರೆ ಯಾವುದೇ ರೋಗ, ರುಜಿನಗಳಿಗೆ ಅವಕಾಶ ನೀಡದೇ ಪರಿಸರ ಸ್ವಚ್ಛವಾಗಿರುತ್ತದೆ. ಈ ಪ್ರದೇಶವನ್ನು ಸ್ವಚ್ಛಗೊಳಿಸಲು ಸಹಕರಿಸಿದ ಪಾಲಿಕೆ ಸಿಬ್ಬಂದಿ ಪುಟ್ಟು, ವರ್ಕ್ ಇನ್ಸ್‌ಪೆಕ್ಟರ್ ಕುಬೇರ್ ಹಾಗೂ ಸೂಪರ್‌ವೈಸರ್ ಲಕ್ಷ್ಮಣ್ ಅವರಿಗೆ ಅಭಿನಂದನೆಗಳು.

–ಜಿ.ಪಿ.ಹರೀಶ್, ವಿ.ವಿ.ಮೊಹಲ್ಲಾ, ಮೈಸೂರು



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಪ್ರೀತಿಯೇ ಆ ದ್ಯಾವ್ರು ತಂದ ಆಸ್ತಿ ನಮ್ಮ ಬಾಳ್ವೆಗೆ

ಈ ಬದುಕಿನ ಒಂದು ಅತೀ ಅದ್ಭುತ ಅನುಭೂತಿ ಎಂದರೆ ಅದು ಪ್ರೀತಿ. ಈ ಬದುಕನ್ನು ನಮಗೆ ಕೊಡಮಾಡಿದ ಆ ಭಗವಂತನ ಅಸೀಮ ಕೃಪೆ ಅದು ಎಂದರೂ ನಡೆದೀತು. ಹುಟ್ಟಿದಾಗಿನಿಂದ ಸಾಯುವ ತನಕ ನಾವು ಒಂದಲ್ಲ ಒಂದು ರೀತಿಯ ಪ್ರೀತಿಯ ಭೋರ್ಗರೆತದಲ್ಲಿ ಮಿಂದಿರುತ್ತೇವೆ. ಹುಟ್ಟಿದಾಗ ಅಪ್ಪ, ಅಮ್ಮನ ಪ್ರೀತಿಯ ಭಾಗ್ಯ ಪಡೆದವರೇ ಧನ್ಯರು. ಅದರ ಸವಿಯು ಎಂದೂ ಮರೆಯಲಾಗದ್ದು. ನಮ್ಮ ಬದುಕಿನ ಉದ್ದಕ್ಕೂ ಕೈಹಿಡಿದು ಮುಂದೆ ಸಾಗಿಸಬಲ್ಲ ಶಕ್ತಿ ಅದಕ್ಕಿದೆ. ಒಡಹುಟ್ಟಿದವರ ಅಥವಾ ನಮಗಿಂತ ಮೊದಲು ಹುಟ್ಟಿದ ಅಕ್ಕ, ಅಣ್ಣಂದಿರ ಪ್ರೀತಿಯೇನು ಕಡಿಮೆಯೇ? ಬಂಧು ಬಾಂಧವರ ಬೆಸುಗೆ, ಬೆಳೆದಂತೆ ಸ್ನೇಹಿತರ ಪ್ರೀತಿ, ಅದಂತೂ ಬದುಕಿನಲ್ಲಿ ಇನ್ನಿಲ್ಲದ ಮಹತ್ವವನ್ನು ಪಡೆದು ಪ್ರಮುಖವೇ ಆಗಿಬಿಡುತ್ತದೆ. ಸಹಪಾಠಿಗಳ ಪ್ರೀತಿ, ಗುರುಗಳ ಪ್ರೀತಿ. ಹೀಗೆ ಈ ಪ್ರೀತಿ ಎಂಬುದು ನಮ್ಮ ಬದುಕಿನ ಪ್ರಮುಖ ಶಕ್ತಿ ಆಗಿಬಿಡುವುದು ಅದೆಷ್ಟು ಅಚ್ಚರಿ ಅಲ್ಲವೇ?

ದಾಂಪತ್ಯದೊಳಗಣ ಪ್ರೀತಿಯು ವಿಶೇಷತರವಾದುದು. ಅದುವರೆಗೆ ಕಂಡು, ಕೇಳಿ ಅರಿಯದ ವ್ಯಕ್ತಿ ನಮ್ಮ ಬದುಕಿನ ಸರ್ವಸ್ವ ಆಗಿಬಿಡುವುದು ಮತ್ತೊಂದು ಅಚ್ಚರಿಯೇ ಹೌದು. ಹಿರಿಯರು ನೋಡಿ, ಮಾಡುತ್ತಿದ್ದ ವಿವಾಹ ಸಂಬಂಧಗಳ ಬಗ್ಗೆ ನಾನು ಹೇಳುತ್ತಿರುವುದು. ಪ್ರೇಮ ವಿವಾಹದ ಬಗ್ಗೆ ಅಲ್ಲ. ಹುಡುಗ–ಹುಡುಗಿ ಪರಸ್ಪರ ಪ್ರೀತಿಸಿ ಮದುವೆ ಆದಾಗ, ಅಲ್ಲಿ ಆ ವ್ಯಕ್ತಿಯನ್ನು ನೀವು ಚೆನ್ನಾಗಿ ಅರಿತಿರುತ್ತೀರಿ(ಹಾಗೆಂದು ನೀವು ಭಾವಿಸುತ್ತೀರಿ ಎನ್ನುವುದು ಹೆಚ್ಚು ಸೂಕ್ತವೇನೋ!) ಅವರ ಸ್ವಭಾವದ ಪರಿಚಯ ಆಗಿರುತ್ತದೆ. ಈತನ/ಈಕೆಯ ಜೊತೆ ನಾನು ನನ್ನ ಇಡೀ ಬದುಕನ್ನು ಕಳೆಯಬಲ್ಲೆ ಎಂಬ ನಂಬಿಕೆ ಬಂದಿರುತ್ತದೆ. ಅಲ್ಲಿ ಪರಸ್ಪರ ಗೌರವಕ್ಕಿಂತ ಏಕವಚನದ ಬಳಕೆ ಆಗುವಷ್ಟು ಸಲುಗೆ ಇರುತ್ತದೆ ಎನ್ನಬಹುದೇನೋ.

ಆದರೆ, ಹಿರಿಯರು ಗೊತ್ತು ಮಾಡಿದ ಅಥವಾ ಆಯ್ಕೆ ಮಾಡಿದ ವ್ಯಕ್ತಿಯ ಸ್ವಭಾವ ಏನೆಂಬುದರ ಪರಿಚಯ ಇರುವುದಿಲ್ಲ. ಆತನ / ಆಕೆಯ ಇಷ್ಟಾನಿಷ್ಟಗಳ ಸುಳಿವೂ ಇರುವುದಿಲ್ಲ. ಅಲ್ಲಿರುವುದೆಲ್ಲಾ ಕೇವಲ ಕುತೂಹಲ, ಹೇಗೋ ಏನೋ ಎಂಬ ಸ್ವಲ್ಪಮಟ್ಟಿನ ಆತಂಕ. ಇವೆಲ್ಲವನ್ನೂ ಮೀರಿದ ಒಂದು ನವಿರಾದ ಸಂಭ್ರಮ. ಸಹಜವಾಗಿಯೇ ಅದು ತರುವ ಲಜ್ಜೆ, ನಾಚಿಕೆಯು ಅವರ ಬದುಕಿನ ಹೊಸ ಅಧ್ಯಾಯಕ್ಕೆ ಸುಂದರ ಮುನ್ನುಡಿಯನ್ನು ಬರೆಯಬಲ್ಲಷ್ಟು ಗಟ್ಟಿಯಾದ ತಳಪಾಯವನ್ನು ಹಾಕುತ್ತದೆ. ದಾಂಪತ್ಯದೊಳಗಿನ ಪ್ರೀತಿ ನಿಧಾನವಾಗಿ ಗಟ್ಟಿಯಾಗುತ್ತಾ ಹೋದಂತೆ ಗಂಡು–ಹೆಣ್ಣು ತಮ್ಮದೇ ಆದ ಹೊಸ ಸಂಸಾರವನ್ನು, ಗೂಡನ್ನು ಕಟ್ಟಿಕೊಳ್ಳುವುದರಲ್ಲಿ ಸಾರ್ಥಕ್ಯವನ್ನು ಪಡೆದುಕೊಳ್ಳುತ್ತಾರೆ.

ದೇವನು ನೀಡಿದ 'ಪ್ರೀತಿ' ಎಂಬ ಅಲೌಕಿಕ ಅನುಭವದಿಂದ ವಂಚಿತರಾದವರ ಗತಿ ಏನು? ಹುಟ್ಟುವಾಗಲೇ ತಂದೆ ತಾಯಿಯ ಪ್ರೀತಿಯನ್ನು ಕಳೆದುಕೊಂಡವರು ಅದೆಷ್ಟೋ ಮಂದಿ ಇದ್ದಾರಲ್ಲ, ಅವರ ಪಾಡೇನು? ಅಂತಹ ಬದುಕನ್ನು ಬದುಕಿದವರು ಏನು ಬೇಕಾದರೂ ಆಗಬಹುದು. ಅಂದರೆ, ತಮಗೆ ಸಿಗದ ಪ್ರೀತಿಗಾಗಿ ಹಂಬಲಿಸಿ, ಅದನ್ನು ಅರಸಬಹುದು. ಅಥವಾ ತಮ್ಮ ಬದುಕಿನಲ್ಲಿ ಬಂದ ಯಾರನ್ನೂ ಪ್ರೀತಿಸಲೂ ಆಗದೆ, ಕಹಿಯನ್ನೇ ಉಂಡು,



> “ ದಾಂಪತ್ಯದೊಳಗಣ ಪ್ರೀತಿಯು ವಿಶೇಷತರವಾದುದು. ಅದುವರೆಗೆ ಕಂಡು, ಕೇಳಿ ಅರಿಯದ ವ್ಯಕ್ತಿ ನಮ್ಮ ಬದುಕಿನ ಸರ್ವಸ್ವ ಆಗಿಬಿಡುವುದು ಮತ್ತೊಂದು ಅಚ್ಚರಿಯೇ ಹೌದು. ಹಿರಿಯರು ನೋಡಿ, ಮಾಡುತ್ತಿದ್ದ ವಿವಾಹ ಸಂಬಂಧಗಳ ಬಗ್ಗೆ ನಾನು ಹೇಳುತ್ತಿರುವುದು. ಪ್ರೇಮ ವಿವಾಹದ ಬಗ್ಗೆ ಅಲ್ಲ. ಹುಡುಗ–ಹುಡುಗಿ ಪರಸ್ಪರ ಪ್ರೀತಿಸಿ ಮದುವೆ ಆದಾಗ, ಅಲ್ಲಿ ಆ ವ್ಯಕ್ತಿಯನ್ನು ನೀವು ಚೆನ್ನಾಗಿ ಅರಿತಿರುತ್ತೀರಿ(ಹಾಗೆಂದು ನೀವು ಭಾವಿಸುತ್ತೀರಿ ಎನ್ನುವುದು ಹೆಚ್ಚು ಸೂಕ್ತವೇನೋ!)

ಮಲಗುವವರಾಗಲೂಬಹುದು. ಹಾಗೆ ಬದುಕಿದ ಒಬ್ಬ ವ್ಯಕ್ತಿಯ ಬಾಳಿನ ಒಂದು ಒಳ ನೋಟ ಇದು:

ಆಕೆ ಹುಟ್ಟಿದ ಕೂಡಲೇ ತಾಯಿಯನ್ನು ಕಳೆದುಕೊಂಡ ನತದೃಷ್ಟೆ. ಅವಳ ತಂದೆಗೆ ಮರು ಮದುವೆ ಆಗುವ ತರಾತುರಿ. ಅದಕ್ಕೆ ಇವಳ ಇರುವಿಕೆ ಅಡ್ಡಿ ಆಗದಿರಲೆಂದು ಅವಳನ್ನು ಅವಳ ತಾಯಿಯ ತವರಿಗೆ ಕಳುಹಿಸಿ ಕೈ ತೊಳೆದುಕೊಂಡರು. ಅಲ್ಲಿ ಇದ್ದುದು ತಾಯಿಯ ಅಣ್ಣಂದಿರು, ಅಜ್ಜಿ ಮತ್ತು ಅವಳದೇ ವಾರಿಗೆಯ ಸೋದರ ಮಾವನ ಮಕ್ಕಳು. ಆದರೆ ಇವಳ ಆಗಮನದಿಂದ ಅವರಿಗೆ ಅಷ್ಟೇನು ಸಂತೋಷ ಆದಂತೆ ಕಾಣಲಿಲ್ಲ. ಅವಳ ಓದಿನ ಬಗ್ಗೆ ಯಾರೂ ಅಷ್ಟಾಗಿ ತಲೆ ಕೆಡಿಸಿಕೊಳ್ಳಲಿಲ್ಲ. ದೊಡ್ಡ ಸೋದರಮಾವನಿಗೆ ಮಾತ್ರ ಮದುವೆ ಆಗಿತ್ತು. ಆತನಿಗೆ ಎಂಟು ಜನ ಮಕ್ಕಳು. ಇವಳ ಅವಶ್ಯಕತೆ ಹೆಚ್ಚಾಗಿ ಅಡುಗೆ ಮನೆಯಲ್ಲೇ ಆದರೂ ಆ ಮಕ್ಕಳ ಮತ್ತು ತನ್ನ ಸ್ಥಾನವನ್ನು ಅವಳ ಸೂಕ್ಷ್ಮ ಮನಸ್ಸು ಗಮನಿಸುತ್ತಲೇ ಇತ್ತು. ಒಳಗೇ ಸಿಟ್ಟು ಕುದಿಯಲಾರಂಭಿಸಿತ್ತು. ಇಲ್ಲೂ ಸಹ ಯಾರಿಂದಲೂ ಪ್ರೀತಿಯ ಸಿಂಚನ ದೊರೆಯದ ಆಕೆಯ ಮನಸ್ಸು ಬರಬರುತ್ತ ಗಡುಸಾಗತೊಡಗಿತು. ಅವಳ ನಡೆ–ನುಡಿಯಲ್ಲಿ ಒಂದು ರೀತಿಯ ಕಾಠಿಣ್ಯ ಮನೆ ಮಾಡತೊಡಗಿತು. ಇನ್ನು ಇವಳ ಲಗ್ನದ ಜವಾಬ್ದಾರಿ ತಮ್ಮ ಹೆಗಲಿಗೇರಿತಲ್ಲ ಎಂಬ ಮಾತೂ ಅವಳ ಕಿವಿಗೆ ಬಿದ್ದಿತ್ತು. ಒಬ್ಬ ಸೋದರ ಮಾವನಿಗೆ ಕಾಲು ಕುಂಟಾಗಿತ್ತು. ಕೆಲಸವೇನೂ ಮಾಡದ ಅವನಿಗೆ ಇವಳನ್ನು ಕೊಟ್ಟು ಲಗ್ನ ಮಾಡಿಯೇ ಬಿಟ್ಟರು. ಅದು ಬೇಡದ ದಾಂಪತ್ಯ ಆಗಿತ್ತು. ಸಾಮರಸ್ಯ ಎಂಬ ಶಬ್ದಕ್ಕೆ ಅಲ್ಲಿ ಎಡೆಯೇ ಇರಲಿಲ್ಲ. ಒಬ್ಬರನ್ನೊಬ್ಬರು ಕಂಡರೆ ಆಗುತ್ತಲೇ ಇರಲಿಲ್ಲ.

ಮಾರಣಾಂತಿಕ ಖಾಯಿಲೆಯೊಂದು ಅವನಿಗೆ ಆರಂಭವಾಯಿತು. 'ವೈನೀ, ಅವಳನ್ನು ನನ್ನ ಕಣ್ಣೆದುರಿಗೆ ಬರಲು ಬಿಡಬೇಡಿ' ಎಂದು ಕಿರುಚುತ್ತಿದ್ದ ಗಂಡ, ಕೆಲವೇ ದಿನಗಳಲ್ಲಿ ತೀರಿಕೊಂಡ. ಅವಳ ಮುಂದೆ ಹಾಸಿದ್ದ ಇಡೀ ಬದುಕು ಗಹಗಹಿಸಿತು. ಕೂಡಲೇ ಎಚ್ಚೆತ್ತ ದೊಡ್ಡ ಸೋದರಮಾವ ಅವಳ ಬದುಕಿಗೆ ಒಂದು ದಾರಿ ತೋರುವ ನಿರ್ಧಾರ ಕೈಗೊಂಡ. ಕೊನೆಗೆ ಅವಳಿಗೆ ಶಿಕ್ಷಕ ತರಬೇತಿ ಕೊಡಿಸಿ, ಯಾವುದೋ ಒಂದು ಹಳ್ಳಿಯ ಸರಕಾರಿ ಪ್ರೈಮರಿ ಶಾಲೆಯಲ್ಲಿ ಶಿಕ್ಷಕಿಯಾಗಿ ನೌಕರಿಯನ್ನು ಕೊಡಿಸಿ ಉಪಕಾರ ಮಾಡಿದ. ಅಂದಿನಿಂದ ಅವಳ ಹೊಸ ಬದುಕು ಆರಂಭಗೊಂಡಿತು. ಯಾರನ್ನೂ ಪ್ರೀತಿಸಲಾರದಂತಾಗಿದ್ದ ಅವಳು ಮರುಮದುವೆಯ ಕನಸನ್ನೂ ಕಾಣಲಿಲ್ಲ. ಹೊಟ್ಟೆ–ಬಟ್ಟೆಗೆ ಮಾವ ದಾರಿ ಮಾಡಿಕೊಟ್ಟಿದ್ದ. ದಿನಾ ದೀಪ ಹಚ್ಚುವಾಗ ಮನಸಿನಲ್ಲೇ ಅವನಿಗೂ ಕೈ ಮುಗಿಯುತ್ತಿದ್ದಳು.

ಅಲ್ಲಿಂದ ಮುಂದೆ ಅವಳ ಮಲ ಸೋದರರು ಅವಳ ಸಂಪರ್ಕಕ್ಕೆ ಬರತೊಡಗಿದರು. ಸರಕಾರಿ ಸಂಬಳದಲ್ಲಿ ಅವಳು ಉಳಿಸುತ್ತಿದ್ದ 'ಬೇಕಾದಷ್ಟು' ಹಣ ಸಹಜವಾಗಿ ಇತರರಿಗೆ ಆಕರ್ಷಕ ಅನ್ನಿಸತೊಡಗಿತ್ತು. ಆದರೆ ಅವಳ ನಿವೃತ್ತಿಯ ನಂತರ ತಮ್ಮ ಮನೆಗೆ ಬರಲಿ ಎಂದು ಅಪ್ಪಿತಪ್ಪಿಯೂ ಹೇಳುತ್ತಿರಲಿಲ್ಲ. ಅವಳು ಎಲ್ಲಿಗೆ ಹೋಗಬೇಕು? ಅದೇ ಸೋದರಮಾವನ ಸೊಸೆಯೊಬ್ಬಳು ಮರುಗಿ, ನಿವೃತ್ತಿಯ ನಂತರ ನಮ್ಮ ಮನೆಗೆ ಬನ್ನಿ ಎಂದುದನ್ನು ಗಟ್ಟಿಯಾಗಿ ಹಿಡಿದ ಆಕೆ ಅವಳ ಮನೆಗೆ ಗಂಟುಮೂಟೆ ಸಮೇತ ಬಂದಳು. 'ಪ್ರೀತಿ ಎಂಬುದು ನನ್ನಲ್ಲಿ ಸುಟ್ಟುಹೋಗಿದೆ' ಎನ್ನುತ್ತಿದ್ದ ಅವಳು ಆ ಮನೆಯ ಎರಡು ಕಂದಮ್ಮಗಳನ್ನು ಹೇಗೆ ಪ್ರೀತಿಸಿಯಾಳು? ಅವರ ಮೇಲೆ ಚಾಡಿ ಹೇಳುವುದು, ಅವರಿಗೆ ಶಿಕ್ಷೆ ಆಗುವಂತೆ ನೋಡಿಕೊಳ್ಳುವುದು ಮಾಮೂಲಾಯಿತು. ಹಲವಾರು ವರುಷಗಳು ನಡೆದ ಇದರಿಂದ ಬೇಸತ್ತ ಆ ಸೊಸೆ ಅವರ ಮಲ ತಮ್ಮಂದಿರ ಬಳಿಗೆ ಅವಳನ್ನು ಕಳುಹಿಸಿಬಿಟ್ಟಳು. ಅವರು ಮೆಲ್ಲಗೆ ಅವಳನ್ನು ಮದುವೆಯಾಗದೆ ದೂರದ ಊರಿನಲ್ಲಿದ್ದ ತಮ್ಮ ಮಗಳ ಮನೆಗೆ ರವಾನಿಸಿದರು. ಅವಳ ಉಳಿತಾಯ ಎಲ್ಲವನ್ನೂ ತಮ್ಮ ಹೆಸರಿಗೆ ಮಾಡಿಸಿಕೊಳ್ಳಲು ಮರೆಯಲಿಲ್ಲ. ಹೀಗೆ ಯಾವುದೋ ಊರಿನಲ್ಲಿ, ಯಾರಿಗೂ ಬೇಡವಾಗಿ ಅವಳ ಬದುಕು ಕಳೆಯಿತು. ಅವಳ ಬದುಕಿನಲ್ಲಿ ಪ್ರೀತಿ ಎಂಬ ಮಾಂತ್ರಿಕ ಸ್ಪರ್ಷ ಆಗಿದ್ದರೆ ಅವಳ ಬದುಕು ತರಗೆಲೆಯಂತೆ ಹೀಗೆಲ್ಲ ಆಗುತ್ತಿತ್ತೆ?

ಬಿಸಿಲಲಿ ಬಳಲಿ ಬಂದವರಿಗೆ ನೆರಳಿಲ್ಲ
ಹಸಿದು ಬಂದವರಿಗೆ ಹಣ್ಣು ಇಲ್ಲ
ಕುಸುಮ ವಾಸನೆ ಇಲ್ಲ ಕೂಡಲು
ಸ್ಥಳವಿಲ್ಲ ರಸದಲಿ ಸ್ವಾದವು ವಿಷದಂತೆ ಇರುತಿಹ

ದಾಸರ ಪದದ ಈ ಸಾಲುಗಳು ನೆನಪಾದವು...

ಲೋಕ್ ಅದಾಲತ್‌ನಲ್ಲಿ 11,674 ಪ್ರಕರಣ ಇತ್ಯರ್ಥ



ಮೈಸೂರು ನ್ಯಾಯಾಲಯದಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಉಷಾರಾಣಿ ಹಾಗೂ ಇತರ ನ್ಯಾಯಾಧೀಶರ ಸಮ್ಮುಖದಲ್ಲಿ ರಾಷ್ಟ್ರೀಯ ಲೋಕ್ ಅದಾಲತ್ ನಡೆಯಿತು.

ಮೈಸೂರು,ಜು.12–ಮೈಸೂರು ನ್ಯಾಯಾಲಯಗಳಲ್ಲಿ ಶನಿವಾರ ನಡೆದ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ 11,674 ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ.

ರಾಷ್ಟ್ರೀಯ ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ ಬಾಕಿಯಿರುವ ಪ್ರಕರಣಗಳಲ್ಲಿ ಕಾನೂನಿನ ಪ್ರಕಾರ ರಾಜಿಯಾಗಬಹುದಾದ ಪ್ರಕರಣಗಳು ಮತ್ತು ವ್ಯಾಜ್ಯ ಪೂರ್ವ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಪಡಿಸುವ ಉದ್ದೇಶದಿಂದ ರಾಷ್ಟ್ರೀಯ ಲೋಕ್ ಅದಾಲತ್ ಹಮ್ಮಿಕೊಳ್ಳಲಾಗಿತ್ತು.

ಮೈಸೂರು ನಗರ ಹಾಗೂ ತಾಲೂಕುಗಳಲ್ಲಿನ ನ್ಯಾಯಾಲಯಗಳಲ್ಲಿ 61,193 ಸಿವಿಲ್ ಹಾಗೂ 60,932 ಕ್ರಿಮಿನಲ್ ಪ್ರಕರಣ ಸೇರಿ ಒಟ್ಟು 1,27,153 ಪ್ರಕರಣಗಳ ವಿಚಾರಣೆಗೆ ಬಾಕಿ ಇದ್ದವು. ಇವುಗಳಲ್ಲಿ ರಾಜಿಯಾಗಬಹುದಾದ 39,640 ಪ್ರಕರಣಗಳಲ್ಲಿ 22,161 ಪ್ರಕರಣಗಳನ್ನು ರಾಜೀ ಸಂಧಾನಕ್ಕಾಗಿ ತೆಗೆದುಕೊಳ್ಳಲಾಗಿತ್ತು. ಇದರಲ್ಲಿ 11,674 ಪ್ರಕರಣಗಳನ್ನು ಅದಾಲತ್‌ನಲ್ಲಿ ಇತ್ಯರ್ಥಪಡಿಸಲಾಗಿದೆ.

ಒಂದಾದ 44 ಜೋಡಿ: ಈ ಬಾರಿ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ತೆಗೆದುಕೊಳ್ಳಲಾಗಿದ್ದ ಕೌಟುಂಬಿಕ ವಿವಾದದ ಪ್ರಕರಣಗಳಲ್ಲಿ ಒಟ್ಟು 44 ದಂಪತಿಗಳು ರಾಜೀ ಸಂಧಾನದ ಮೂಲಕ ಬಗೆಹರಿಸಿಕೊಂಡು ಒಂದಾಗುವ ಮೂಲಕ ಹೊಸ ಜೀವನದತ್ತ ಹೆಜ್ಜೆ ಹಾಕಿದರು. ಹಾಗೆಯೇ ರಾಜೀ ಸಂಧಾನದ ಮೂಲಕ ಒಟ್ಟು 72,24,66,028 ರೂ. ಮೊತ್ತದ ಆರ್ಥಿಕ ವ್ಯಾಜ್ಯ ಇತ್ಯರ್ಥವಾಗಿವೆ. ಈ ವೇಳೆ ವಕೀಲರ ಸಂಘದ ಪದಾಧಿಕಾರಿಗಳು, ಎಲ್ಲಾ ವಕೀಲರು, ಕಕ್ಷಿಗಾರರು, ಪೊಲೀಸರು ಸೇರಿದಂತೆ ಲೋಕ್ ಅದಾಲತ್ ಯಶಸ್ಸಿಗೆ ಸಹಕರಿಸಿದ ಎಲ್ಲಾ ಇಲಾಖೆಯವರಿಗೂ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಉಷಾರಾಣಿ ಕೃತಜ್ಞತೆ ಸಲ್ಲಿಸಿದರು.

ಭಾರತೀಯ ಕಾನೂನು ವ್ಯವಸ್ಥೆ ಸರಿಪಡಿಸುವ ಅವಶ್ಯಕತೆಯಿದೆ



ಬಿ.ಆರ್.ಗವಾಯಿ

ಹೈದರಾಬಾದ್: ಭಾರತೀಯ ಕಾನೂನು ವ್ಯವಸ್ಥೆಯು ವಿಶಿಷ್ಟ ಸವಾಲುಗಳನ್ನು ಎದುರಿಸುತ್ತಿದ್ದು, ಅದನ್ನು ಸರಿಪಡಿಸುವ ಅಗತ್ಯವಿದೆ ಎಂದು ಭಾರತದ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಹೇಳಿದರು.

ಹೈದರಾಬಾದ್‌ನ ಜಸ್ಟೀಸ್ ಸಿಟಿಯಲ್ಲಿರುವ ನಲ್ಸಾರ್ ಕಾನೂನು ವಿಶ್ವವಿದ್ಯಾಲಯದಲ್ಲಿನ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ವಿದ್ಯಾರ್ಥಿವೇತನ ಪಡೆಯುವ ಮೂಲಕ ಅಧ್ಯಯನಕ್ಕಾಗಿ ವಿದೇಶಕ್ಕೆ ಹೋಗಬೇಕು. ಕುಟುಂಬದ ಮೇಲೆ ಹಣಕಾಸಿನ ಹೊರೆಯನ್ನು ಹೇರಬಾರದು ಎಂದು ಸಲಹೆ ನೀಡಿದರು.

ಕಾನೂನು ವ್ಯವಸ್ಥೆಯಲ್ಲಿ ಗಂಭೀರ ಸಮಸ್ಯೆಗಳಿವೆ ಮತ್ತು ಪ್ರಮುಖ ಸುಧಾರಣೆಗಳ ಅಗತ್ಯವಿದೆ ಎಂದು ನಾನು ನಂಬಿದ್ದರೂ, ಈ ದೇಶದ ಜನರು ಮುಂದೆ ಬಂದು ಅಗತ್ಯ ಬದಲಾವಣೆಗಳನ್ನು ತರಲು ಸಹಾಯ ಮಾಡುತ್ತಾರೆ ಎಂಬ ವಿಶ್ವಾಸ ಇನ್ನೂ ನನ್ನಲ್ಲಿದೆ ಎಂದು ಸಿಜೆಐ ಬಿ.ಆರ್. ಗವಾಯಿ ಹೇಳಿದರು.

ನಮ್ಮ ದೇಶ ಮತ್ತು ಕಾನೂನು ವ್ಯವಸ್ಥೆಯು ವಿಶಿಷ್ಟ ಸವಾಲುಗಳನ್ನು ಎದುರಿಸುತ್ತಿದೆ. ಪ್ರಕರಣಗಳ ವಿಚಾರಣೆಗಳಲ್ಲಿ ವಿಳಂಬ ಉಂಟಾಗಿ ಕೆಲವೊಮ್ಮೆ ದಶಕಗಳವರೆಗೆ ಹೋಗಬಹುದು. ವಿಚಾರಣಾಧೀನ ಕೈದಿಯಾಗಿ ಜೈಲಿನಲ್ಲಿ ವರ್ಷಗಳ ಕಾಲ ಕಳೆದ ನಂತರ ವ್ಯಕ್ತಿಯು ನಿರಪರಾಧಿ ಎಂದು ಕಂಡು ಬಂದ ಪ್ರಕರಣಗಳನ್ನು ನಾವು ನೋಡಿದ್ದೇವೆ. ನಮ್ಮ ಅತ್ಯುತ್ತಮ ಪ್ರತಿಭೆಗಳು ನಾವು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಸಹಾಯ ಮಾಡುತ್ತದೆ ಎಂದರು. ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಮತ್ತು ಸುಪ್ರೀಂ ಕೋರ್ಟ್ ನ್ಯಾಯಾಧೀಶರಾದ ಪಿಎಸ್ ನರಸಿಂಹ ಅವರು ಘಟಿಕೋತ್ಸವದಲ್ಲಿ ಭಾಗವಹಿಸಿದ್ದರು. ತೆಲಂಗಾಣ ಹೈಕೋರ್ಟ್‌ನ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸುಜೋಯ್ ಪಾಲ್ ಅವರು ಘಟಿಕೋತ್ಸವದ ಅಧ್ಯಕ್ಷತೆ ವಹಿಸಿದ್ದರು.

ಶೈಕ್ಷಣಿಕ ಮಾತ್ರವಲ್ಲ ಎಲ್ಲಾ ಕ್ಷೇತ್ರದಲ್ಲೂ ಹೆಣ್ಣು ಮಕ್ಕಳ ಸಾಧನೆ ಶ್ಲಾಘನೀಯ

● ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಮತ ● ರಾಣಿ ಅಹಲ್ಯಾಬಾಯಿ ಹೋಳ್ಕರ್ 300ನೇ ಜನ್ಮ ದಿನಾಚರಣೆ ಸ್ಮರಣೆ

ಬೆಂಗಳೂರು,ಜು.12(ಕೆಎಂಶಿ)–ಶೇ.100ರಷ್ಟು ಅಂಕ ಪಡೆಯುವುದರಲ್ಲಿ ಹೆಣ್ಣುಮಕ್ಕಳೇ ಮುಂದಿದ್ದು, ಸೈನ್ಯ, ಅಂತರಿಕ್ಷ ಕ್ಷೇತ್ರದಲ್ಲೂ ಸಾಧನೆ ಮಾಡುತ್ತಿರುವುದು ಮಹಿಳಾ ಕುಲದ ಪ್ರಗತಿಯ ಪ್ರತೀಕ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ರಾಣಿ ಅಹಲ್ಯಾಬಾಯಿ ಹೋಳ್ಕರ್‌ರ 300ನೇ ಜನ್ಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಒಂದು ಸಂಘಟನೆ 25 ವರ್ಷ ಸೇವಾ ಅವಧಿ ಪೂರೈಸುವುದೇ ದೊಡ್ಡ ಯಶಸ್ಸು, ಕರ್ನಾಟಕ ರಾಜ್ಯ ಅಹಲ್ಯಾಬಾಯಿ ಹೋಳ್ಕರ್ ಮಹಿಳಾ ಸಂಘ ಅತ್ಯಂತ ಯಶಸ್ವಿಯಾಗಿದೆ, ಇದಕ್ಕಾಗಿ ಶ್ರಮಿಸಿದ ಪ್ರತಿಯೊಬ್ಬರೂ ಅಭಿನಂದನಾರ್ಹರು ಎಂದರು.

ಡಾ.ಅಂಬೇಡ್ಕರ್ ಶೋಷಿತ ಜಾತಿ, ಸಮುದಾಯಗಳಿಗೆ ಕೊಟ್ಟಿರುವ ಮಂತ್ರವೆಂದರೆ, ಶಿಕ್ಷಣ–ಸಂಘಟನೆ–ಹೋರಾಟ, ಶೂದ್ರರು ಮತ್ತು ಮಹಿಳೆಯರು ಅಕ್ಷರ ಸಂಸ್ಕೃತಿಯಿಂದ ವಂಚಿತರಾಗಿದ್ದರು. ಡಾ.ಅಂಬೇಡ್ಕರ್ ಕಾರಣದಿಂದ ಶೂದ್ರ ಮತ್ತು ಮಹಿಳಾ ಕುಲಕ್ಕೆ ಶಿಕ್ಷಣ ಕಲಿಯುವ ಅವಕಾಶ ಒದಗಿಬಂತು. ಇದಕ್ಕೆ ನಮ್ಮ ಸಂವಿಧಾನ ನೀಡಿದ ಕಡ್ಡಾಯ ಶಿಕ್ಷಣ ಕಾನೂನು ನೆರವಾಯಿತು ಎಂದು ಹೇಳಿದರು.



ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ಏರ್ಪಡಿಸಿದ್ದ ರಾಣಿ ಅಹಲ್ಯಾಬಾಯಿ ಹೋಳ್ಕರ್‌ರ 300ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.

ಕುರುಬರಿಗೆ ಅಕ್ಷರ ಹತ್ತಲ್ಲ, ಶಿಕ್ಷಣ ಏಕೆ ಎಂಬುದಾಗಿ ನಮ್ಮ ಅಜ್ಜಿ ಹೇಳುತ್ತಿದ್ದರು. ಆದರೆ, ನಾನು ಶಾಲೆಗೆ ಹೋಗಿ ಕಾನೂನು ಪದವಿ ಪಡೆದು ಮುಖ್ಯಮಂತ್ರಿಯೂ ಆದೆ. ಶಾಲೆಗೆ ಹೋಗಿ ಶಿಕ್ಷಣ ಕಲಿಯುವ ಅವಕಾಶ ಉಪಯೋಗಿಸಿಕೊಳ್ಳದಿದ್ದರೆ ನಾನೂ ಹಸು, ಕುರಿ ಕಾಯುತ್ತಾ ಇರಬೇಕಾಗಿತ್ತು. ರಾಣಿ ಅಹಲ್ಯಾಬಾಯಿ ಶಿಕ್ಷಣ ಕ್ರಾಂತಿ ಎಲ್ಲ ಮಹಿಳಾ ಸಂಘಟನೆಗೂ ಪ್ರೇರಣೆ ಆಯಿತು. ಇತಿಹಾಸ ಗೊತ್ತಿಲ್ಲದವರು ಭವಿಷ್ಯ ರೂಪಿಸಲು ಸಾಧ್ಯವಿಲ್ಲ.

ರಾಣಿ 20 ವರ್ಷ ಅಧಿಕಾರದಲ್ಲಿದ್ದರೂ ತನ್ನ ಸಾಮ್ರಾಜ್ಯ ಉಳಿಸಲು ಅಗತ್ಯವಾದ ಎಲ್ಲಾ ಅರ್ಹತೆಗಳನ್ನು ಬೆಳೆಸಿಕೊಂಡಿದ್ದರೂ ಸಾಮ್ರಾಜ್ಯ ವಿಸ್ತರಣೆ ಹಪಾಹಪಿ ಇರಲಿಲ್ಲ. ಖಜಾನೆ ತುಂಬಿದ್ದರೂ ಸರಳ ಜೀವನ ನಡೆಸುತ್ತಾ, ಸುಸ್ಥಿರ ಆಡಳಿತ, ಅಭಿವೃದ್ಧಿ ಕಡೆ ಹೆಚ್ಚಿನ ಗಮನ ಹರಿಸಿದ್ದ ಅವರು, ಬಾಲ್ಯವಿವಾಹ ನಿಲ್ಲಿಸುವ ಮೂಲಕ ಸಾಮಾಜಿಕ ಬದಲಾವಣೆಯಲ್ಲೂ ಪ್ರಮುಖ ಪಾತ್ರ ವಹಿಸಿದ್ದರು ಎಂದರು.

ಜಾತ್ಯತೀತ ಮನೋಭಾವ ಹೊಂದಿದ್ದ ಅಹಲ್ಯಾಬಾಯಿ ಆ ಕಾಲದಲ್ಲೇ ಅಂತರ್ಜಾತಿ ವಿವಾಹ ಮಾಡಿಸಿದ್ದರು. ಶಿಕ್ಷಣ ಪಡೆದು ಆರ್ಥಿಕ, ಸಾಮಾಜಿಕವಾಗಿ ಸಬಲರಾದರೆ ಮಾತ್ರ ಅಸಮಾನತೆ ಅಳಿಸಿ ಸಾಮಾಜಿಕ ಬೆಳವಣಿಗೆ ಸಾಧ್ಯವಾಗುತ್ತದೆ. ನಮ್ಮ ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳಿಂದ ಯಾರೂ ಸೋಮಾರಿಗಳಾಗುವುದಿಲ್ಲ, ಬದಲಿಗೆ ಸಾಮಾಜಿಕವಾಗಿ ಸಬಲರಾಗುತ್ತಾರೆ. ಮಹಿಳೆಯರ ಸಬಲೀಕರಣಕ್ಕೆ ನಮ್ಮ ಸರ್ಕಾರ ಗೃಹಲಕ್ಷ್ಮಿ, ಶಕ್ತಿ ಯೋಜನೆ ಸೇರಿದಂತೆ ಹಲವು ಕಾರ್ಯಕ್ರಮ ರೂಪಿಸಿ ಜಾರಿ ಮಾಡಿದೆ, ಇದರಿಂದ ಸಮಾಜಕ್ಕೆ, ಮಹಿಳಾ ಕುಲಕ್ಕೆ ಶಕ್ತಿ ಬಂದಿದೆಯೇ ಹೊರತು ಯಾರೂ ಸೋಮಾರಿಗಳಾಗಿಲ್ಲ ಎಂದರು. ರಾಜ್ಯ ಅಹಲ್ಯಾಬಾಯಿ ಮಹಿಳಾ ಸಂಘಕ್ಕೆ ಬೆಂಗಳೂರಿನಲ್ಲಿ ಜಮೀನು ನೀಡಲಾಗುವುದು ಎಂದು ಸಿದ್ದರಾಮಯ್ಯ ಘೋಷಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಶೇ.1ರಷ್ಟು ತೆರಿಗೆ ಕಟ್ಟಿದರೆ ಸಾಕು

ಬೇಕರಿ, ಕಾಂಡಿಮೆಂಟ್ಸ್ ಮಾಲೀಕರಿಗೆ ವಾಣಿಜ್ಯ ಇಲಾಖೆ ಸ್ಪಷ್ಟನೆ



ಬೆಂಗಳೂರು, ಜು.12– ನಗರದಲ್ಲಿ ಬೇಕರಿ, ಜ್ಯೂಸ್ ಅಂಗಡಿ, ಕಾಂಡಿಮೆಂಟ್ಸ್ ಅಂಗಡಿ ಇಟ್ಟುಕೊಂಡು ಬದುಕು ನಡೆಸುತ್ತಿರುವ ಸಣ್ಣ ವ್ಯಾಪಾರಿಗಳಿಗೆ ಕಮರ್ಷಿಯಲ್ ಟ್ಯಾಕ್ಸ್ ಇಲಾಖೆ, ಅತೀ ದೊಡ್ಡ ಶಾಕ್ ನೀಡಿದೆ. ವ್ಯಾಪಾರಿಗಳ ಅಪರಾಧವೆಂದರೆ ಗ್ರಾಹಕರಿಂದ ಆನ್‌ಲೈನ್ ಮುಖಾಂತರ ಹಣ ಸ್ವೀಕರಿಸಿರುವುದು. ವ್ಯಾಪಾರಿಗಳು ವ್ಯಾಪಾರ ಶುರುವಾದಾಗಿನಿಂದ ಇದುವರೆಗೆ ನಡೆಸಿರುವ ವಹಿವಾಟಿನ ಮೇಲೆ ವಾಣಿಜ್ಯ ತೆರಿಗೆ ಕಟ್ಟಬೇಕೆಂದು ಇಲಾಖೆ ನೋಟಿಸ್ ಕಳಿಸಿದೆ.

40 ಲಕ್ಷ ರೂಪಾಯಿಗಿಂತ ಅಧಿಕ ಮೊತ್ತದ ವಹಿವಾಟು ನಡೆಸಿದ ಬೇಕರಿ, ಕಾಂಡಿಮೆಂಟ್ಸ್, ಜ್ಯೂಸ್ ಅಂಗಡಿಗಳಿಗೆ ಕಮರ್ಷಿಯಲ್ ಟ್ಯಾಕ್ಸ್ ಪಾವತಿ ಮಾಡಬೇಕೆಂಬ ನೋಟಿಸ್‌ಗಳಿಗೆ ಭಾರಿ ಆಕ್ರೋಶ ವ್ಯಕ್ತವಾಗುತ್ತಿದ್ದಂತೆ ಕರ್ನಾಟಕ ವಾಣಿಜ್ಯ ತೆರಿಗೆ ಇಲಾಖೆ ಸ್ಪಷ್ಟನೆ ನೀಡಿದ್ದು, ವಾರ್ಷಿಕ ವಹಿವಾಟು 1.5 ಕೋಟಿಗಿಂತ ಕಡಿಮೆ ಇದ್ದರೆ ಅಂತಹ ವರ್ತಕರು ಕೇವಲ ಶೇ. 1 ರಷ್ಟು ಮಾತ್ರ ತೆರಿಗೆ ಪಾವತಿಸಬಹುದಾಗಿದೆ ಎಂದು ಹೇಳಿದೆ.

ಜುಲೈ 1, 2017 ರಿಂದ ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯು ದೇಶಾದ್ಯಂತ ಜಾರಿಗೆ ಬಂದಿರುತ್ತದೆ. ಈ ಕಾಯ್ದೆಯ ಕಲಂ 22 ರನ್ವಯ ಸರಕು ಪೂರೈಕೆದಾರರ ಸಮಗ್ರ ವಹಿವಾಟು ಒಂದು ಹಣಕಾಸು ವರ್ಷದಲ್ಲಿ 40 ಲಕ್ಷ ರೂಗಳನ್ನು ಮೀರಿದರೆ ಅಥವಾ ಸೇವೆಗಳ ಪೂರೈಕೆದಾರರ ಸಮಗ್ರ ವಹಿವಾಟು ಒಂದು ಹಣಕಾಸು ವರ್ಷದಲ್ಲಿ 20 ಲಕ್ಷ ರೂಪಾಯಿಗಳನ್ನು ಮೀರಿದರೆ ಜಿಎಸ್‌ಟಿ ನೋಂದಣಿ ಪಡೆಯುವುದು ಕಡ್ಡಾಯವಾಗಿದೆ.

40 ಲಕ್ಷ ರೂಪಾಯಿಗಳಿಗಿಂತ ಹೆಚ್ಚಿನ ಹಣವನ್ನು ಪಡೆದು ಸರಕು ಮತ್ತು ಸೇವಾ ತೆರಿಗೆ ಕಾಯ್ದೆ 2017 ರಡಿಯಲ್ಲಿ ನೋಂದಣಿಯನ್ನು ಪಡೆಯದೆ, ತೆರಿಗೆ ಪಾವತಿಸದೆ ಇರುವ ವರ್ತಕರಿಗೆ ನೋಟಿಸ್ ಜಾರಿಗೊಳಿಸಲಾಗಿದೆ. ಈ ನೋಟಿಸುಗಳಿಗೆ, ವರ್ತಕರು ತಾವು ಮಾರಾಟ ಮಾಡಿದ ಸರಕು ಮತ್ತು ಸೇವೆಗಳ ವಿವರಗಳನ್ನು ನೀಡಿ ಸರಿಯಾದ ತೆರಿಗೆಯನ್ನು ಪಾವತಿಸಬೇಕು. ಇಂತಹ ವರ್ತಕರು ತಕ್ಷಣ ನೋಂದಣಿ ಮಾಡಬೇಕು. ವಾರ್ಷಿಕ ವಹಿವಾಟು 1.5 ಕೋಟಿ ರೂಪಾಯಿಗಳಿಗಿಂತ ಕಡಿಮೆ ಇರುವ ಸಣ್ಣ ವರ್ತಕರು ರಾಜಿ ತೆರಿಗೆಯನ್ನು ಆಯ್ಕೆ ಮಾಡಿ, ಇನ್ನು ಮುಂದೆ ಶೇ.1ರಷ್ಟು ತೆರಿಗೆ ಪಾವತಿಸಬಹುದಾಗಿದೆ.

ಆದರೆ, ಯುಪಿಐ ಮೂಲಕ 40 ಲಕ್ಷ ರೂಪಾಯಿಗಳಿಗಿಂತ ಹೆಚ್ಚಿನ ಹಣವನ್ನು ಪಡೆದಿರುವ ವರ್ತಕರ ವಾರ್ಷಿಕ ವಹಿವಾಟು ಇನ್ನೂ ಗಣನೀಯವಾಗಿ ಹೆಚ್ಚಾಗಿದೆ. ಈ ಮಾಹಿತಿಯನ್ನು ಪರಿಶೀಲಿಸಿದ ಇಲಾಖೆ 40 ಲಕ್ಷ ರೂಗಳಿಗಿಂತ ಹೆಚ್ಚಿನ ಹಣವನ್ನು ಪಡೆದು ಸರಕು ಮತ್ತು ಸೇವಾ ತೆರಿಗೆ ಕಾಯ್ದೆ 2017ರಡಿಯಲ್ಲಿ ನೋಂದಣಿಯನ್ನು ಪಡೆಯದೆ, ತೆರಿಗೆ ಪಾವತಿಸದೆ ಇರುವ ವರ್ತಕರಿಗೆ ನೋಟಿಸ್ ನೀಡಿದೆ. ಈ ನೋಟಿಸುಗಳಿಗೆ ವರ್ತಕರು ತಾವು ಮಾರಾಟ ಮಾಡಿದ ಸರಕು ಮತ್ತು ಸೇವೆಗಳ ವಿವರಗಳನ್ನು ನೀಡಿ ಸರಿಯಾದ ತೆರಿಗೆಯನ್ನು ಪಾವತಿಸಬೇಕು ಎಂದು ಇಲಾಖೆ ತಿಳಿಸಿದೆ.

ಪಟ್ಟಭದ್ರ ಹಿತಾಸಕ್ತಿಗಳಿಂದ ಮಾಹಿತಿ ಹಕ್ಕು ಕಾಯ್ದೆ ದುರುಪಯೋಗ

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ವಿಷಾದ



ಮೈಸೂರು, ಜು.12(ಎಂಟಿವೈ)– ಸಾರ್ವಜನಿಕರಿಗೆ ಉಪಯೋಗವಾಗಬೇಕಾಗಿದ್ದ ಮಾಹಿತಿ ಹಕ್ಕು ಕಾಯ್ದೆಯನ್ನು ಕೆಲ ಪಟ್ಟಭದ್ರ ಹಿತಾಸಕ್ತಿಗಳು ದುರುಪಯೋಗಪಡಿಸಿಕೊಳ್ಳುವ ಮೂಲಕ ಪರಿಣಾಮಕಾರಿ ಯಾದ ಕಾಯ್ದೆಯ ಮಹತ್ವಕ್ಕೆ ಕೊಡಲಿ ಪೆಟ್ಟು ಬೀಳುವಂತೆ ಮಾಡುತ್ತಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ. ಡಾ.ಹೆಚ್.ಸಿ.ಮಹದೇವಪ್ಪ ವಿಷಾದಿಸಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಮಾಹಿತಿ ಹಕ್ಕು ವೇದಿಕೆ ಆಯೋಜಿಸಿದ್ದ 'ನ್ಯಾಯದ ದಿಕ್ಕು, ಮಾಹಿತಿ ಹಕ್ಕು' ವಿಷಯ ಕುರಿತ ರಾಜ್ಯ ಮಟ್ಟದ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಭ್ರಷ್ಟಾಚಾರದ ಕೆಲಸಗಳಿಗೆ ಮಾಹಿತಿ ಹಕ್ಕು ಕಾಯ್ದೆ ಎಚ್ಚರಿಕೆ ಗಂಟೆಯಾಗಿದೆ. ಆದರೆ ಈ ಕಾಯ್ದೆಯನ್ನು ಕೆಲ ವ್ಯಕ್ತಿಗಳು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಇದರಿಂದ ಕಳಂಕ ಅಂಟಿಸುತ್ತಿದ್ದಾರೆ. ವ್ಯಕ್ತಿಯನ್ನು ವೈಯಕ್ತಿಕವಾಗಿ ತೇಜೋವಧೆ ಮಾಡಲು ಕಾಯ್ದೆಯನ್ನು ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಇದರಿಂದ ಜನಸ್ನೇಹಿಯಾದ ಕಾಯ್ದೆಯ ಮೂಲ ಸ್ವರೂಪದ ಹಾದಿ ತಪ್ಪುತ್ತಿದೆ. ಅನ್ಯರು ತಮ್ಮ ಸ್ವಾರ್ಥಕ್ಕಾಗಿ ಕಾಯ್ದೆಯನ್ನು ದುರ್ಬಳಕೆ ಮಾಡಿಕೊಳ್ಳದಂತೆ ನೋಡಿಕೊಳ್ಳುವ ಜವಾಬ್ದಾರಿ ನೈಜ ಹೋರಾಟಗಾರರ ಮೇಲೆ ಇದೆ ಎಂದು ಅಭಿಪ್ರಾಯಪಟ್ಟರು.

ಮಾಹಿತಿ ಹಕ್ಕು ಕಾಯ್ದೆ ಅತ್ಯಂತ ಪಾರದರ್ಶಕ ಹಾಗೂ ಕ್ರಾಂತಿಕಾರಿಕ ಕಾಯ್ದೆ ಆಗಿದೆ. ಈ ಕಾಯ್ದೆ ಜಾರಿಗೆ ಬಂದ ಮೇಲೆ ಕಾನೂನು ವಿರುದ್ಧವಾಗಿ ನಡೆಯುತ್ತಿದ್ದ ಕಾರ್ಯಗಳು ನಿಯಂತ್ರಣಕ್ಕೆ ಬಂದಿವೆ. ಮಾಹಿತಿ ಹಕ್ಕು ಕಾಯ್ದೆ ಹೋರಾಟಕ್ಕೆ ನೈತಿಕತೆ ಇರಬೇಕು. ನಮ್ಮ ಸಂವಿಧಾನ ಮುಕ್ತವಾಗಿದೆ. ಮಾಹಿತಿ ಪಾರದರ್ಶಕವಾಗಿ ಜನರಿಗೆ ಸಿಗಬೇಕು ಎಂದು ಕೇಂದ್ರದಲ್ಲಿ ಡಾ.ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದಾಗ ಈ ಕಾಯ್ದೆಯನ್ನು ಜಾರಿಗೆ ತಂದರು ಎಂದು ತಿಳಿಸಿದರು.

ಅಂತಾರಾಷ್ಟ್ರೀಯ ವ್ಯಕ್ತಿತ್ವ ವಿಕಸನ ತರಬೇತುದಾರ ಆರ್.ಎ.ಚೇತನ್ ರಾವ್ ಮಾತನಾಡಿ, ಸಾರ್ವಜನಿಕರು ತಪ್ಪು ಮಾಡದ ವ್ಯಕ್ತಿತ್ವ ಬೆಳಸಿಕೊಳ್ಳಬೇಕು. ಆಗ ಮಾತ್ರ ಭ್ರಷ್ಟಾಚಾರ ಮುಕ್ತ ಸಮಾಜ ನಿರ್ಮಾಣ ಸಾಧ್ಯ. ಮಾಹಿತಿ ಹಕ್ಕು ಸದಸ್ಯರು ದೊಡ್ಡ ಗುರಿ, ದೊಡ್ಡ ಕನಸು ಇಟ್ಟುಕೊಳ್ಳಬೇಕು. ಸಮಾಜ ಸುಧಾರಣೆಗೆ ಹೋರಾಟ ಮುಖ್ಯ. ಹೋರಾಟದಿಂದಲೇ ಸಮಾಜದಲ್ಲಿ ಬದಲಾವಣೆ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಬಸವಮಾರ್ಗ ವ್ಯಸನಮುಕ್ತ ಮತ್ತು ಪುನರ್ವಸತಿ ಕೇಂದ್ರದ ಸಂಸ್ಥಾಪಕ ಎಸ್.ಬಸವರಾಜು ಮಾತನಾಡಿ, ಎಲ್ಲರೂ ಹೋರಾಟ ಮನೋಭಾವ ಬೆಳಸಿಕೊಳ್ಳಬೇಕು. ಆರ್‌ಟಿಐ ಕಾಯ್ದೆಗೆ ದೊಡ್ಡ ಶಕ್ತಿ ಇದೆ. ಇದರ ಸದ್ಬಳಕೆ ಆಗಬೇಕು. ಆರ್‌ಟಿಐ ಬಂದ ಮೇಲೆ ಹೋರಾಟಕ್ಕೆ ಶಕ್ತಿ ಬರುತ್ತಿದೆ. ಜನರಿಗೆ ಇದರಿಂದ ಧ್ವನಿ ಸಿಕ್ಕಿದೆ. ಹೋರಾಟಗಾರರು ಸಮಸ್ಯೆಗಳಿಗೆ ಹಿಂದೆ ಸರಿಯಬೇಡಿ. ಸರಿಯಾದ ಹೋರಾಟ ಮಾಡಿದರೆ ಇಡೀ ಸಮಾಜವೇ ನಿಮ್ಮ ಹಿಂದೆ ಇರುತ್ತದೆ ಎಂದು ತಿಳಿಸಿದರು.



'ಅಕ್ರಮ ಕಟ್ಟಡಗಳ ನಿರ್ಮಾಣ: ಸರ್ವೋಚ್ಛ ನ್ಯಾಯಾಲಯದ ಅಂಕುಶ' ಪುಸ್ತಕವನ್ನು ಅಂತಾರಾಷ್ಟ್ರೀಯ ವ್ಯಕ್ತಿತ್ವ ವಿಕಸನ ತರಬೇತುದಾರ ಆರ್.ಎ.ಚೇತನ್ ರಾಮ್ ಬಿಡುಗಡೆ ಮಾಡಿದರು.

ಇದೇ ವೇಳೆ 'ಮಾಹಿತಿ ಹಕ್ಕು ಕಾಯ್ದೆ ಅಧಿನಿಯಮ 2005– ಪಕ್ಷಿನೋಟ' ವಿಷಯ ಕುರಿತು ಗ್ರಾಹಕರ ಹಕ್ಕುಗಳು ಮತ್ತು ಮಾಹಿತಿ ಹಕ್ಕು ತಜ್ಞ, ವೈ.ವಿ.ಮುರಳೀಧರನ್, ಮಾಹಿತಿ ಹಕ್ಕು ಅಧ್ಯಯನ ಕೇಂದ್ರದ ಮುಖ್ಯಸ್ಥ ವೀರೇಶ್ ಬೆಳ್ಳೂರು ಮಾತನಾಡಿದರು.

ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಮಹಾರಾಜ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪ್ರೊ.ಕಾಳಚೆನ್ನೇಗೌಡ ಮಾತನಾಡಿ, ಮಾಹಿತಿ ಹಕ್ಕು ಕಾಯ್ದೆ ಸರ್ಕಾರಿ ವ್ಯವಸ್ಥೆಯನ್ನು ಸರಿದಾರಿಗೆ ತರುವ ನಿಟ್ಟಿನಲ್ಲಿ ಪರಿಣಾಮಕಾರಿಯಾದ ಕಾಯ್ದೆಯಾಗಿದೆ. ಅಧಿಕಾರಿಗಳು ಪ್ರಾಮಾಣಿಕವಾಗಿ ಇದ್ದರೆ ಹೆದರುವ ಅವಶ್ಯಕತೆ ಇಲ್ಲ. ಸರಿಯಾಗಿ ಇದ್ದರೆ ಯಾವುದೇ ಮಾಹಿತಿ ಕೇಳಿದರೂ ನೀಡಲಿ. ಜನಪ್ರತಿನಿಧಿಗಳಾಗಲಿ, ಅಧಿಕಾರಿಗಳಾಗಲಿ ಜನಪರವಾಗಿ ಕೆಲಸ ಮಾಡಲು ಮಾಹಿತಿ ಹಕ್ಕು ಕಾಯ್ದೆ ಸಮರ್ಪಕವಾಗಿದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಕರ್ನಾಟಕ ರಾಜ್ಯ ಮಾಹಿತಿ ಹಕ್ಕು ವೇದಿಕೆಯ, ರಾಜ್ಯ ವೇದಿಕೆ ಘಟಕದ ಸಂಸ್ಥಾಪಕ ರಾಜ್ಯಾಧ್ಯಕ್ಷ ಹೇಮಂತ್ ನಾಗರಾಜು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ವಿದೇಶದಲ್ಲಿದ್ದರೂ ಭಾರತೀಯ ನೃತ್ಯ ಕಲೆಯಲ್ಲಿ ವಿದುಷಿ ಇಂಚರ ಮೊಟ್ಟನ ಸಾಧನೆ; ಆದಿಚುಂಚನಗಿರಿ ಶ್ರೀಗಳ ಶ್ಲಾಘನೆ

ಮೈಸೂರು, ಜು.12(ಎಸ್‌ಪಿಎನ್)– ಭಾರತೀಯ ಪರಂಪರೆಯ ಭಾಗವಾಗಿರುವ ಶಾಸ್ತ್ರೀಯ ಸಂಗೀತ, ನೃತ್ಯ ಸೇರಿದಂತೆ ಇತರೆ ಕಲೆಗಳನ್ನು ವಿದೇಶದಲ್ಲಿ ಕಲಿತು ಮೈಸೂರಿನಲ್ಲಿ ಪ್ರದರ್ಶನ ನೀಡುತ್ತಿರುವುದು ಸಂತೋಷದ ಸಂಗತಿ. ಆದರೆ, ಈ ಕಲೆಯನ್ನು ಇಲ್ಲಿನವರು ಕಲಿಯಲು ಆಸಕ್ತಿ ತೋರದಿರುವುದು ಬೇಸರದ ಸಂಗತಿ ಎಂದು ಆದಿಚುಂಚನಗಿರಿ ಮಠಾಧೀಶರಾದ ಶ್ರೀ ನಿರ್ಮಲಾನಂದ ನಾಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ಮೈಸೂರು ರಾಮಕೃಷ್ಣನಗರದ ರಮಾಗೋವಿಂದ ಕಲಾಮಂದಿರದಲ್ಲಿ ಕಲಾಗಂಗೋತ್ರಿ ಫೌಂಡೇಶನ್ ವತಿಯಿಂದ ಸುಬ್ರಹ್ಮಣಿ ಮೊಟ್ಟನ ಹಾಗೂ ಉಷಾ ಗಣಪತಿ ದಂಪತಿಯ ಪುತ್ರಿ ಹಾಗೂ ವಿದುಷಿ ಅಖಿಲ ಚೇತನ್ ಅವರ ಶಿಷ್ಯೆ, ವಿದುಷಿ ಇಂಚರ ಮೊಟ್ಟನ ನೇತೃತ್ವದಲ್ಲಿ ನಡೆದ ನೃತ್ಯಾರಾಧನೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸುಬ್ರಹ್ಮಣಿ ಮೊಟ್ಟನ ಅವರು, ಅಮೆರಿಕಾದ ನ್ಯೂಜೆರ್ಸಿ ನಗರದಲ್ಲಿರುವ ಆದಿಚುಂಚನಗಿರಿ ಶಾಖಾಮಠದಲ್ಲಿ ಲೆಕ್ಕಾಧಿಕಾರಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಅವರ ಪುತ್ರಿ ಇಂಚರ ವಿದೇಶದಲ್ಲೇ ಶಾಸ್ತ್ರೀಯ ನೃತ್ಯವನ್ನು ಕಲಿತು ಮೈಸೂರಿನಲ್ಲಿ ಪ್ರದರ್ಶನ ನೀಡುತ್ತಿರುವುದು ಸಂತೋಷದ ಸಂಗತಿ. ಇತ್ತೀಚೆಗೆ ಭಾರತೀಯರು ಅಮೆರಿಕಾದಲ್ಲಿ ನೆಲೆ ಕಂಡುಕೊಳ್ಳಲು ಇಚ್ಛಿಸುತ್ತಿದ್ದಾರೆ. ಹಾಗೆ ನೆಲೆಗೊಂಡವರು ಇಲ್ಲಿನ ಸಂಸ್ಕೃತಿ, ಕಲೆ, ಪರಂಪರೆಗಳನ್ನು ಆಸಕ್ತಿ ವಹಿಸಿ ಕಲಿಯುತ್ತಿರುವುದು ಆಶ್ಚರ್ಯಕರ ಸಂಗತಿ ಎಂದರು.

ಒಂದು ಕಾಲಕ್ಕೆ ನಿವೃತ್ತ ಪ್ರಾಧ್ಯಾಪಕರು, ಚಿಂತಕರು, ಸಾಹಿತಿಗಳು ಹಾಗೂ ಕಲಾವಿದರು ಮೈಸೂರಲ್ಲಿ ನೆಲೆಸಲು ಆಸಕ್ತಿ ತೋರುತ್ತಿದ್ದರು. ಅದೇ ರೀತಿ ನ್ಯೂಜೆರ್ಸಿ ನಗರದಲ್ಲಿ ವಿದ್ಯಾವಂತರು, ಚಿಂತಕರು ಪ್ರಸ್ತುತ ನೆಲೆಸಿದ್ದಾರೆ. ಒಂದರ್ಥದಲ್ಲಿ ಮೈಸೂರನ್ನು, ನ್ಯೂಜೆರ್ಸಿ ನಗರಕ್ಕೆ ಹೋಲಿಸಿದರೆ, ಬೆಂಗಳೂರನ್ನು ನ್ಯೂಯಾರ್ಕ್ ನಗರಕ್ಕೆ ಹೋಲಿಸಬಹುದು ಎಂದರು.

ಒಂದು ನಗರವನ್ನು ಗುರುತಿಸುವುದು ಸಂಸ್ಕೃತಿ ಮತ್ತು ವ್ಯವಹಾರ ಕ್ಷೇತ್ರದ ಪ್ರಗತಿಯಿಂದ. ಹಾಗಾಗಿ ಬೆಂಗಳೂರು ನಗರ ಆರ್ಥಿಕವಾಗಿ, ಕೈಗಾರಿಕೆಯಲ್ಲಿ ಪ್ರಗತಿ ಹೊಂದುತ್ತಿದ್ದರೆ, ಮೈಸೂರು ನಗರ ಕಲೆ, ಸಂಸ್ಕೃತಿ, ಪರಂಪರೆಗೆ ಹೆಸರುವಾಸಿಯಾಗಿದೆ. ವಿಶ್ವ ಯೋಗ ದಿನಾಚರಣೆ ಆಚರಣೆಗೆ ಬಂದ ಮೇಲೆ ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲಿ ಯೋಗ ಆಚರಣೆ ಮಾಡುತ್ತಿದ್ದಾರೆ. ಯೋಗ, ಭಾರತೀಯ ಪರಂಪರೆಯ ಭಾಗ. ಖ್ಯಾತ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್ ನಮ್ಮ ಪರಂಪರೆ ಬಗ್ಗೆ ಮೆಚ್ಚುಗೆ ಮಾತುಗಳನ್ನಾಡಿದ್ದ ಪ್ರಸಂಗವನ್ನ ವಿವರಿಸಿದರು.

ಇತ್ತೀಚಿನ ದಿನಗಳಲ್ಲಿ ವೇದ, ಉಪನಿಷತ್ ಹಾಗೂ ರಾಮಾಯಣ, ಮಹಾಭಾರತ, ಭಗವದ್ಗೀತೆಯನ್ನು ವಿದೇಶಿಗರು ಬಹಳ ಆಸಕ್ತಿಯಿಂದ ಕಲಿತುಕೊಳ್ಳುತ್ತಿದ್ದಾರೆ. ಆದರೆ, ನಮ್ಮವರು ಇದನ್ನು ಕಲಿತುಕೊಳ್ಳಲು ಮೂಗುಮುರಿಯುತ್ತಿರುವುದು ಬೇಸರದ ಸಂಗತಿ. ಹಾಗಾಗಿ ಶಾಸ್ತ್ರೀಯ ಸಂಗೀತ, ನೃತ್ಯ, ಚಿತ್ರಕಲೆ,ವಾದ್ಯಪರಿಕರ ಕಲಿಕೆಗೆ ಆದ್ಯತೆ ನೀಡಬೇಕು ಎಂದು ಪೋಷಕರಲ್ಲಿ ಮನವಿ ಮಾಡಿದರು.

ಅಮೆರಿಕಾದ ನ್ಯೂಜೆರ್ಸಿ ನಗರದಲ್ಲಿ ಆದಿಚುಂಚನಗಿರಿ ಶಾಖಾಮಠದ ಲೆಕ್ಕಪತ್ರ ವಿಭಾಗದಲ್ಲಿ ಉಸ್ತುವಾರಿ ವಹಿಸಿರುವ ಸುಬ್ರಹ್ಮಣಿ ಮೊಟ್ಟನ ಅವರು, ತಮ್ಮ ಮಗಳಿಗೆ ನೃತ್ಯ ಕಲಿಕೆಗೆ ಪ್ರೋತ್ಸಾಹಿಸಿದ ಹಿನ್ನೆಲೆಯಲ್ಲಿ ಇಂದು ಮೈಸೂರಿನಲ್ಲಿ ನೃತ್ಯ ಪ್ರದರ್ಶನ ನೀಡುತ್ತಿದ್ದಾರೆ. ಯಾವುದೇ ಶಾಸ್ತ್ರೀಯ ಕಲೆಗಳು ಸಾರ್ವಜನಿಕ ಪ್ರದರ್ಶನವಾಗುವುದಿಲ್ಲ. ಅದು ಕೆಲವೇ ವೇದಿಕೆಗಳಿಗೆ ಮಾತ್ರ ಸೀಮಿತ ಪ್ರದರ್ಶನಗೊಳ್ಳುತ್ತದೆ ಎಂದರು.

ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ನೃತ್ಯಪಟು ಇಂಚರ ಮೊಟ್ಟನ ಅವರು, ನೃತ್ಯಪ್ರದರ್ಶನ ನೀಡಿ, ಪ್ರೇಕ್ಷಕರ ಮನಸೂರೆಗೊಂಡರು. ಈ ವೇಳೆ ಆದಿಚುಂಚನಗಿರಿ ಮೈಸೂರು ಶಾಖಾಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಹಾಸನ ಶಾಖಾಮಠದ ಶಂಭುನಾಥಸ್ವಾಮೀಜಿ, ಸರ್ವೇಶ್ವರ ನೃತ್ಯಕಲಾ ಮಂದಿರದ ವಿದುಷಿ ಪಂಕಜಾ ರಾಮಕೃಷ್ಣ ಸೇರಿದಂತೆ ಇತರೆ ಕಲಾವಿದರು ಉಪಸ್ಥಿತರಿದ್ದರು.





ವಿದುಷಿ ಅಖಿಲ ಚೇತನ್ ಅವರ ಶಿಷ್ಯೆ, ವಿದುಷಿ ಇಂಚರ ಮೊಟ್ಟನ ಪ್ರಸ್ತುತಪಡಿಸಿದ ನೃತ್ಯಾರಾಧನೆ ಕಾರ್ಯಕ್ರಮವನ್ನು ಆದಿಚುಂಚನಗಿರಿ ಮಠಾಧೀಶರಾದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿ, ಮಾತನಾಡಿದರು.

ಫೋಟೋಶೂಟ್ ನೆಪದಲ್ಲಿ ಗಂಡನನ್ನೇ ನದಿಗೆ ತಳ್ಳಿದ ಪತ್ನಿ

ರಾಯಚೂರು, ಜು.12– ಫೋಟೋ ತೆಗೆಯುವ ನೆಪದಲ್ಲಿ ಪತ್ನಿ ತನ್ನ ಪತಿಯನ್ನೇ ನದಿಗೆ ತಳ್ಳಿದ ಘಟನೆ ರಾಯಚೂರಿನಲ್ಲಿ ನಡೆದಿದೆ. ರಾಯಚೂರಿನ ಗುರ್ಜಾಪುರ ಬ್ರಿಡ್ಜ್ ಕಂ ಬ್ಯಾರೇಜ್ ಬಳಿ ಘಟನೆ ನಡೆದಿದ್ದು, ಫೋಟೊ ಶೂಟ್ ನೆಪದಲ್ಲಿ ಪತ್ನಿಯೇ ತನ್ನ ಪತಿಯನ್ನು ನದಿಗೆ ತಳ್ಳಿದ್ದಾರೆ. ಇದನ್ನು ಕಂಡ ಸ್ಥಳೀಯರು ಕೂಡಲೇ ಹಗ್ಗಗಳ ಸಹಾಯದಿಂದ ಪತಿಯನ್ನು ರಕ್ಷಣೆ ಮಾಡಿದ್ದಾರೆ. ಈ ಕುರಿತ ವಿಡಿಯೋ ಇದೀಗ ವ್ಯಾಪಕ ವೈರಲ್ ಆಗುತ್ತಿದೆ

ರಾಯಚೂರಿನ ಶಕ್ತಿನಗರ ನಿವಾಸಿ ತಾತಪ್ಪ ನೀರಿಗೆ ಬಿದ್ದ ನತದೃಷ್ಟ ಪತಿಯಾಗಿದ್ದು, ಅವರ ಪತ್ನಿ ಗದ್ದೆಮ್ಮ ನೀರಿಗೆ ತಳ್ಳಿದ್ದಾರೆ. ನೀರಿಗೆ ಬಿದ್ದ ಕೂಡಲೇ ನದಿಯಲ್ಲಿ ಈಜಿ ಕಲ್ಲು ಬಂಡೆಯ ಮೇಲೆ ನಿಂತು ಕಾಪಾಡಿ ಅಂತ ಕೂಗಿಕೊಂಡಿದ್ದಾರೆ. ಈ ವೇಳೆ ಬ್ರಿಡ್ಜ್ ಕಂ ಬ್ಯಾರೇಜ್ ಮಾರ್ಗವಾಗಿ ಹೊರಟಿದ್ದ ಬುಲೆರೋ ವಾಹನದಲ್ಲಿದ್ದವರು ಹಾಗೂ ಕೆಬಿಜೆಎನ್‌ಎಲ್ ಸಿಬ್ಬಂದಿ, ಸ್ಥಳೀಯರು ನದಿಗೆ ಹಗ್ಗ ಎಸೆದು ತಾತಪ್ಪ ಅವರನ್ನು ರಕ್ಷಿಸಿದ್ದಾರೆ.

ನದಿಯಿಂದ ಹೊರಗೆ ಬಂದ ಪತಿ ತನ್ನ ಪತ್ನಿಯ ವಿರುದ್ಧ ಗರಂ ಆಗಿದ್ದು, ಫೋನ್‌ನಲ್ಲಿ ಸಂಬಂಧಿಕರಿಗೆ ಮಾಹಿತಿ ನೀಡಿದ್ದಾರೆ. ಕಳೆದ ಎರಡು ದಿನಗಳ ಹಿಂದೆ ನಡೆದ ಘಟನೆಯ ವಿಡಿಯೋ ಈಗ ವೈರಲ್ ಆಗಿದೆ.

ಇಷ್ಟಕ್ಕೂ ಆಗಿದ್ದೇನು: ಯಾದಗಿರಿಯ ವಡಗೆರಾ ತಾಲೂಕಿನ ಗದ್ದೆಮ್ಮ ಹಾಗೂ ತಾತಪ್ಪ ಕಳೆದ ಏ.10ರಂದು ಮದುವೆಯಾಗಿದ್ದರು. ಮದುವೆಯಾಗಿ ಮೂರು ತಿಂಗಳಲ್ಲೇ ಸಂಸಾರದಲ್ಲಿ ಬಿರುಕು ಮೂಡಿ, ಜಗಳವಾಡುತ್ತಿದ್ದರು. ಆ ಜಗಳವೇ ಈ ಘಟನೆಗೆ ಕಾರಣ ಎಂದು ತಾತಪ್ಪ ಆರೋಪಿಸಿದ್ದಾರೆ.

ಇನ್ನು ಘಟನೆ ಕುರಿತು ಮಾತನಾಡಿರುವ ಪತಿ ತಾತಪ್ಪ, ಪತ್ನಿಯನ್ನು ನಂಬಿ ಫೋಟೋ ತೆಗೆಸಿಕೊಳ್ಳಲು ನಿಂತಿದ್ದೆ. ಆದರೆ ಆಕೆ ನನ್ನನ್ನು ನದಿಗೆ ತಳ್ಳಿದ್ದಾಳೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಆದರೆ ಪತ್ನಿ ಮಾತ್ರ ಈ ಆರೋಪ ಅಲ್ಲಗಳೆದಿದ್ದು, ನಾನು ಅವರನ್ನು ನದಿಗೆ ತಳ್ಳಿಲ್ಲ. ಅವರೇ ಕಾಲು ಜಾರಿ ನದಿಗೆ ಬಿದ್ದರು ಎಂದು ಹೇಳಿದ್ದಾರೆ.

ಘಟನೆ ಬಳಿಕ ಒಟ್ಟಾಗಿಯೇ ಬೈಕ್‌ನಲ್ಲಿ ಪತಿ–ಪತ್ನಿ ಹೊರಟು ಹೋಗಿದ್ದಾರೆ. ರಾಯಚೂರು ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಅಗತ್ಯ

ಸಚಿವ ಸತೀಶ್ ಜಾರಕಿಹೊಳಿ ಪುನರುಚ್ಚಾರ



ಬೆಂಗಳೂರು, ಜು.12– ಸಚಿವ ಸತೀಶ್ ಜಾರಕಿಹೊಳಿ ಅವರು ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಆಗಬೇಕು ಎಂದು ಪುನರುಚ್ಚರಿಸಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಪಿಸಿಸಿ ಅಧ್ಯಕ್ಷರ ಸ್ಥಾನ ಬದಲಾವಣೆ ಆಗಬೇಕು. ಈ ಬಗ್ಗೆ ಸಾಕಷ್ಟು ಬಾರಿ ಹೇಳಿದ್ದೇವೆ. ಅದನ್ನು ಪದೇ ಪದೆ ಹೇಳುವ ಅವಶ್ಯಕತೆ ಇಲ್ಲ. ಎಲ್ಲವನ್ನೂ ಹೈಕಮಾಂಡ್ ಗಮನಿಸುತ್ತಿದೆ. ಸೂಕ್ತ ನಿರ್ಧಾರವನ್ನು ಹೈಕಮಾಂಡ್ ನಾಯಕರು ಮಾಡುತ್ತಾರೆ ಎಂದು ಹೇಳಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿರುವ ವಿಚಾರವಾಗಿ ಪ್ರತಿಕ್ರಿಯಿಸಿ, ಭೇಟಿ ಕುರಿತು ಗುರುವಾರವೇ ಮಾತನಾಡಿದ್ದೇನೆ. ಊಟಕ್ಕಾಗಿ ಸೇರಿದ್ದೇವೆಯೇ ಹೊರತು ವಿಶೇಷವೇನೂ ಇಲ್ಲ. ಹಿಂದೆ ಕೂಡ ಖರ್ಗೆ ಅವರನ್ನು ಭೇಟಿ ಮಾಡಿದ್ದೆವು. ನಾವು ಆಗಾಗ ಭೇಟಿ ಮಾಡುತ್ತಿರುತ್ತೇವೆ. ಪಕ್ಷದ ಅಧ್ಯಕ್ಷರು ಅಂದ ಮೇಲೆ ಭೇಟಿ ಮಾಡಬೇಕಲ್ಲವೇ ಎಂದು ಪ್ರಶ್ನಿಸಿದರು.

ಭೇಟಿ ವೇಳೆ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಚರ್ಚಿಸಿದ್ದೀರಾ? ಎಂಬ ಪ್ರಶ್ನೆಗೆ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಚರ್ಚೆ ಆಗಿಲ್ಲ. ಸಮಯ ಬಂದಾಗ ಹೈಕಮಾಂಡ್ ಮಾಡಲಿದೆ. ನಾವು ಈಗಾಗಲೇ ಹೇಳಬೇಕಾದ್ದನ್ನು ಹೇಳಿದ್ದೇವೆ ಎಂದಷ್ಟೇ ಹೇಳಿದರು.

ಡಿಕೆಶಿ ಪ್ರತಿಕ್ರಿಯೆ: ಪಕ್ಷ ನನಗೆ ಕೆಪಿಸಿಸಿ ಅಧ್ಯಕ್ಷ ಮತ್ತು ಉಪಮುಖ್ಯಮಂತ್ರಿ ಹುದ್ದೆಯ ಜವಾಬ್ದಾರಿ ನೀಡಿದೆ. ಅದನ್ನು ಜವಾಬ್ದಾರಿಯುತವಾಗಿ ನಿಭಾಯಿಸುತ್ತೇನೆ. ಉಳಿದ ಯಾವ ವಿಚಾರಗಳಿಗೂ ನಾನು ಪ್ರತಿಕ್ರಿಯಿಸಲ್ಲ. ನನ್ನ ಗಮನವೇನಿದ್ದರೂ ಪಕ್ಷ ಮತ್ತು ಸರ್ಕಾರದ ಹಿತಾಸಕ್ತಿ ಕಾಪಾಡುವುದರ ಕಡೆಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿಕುಮಾರ್ ಪ್ರತಿಕ್ರಿಯಿಸಿದ್ದಾರೆ.

ಪ್ರಸ್ತಾಪಕ್ಕೆ ತಾತ್ಕಾಲಿಕ ಬ್ರೇಕ್!



ಬೆಂಗಳೂರು, ಜು. 12– ರಾಜ್ಯ ಕಾಂಗ್ರೆಸ್ ಪಾಳಯದಲ್ಲಿ ರಾಜಕೀಯದ ಚೆಸ್ ಗೇಮ್ ಭರ್ಜರಿಯಾಗಿ ನಡೆಯುತ್ತಿದೆ. ಸಿಎಂ ಸಿದ್ದರಾಮಯ್ಯ ದೆಹಲಿಯಲ್ಲೇ ಕೂತು ನಾನೇ ಐದು ವರ್ಷ ಸಿಎಂ ಎಂಬ ಸಂದೇಶ ಸಾರಿದರು. ಇದರ ಬೆನ್ನಲ್ಲೇ ಕೆಪಿಸಿಸಿ ಅಧ್ಯಕ್ಷ ಸ್ಥಾನದ ಬದಲಾವಣೆಗೆ ಸಚಿವರು ಪಟ್ಟು ಹಿಡಿದಿದ್ದಾರೆ. ಇದನ್ನೇ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಅವರ ಮುಂದೆ ಹೇಳಿದ್ದಾರೆ. ಒಬ್ಬರಿಗೆ ಒಂದೇ ಹುದ್ದೆ ನಿಯಮ ಇದ್ದು, ಅದನ್ನು ಅನುಷ್ಠಾನಕ್ಕೆ ತನ್ನಿ ಎಂದು ಸಚಿವರು ಆಗ್ರಹಿಸಿದ್ದಾರೆ.

ಸಚಿವರ ಒತ್ತಡಕ್ಕೆ ಎಐಸಿಸಿ ಮಲ್ಲಿಕಾರ್ಜುನ್ ಖರ್ಗೆ ಅವರು ಸ್ಪಷ್ಟ ಉತ್ತರ ನೀಡಿದ್ದಾರೆ. ಲೋಕಸಭಾ ಚುನಾವಣೆ ಮುಗಿದ ತಕ್ಷಣ ಇದನ್ನು ಮಂಡಿಸಬೇಕಿತ್ತು. ಸದ್ಯ ಬೇರೆ ರಾಜ್ಯಗಳ ಚುನಾವಣೆ ಇದ್ದ ಹಿನ್ನೆಲೆಯಲ್ಲಿ ಬದಲಾವಣೆ ಕಷ್ಟವಾಗುತ್ತದೆ. ಹೀಗಾಗಿ ನವೆಂಬರ್ ತನಕ ಯಾವುದೇ ಬದಲಾವಣೆಗಳು ಬೇಡ ಅಂತ ಹೇಳಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿದ ಮಾಜಿ ಸಂಸದ ಡಿ.ಕೆ.ಸುರೇಶ್, ಡಿ.ಕೆ. ಶಿವಕುಮಾರ್ ಅವರಿಗೆ ಬಲಾಬಲ ಪ್ರದರ್ಶಿಸುವ ಅಗತ್ಯ ಇಲ್ಲ. ಪ್ರಾಮಾಣಿಕವಾಗಿ ಪಕ್ಷವನ್ನ ಮುನ್ನಡೆಸುತ್ತಿದ್ದಾರೆ. ಯಾವುದೇ ಶಾಸಕರ ಬೆಂಬಲ ಕೇಳುವ ಸಮಯ ಅಲ್ಲ ಅಂತ ಹೇಳಿದ್ದಾರೆ.

ಕೊಲ್ಕತ್ತಾ ಐಐಎಂ ಬಾಲಕರ ಹಾಸ್ಟೆಲ್‌ನಲ್ಲಿ ಮಹಿಳೆ ಮೇಲೆ ಅತ್ಯಾಚಾರ; ವಿದ್ಯಾರ್ಥಿ ಬಂಧನ

ಕೊಲ್ಕತ್ತಾ: ಕೊಲ್ಕತ್ತಾದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಓದುತ್ತಿರುವ ಮಹಿಳೆಯ ಮೇಲೆ ಬಿಸಿನೆಸ್ ಸ್ಕೂಲ್‌ನ ಹಾಸ್ಟೆಲ್ ಒಳಗೆ ವಿದ್ಯಾರ್ಥಿಯೊಬ್ಬ ಅತ್ಯಾಚಾರ ಎಸಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಹರಿದೇವ್‌ಪುರ ಪೊಲೀಸ್ ಠಾಣೆಯಲ್ಲಿ ಮಹಿಳೆ ದಾಖಲಿಸಿದ ಎಫ್‌ಐಆರ್ ಆಧಾರದ ಮೇಲೆ ಆರೋಪಿಯನ್ನು ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ. ಐಐಎಂ–ಕೊಲ್ಕತ್ತಾದ ಬಾಲಕರ ಹಾಸ್ಟೆಲ್ ಒಳಗೆ ಶುಕ್ರವಾರ ಈ ಘಟನೆ ನಡೆದಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ತನ್ನನ್ನು ಕೌನ್ಸೆಲಿಂಗ್ ಸೆಷನ್‌ಗಾಗಿ ಹಾಸ್ಟೆಲ್‌ಗೆ ಕರೆಸಲಾಗಿತ್ತು ಎಂದು ಮಹಿಳೆ ದೂರಿನಲ್ಲಿ ಹೇಳಿದ್ದಾರೆ. ಮಹಿಳೆ ಕ್ಯಾಂಪಸ್‌ನ ವಿದ್ಯಾರ್ಥಿನಿಯಲ್ಲ. ಹಾಸ್ಟೆಲ್ ಅಥವಾ ಕಾಲೇಜು ರಿಜಿಸ್ಟರ್‌ನಲ್ಲಿ ಆಕೆ ಭೇಟಿಯ ವಿಷಯ, ಹೆಸರು ದಾಖಲಾಗಿಲ್ಲ. ಹಾಸ್ಟೆಲ್ ನಲ್ಲಿ ಪಿಜ್ಜಾ ಮತ್ತು ಡ್ರಗ್ಸ್ ಬೆರೆಸಿದ ಪಾನೀಯ ಸೇವಿಸಿದ ನಂತರ ಆಕೆ ಪ್ರಜ್ಞಾಹೀನಳಾಗಿದ್ದಾಳೆ. ಪ್ರಜ್ಞೆ ಮರಳಿದ ನಂತರ ತನ್ನ ಮೇಲೆ ಅತ್ಯಾಚಾರ ನಡೆದಿದೆ ಎಂದು ತಿಳಿದುಕೊಂಡಿದ್ದಾಗಿ ಮಹಿಳೆ ತಿಳಿಸಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಅಕ್ಯುಪ್ರೆಷರ್ ಸುಜೋಕ್ ಅಕ್ಯು ಡಿಜಿಟಲ್ ಚಿಕಿತ್ಸಾ ಶಿಬಿರ

ಮೈಸೂರು, ಜು. 12– ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್, ಹಿರಿಯ ನಾಗರಿಕರ ಮಂಡಳಿ ಮತ್ತು ಹಿರಿಯ ನಾಗರಿಕರ ವಿಶ್ವಸ್ಥ ಮಂಡಳಿ ಆಶ್ರಯದಲ್ಲಿ ಜು. 14 ರಿಂದ 21 ದಿನಗಳ ಕಾಲ ಜಯಲಕ್ಷ್ಮಿಪುರಂನ ಸರಸ್ವತಿ ಸಮುದಾಯ ಭವನದಲ್ಲಿ ಅಕ್ಯುಪ್ರೆಷರ್ ಸುಜೋಕ್ ಅಕ್ಯು ಡಿಜಿಟಲ್ ಫಿಸಿಯೋಥೆರಪಿ ಚಿಕಿತ್ಸಾ ಶಿಬಿರ ಆಯೋಜಿಸಲಾಗಿದೆ. ಶಿಬಿರದಲ್ಲಿ ಬಿಪಿ, ಶುಗರ್, ಬೊಜ್ಜು ನಿವಾರಣೆ, ಗ್ಯಾಸ್ಟ್ರಿಕ್, ಅಸ್ತಮಾ, ಅಜೀರ್ಣತೆ, ಅಲರ್ಜಿ, ಹಸಿರುನರ (ವೆರಿಕೋಸ್ ವೇನ್ಸ್), ಬೆನ್ನುನೋವು, ಸಯಾಟಿಕಾ, ಸಂಧಿವಾತ, ಥೈರಾಯ್ಡ್, ನಿದ್ರಾಹೀನತೆ, ಮೊಣಕಾಲು ನೋವು, ಕುತ್ತಿಗೆ ನೋವು, ಸ್ಪಾಂಡಿಲೈಟಿಸ್, ಮಲಬದ್ಧತೆ, ಹಿಮ್ಮಡಿ ನೋವು, ಪಾದಗಳ ಉರಿ ಇನ್ನಿತರ ರೋಗಗಳಿಗೆ ಚಿಕಿತ್ಸೆ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ಮೊ. 98451–82716, 98808 05994 ಸಂಪರ್ಕಿಸಬಹುದು.

ಸಿದ್ದರಾಮಯ್ಯರ ಮುಖ್ಯಮಂತ್ರಿ ಸ್ಥಾನ ಅಬಾಧಿತ

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಸ್ಪಷ್ಟನೆ

ಮೈಸೂರು, ಜು.12(ಬಿಎಲ್‌ಯು)– ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಮುಂದುವರೆಯುತ್ತಾರೆ ಎಂದು ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರೇ ಸ್ಪಷ್ಟಪಡಿಸಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬದಲಾವಣೆ ವಿಚಾರದ ಬಗ್ಗೆ ಚರ್ಚಿಸುವುದು ಅಪ್ರಸ್ತುತ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಸ್ಪಷ್ಟಪಡಿಸಿದ್ದಾರೆ.

ನಗರದ ಗೌರ್ನಮೆಂಟ್ ಗೆಸ್ಟ್‌ಹೌಸ್‌ನಲ್ಲಿ ಶನಿವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು, ಈಗಾಗಲೇ ಸಿದ್ದರಾಮಯ್ಯ ಅವರು ಕೂಡ ತಾವೇ ಐದು ವರ್ಷ ಸಿಎಂ ಆಗಿ ಮುಂದುವರೆಯುವುದಾಗಿ ಹೇಳಿರುವಾಗ ನಾವೇನು ಹೇಳುವುದು ಎಂದರು.

ಸಿದ್ದರಾಮಯ್ಯ ಅವರೇ ಐದು ವರ್ಷಗಳ ಕಾಲ ಮುಂದುವರೆಯುತ್ತಾರೆ ಎಂದು ಪುನಃ ಸ್ಪಷ್ಟಪಡಿಸಿದ ಡಾ.ಮಹದೇವಪ್ಪ ಅವರು, ಪಕ್ಷ ಸಂಘಟನೆಯಲ್ಲಿ ಪ್ರತಿಯೊಬ್ಬರ ಶ್ರಮವಿದೆ ಎಂದು ಹೇಳಿದರು.

ಒಂದು ಅಣೆಕಟ್ಟು ಕಟ್ಟಲು ಜಲ್ಲಿ ಕಲ್ಲು, ಸಿಮೆಂಟ್ ಸೇರಿದಂತೆ ಬಹಳಷ್ಟು ವಸ್ತುಗಳ ಅವಶ್ಯಕತೆ ಹೇಗೆ ಇರುತ್ತದೆಯೋ ಹಾಗೆಯೇ, ಪಕ್ಷ ಕಟ್ಟಲು ಸಾಮಾನ್ಯ ಕಾರ್ಯಕರ್ತರಿಂದ ಹಿಡಿದು ನಾಯಕರ ತನಕ ಎಲ್ಲರ ಶ್ರಮವಿದೆ. ಆದರೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಶ್ರಮ ಹೆಚ್ಚಾಗಿದೆ ಎಂದು ಡಾ.ಮಹದೇವಪ್ಪ ಅಭಿಪ್ರಾಯಪಟ್ಟರು.

ಮೈಸೂರಿನ ಅಭಿವೃದ್ಧಿಗೆ 2 ಸಾವಿರ ಕೋಟಿ ಅನುದಾನ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತವರು ಜಿಲ್ಲೆ ಮೈಸೂರಿಗೆ ಬೇರೆ ಬೇರೆ ಇಲಾಖೆಗಳಿಂದ ಸುಮಾರು 2,000 ಕೋಟಿ ಅನುದಾನ ನೀಡಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ಸಿದ್ದರಾಮಯ್ಯ ಅವರು ಜುಲೈ 17,18 ಮತ್ತು 19ರಂದು ಮೂರು ದಿನಗಳ ಕಾಲ ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ. ಜುಲೈ 19ರಂದು ವಿವಿಧ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸುವರು. ಅದರ ಪೂರ್ವಭಾವಿಯಾಗಿ ಇಂದು ಅಧಿಕಾರಿಗಳ ಸಭೆ ನಡೆಸಿದ್ದೇನೆ ಎಂದರು. ಸಾವಿರಾರು ಕೋಟಿ ರೂಪಾಯಿಗಳ ಯೋಜನೆಗೆ ಆರ್ಥಿಕ ಅನುಮೋದನೆ ನೀಡುವ ಹಿನ್ನೆಲೆ ಮೈಸೂರಿನಲ್ಲಿ ಬೃಹತ್ ಸಮಾವೇಶ ಮಾಡಲಾಗುತ್ತಿದೆ. ಇದು ಸರ್ಕಾರಿ ಕಾರ್ಯಕ್ರಮವಾಗಿದ್ದು, ನಮ್ಮ ಶಕ್ತಿ ಪ್ರದರ್ಶನಲ್ಲ ಎಂದು ಡಾ.ಮಹದೇವಪ್ಪ ಹೇಳಿದರು.

ಗುಣಮಟ್ಟದ ಚಿಕಿತ್ಸೆ ನೀಡುವಲ್ಲಿ ವೈಫಲ್ಯಕ್ಕೆ ವೈದ್ಯರು, ಸಿಬ್ಬಂದಿ ವಿರುದ್ಧ ಶಿಸ್ತು ಕ್ರಮ

● ಆರೋಗ್ಯ ಇಲಾಖೆ ಆದೇಶ ● ಇಲಾಖಾ ಯೋಜನೆಗಳ ಅನುಷ್ಠಾನ ಹೊಣೆಗಾರಿಕೆ ನಿಗದಿ ನಿರ್ಧಾರ

ಮೈಸೂರು, ಜು.12(ಎಸ್‌ಪಿಎನ್)– ಭಾರತ ಸರ್ಕಾರ ನಿಗದಿಪಡಿಸಿದ ಎನ್‌ಕ್ಯೂಎಎಸ್ ಮಾನದಂಡದಡಿ ಗುಣಮಟ್ಟದ ಚಿಕಿತ್ಸೆ ನೀಡಲು ವಿಫಲರಾದ ಸರ್ಕಾರಿ ಆಸ್ಪತ್ರೆಗಳ ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿ ವಿರುದ್ಧ ಶಿಸ್ತು ಕ್ರಮ ಜರುಗಿಸುವುದರ ಜೊತೆಗೆ ಇಲಾಖಾ ಯೋಜನೆಗಳ ಅನುಷ್ಠಾನಗೊಳಿಸುವ ಹೊಣೆಗಾರಿಕೆಯನ್ನು ನಿಗದಿಪಡಿಸಿ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಂಗಳವಾರ ಆದೇಶಿಸಿದೆ.

ಆರೋಗ್ಯ ಇಲಾಖೆ, 2021–2030ರ ದಶಕವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಗುಣಮಟ್ಟದ ಸೇವೆಗಳ ದಶಕವೆಂದು ಘೋಷಿಸಿದೆ. ಆರೋಗ್ಯ ಸೇವೆಯಲ್ಲಿ ಚಿಕಿತ್ಸೆಯ ವಿಳಂಬ ಹಾಗೂ ಔಷಧಿ ಸೇವನೆಯ ಕುರಿತು ಸಮಾಲೋಚನೆಯ ಕೊರತೆಯಿದೆ. ಈ ಕಾರಣದಿಂದಾಗಿ ಅಂತರರಾಷ್ಟ್ರಿಯ ಮಟ್ಟದಲ್ಲಿ ಭಾರತೀಯರ ಆರೋಗ್ಯದಲ್ಲಿ ಶೇ.50ಕ್ಕಿಂತಲೂ ಹೆಚ್ಚಿನ ಅನಾರೋಗ್ಯದ ಗುಣಮಟ್ಟವಿದೆಯೆಂದು ವರದಿಯಾಗಿದೆ.

ರೋಗಪೀಡಿತ ಆರೋಗ್ಯ ಸುಧಾರಣೆಗಾಗಿ ಆರೋಗ್ಯಕರ ಜೀವನಶೈಲಿಯನ್ನು ಉತ್ತೇಜಿಸುವುದು ಆರೋಗ್ಯ ಇಲಾಖೆ ಮೂಲತತ್ವವಾಗಿದೆ. ಸಾರ್ವಜನಿಕರು ಬಳಸುವ ಎಲ್ಲಾ ಆರೋಗ್ಯ ಸಂಸ್ಥೆಗಳಲ್ಲಿ ಗುಣಮಟ್ಟದ ಆರೋಗ್ಯ ಸೇವೆಗಳನ್ನು ಒದಗಿಸುವ ಮೂಲಕ ರೋಗಗಳನ್ನು ಗುಣಪಡಿಸಲು ಸಾಧ್ಯವಾಗಬೇಕು.

ಶೇ.25.15 ರಷ್ಟು ಗುಣಮಟ್ಟದ ಚಿಕಿತ್ಸೆ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಾರ್ಯವ್ಯಾಪ್ತಿಯ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ 2.6.2025 ರಂದು ಇದ್ದ ಅಂಕಿ–ಅಂಶಗಳ ಪ್ರಕಾರ, ಎನ್‌ಕ್ಯೂಎಎಸ್ ಮಾನದಂಡದಡಿ 9,371 ಆರೋಗ್ಯ ಕೇಂದ್ರಗಳ ಪೈಕಿ 2360 ಆರೋಗ್ಯ ಕೇಂದ್ರಗಳಲ್ಲಿ ಉತ್ತಮ ಚಿಕಿತ್ಸೆ ಸಾರ್ವಜನಿಕರಿಗೆ ಲಭ್ಯವಿದೆ. ಒಟ್ಟಾರೆ ರಾಜ್ಯದಲ್ಲಿ ಶೇ.25.15ರಷ್ಟು ಗುಣಮಟ್ಟದ ಚಿಕಿತ್ಸೆ ಸಾರ್ವಜನಿಕರಿಗೆ ದೊರಕುತ್ತಿದೆ. ಹಾಗಾಗಿ ಎಲ್ಲಾ ಸಾರ್ವಜನಿಕ ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಇತರೆ ಆರೋಗ್ಯ ಕೇಂದ್ರಗಳಲ್ಲಿ ನಿರೀಕ್ಷಿತ ಎನ್‌ಕ್ಯೂಎಎಸ್ ಪ್ರಮಾಣೀಕರಣ ಮತ್ತು ಗುಣಮಟ್ಟದ ಚಿಕಿತ್ಸೆಯ ಹೊಣೆಗಾರಿಕೆಯನ್ನು ನಿಗದಿಪಡಿಸಲು 4 ಷರತ್ತುಗಳನ್ನು ವಿಧಿಸಿದೆ.

ಷರತ್ತುಗಳು: ಯಾವ ಆರೋಗ್ಯ ಸಂಸ್ಥೆಯು ಮೂರು ತಿಂಗಳ ಒಳಗೆ ನಿರೀಕ್ಷಿತ ಮಟ್ಟದಲ್ಲಿ ಗುರಿಸಾಧಿಸುವಲ್ಲಿ ವಿಫಲವಾಗುವುದೋ, ಅಂತಹ ಸಂಸ್ಥೆಯನ್ನು ಎಬಿ–ಎಆರ್‌ಕೆ ಅಡಿಯ ತಂಡದ ಪ್ರೋತ್ಸಾಹ ಧನಕ್ಕೆ ಅನರ್ಹಗೊಳಿಸುವುದು (ಎಬಿ–ಎಆರ್‌ಕೆ ಪ್ರೋತ್ಸಾಹಕಗಳಲ್ಲಿ ಶೇ.30 ತಂಡಕ್ಕೆ ಮತ್ತು ಉಳಿದ ಶೇ.70ರಷ್ಟು ಆಸ್ಪತ್ರೆಯು ಹೆಲ್ತ್ ಬೆನಿಫಿಟ್ ಪ್ಯಾಕೇಜ್ ಪಡೆಯಲು ಅರ್ಹರಿರುತ್ತಾರೆ).

ಎನ್‌ಕ್ಯೂಎಎಸ್‌ನ ಸಾಧನೆಯನ್ನು ಆರು ತಿಂಗಳ ಒಳಗೆ ನಿರೀಕ್ಷಿತ ಮಟ್ಟದಲ್ಲಿ ಸಾಧಿಸತಕ್ಕದ್ದು ಇಲ್ಲವೆ ಆರೋಗ್ಯ ಕೇಂದ್ರದ ಮುಖ್ಯಸ್ಥರು ಮತ್ತು ವೈದ್ಯಕೀಯ, ಅರೆ ವೈದ್ಯಕೀಯ ಅಧಿಕಾರಿ, ಸಿಬ್ಬಂದಿಗಳ ವಾರ್ಷಿಕ ಕಾರ್ಯ ನಿರ್ವಹಣಾ ವರದಿಯಲ್ಲಿ ಷರಾ ದಾಖಲಿಸತಕ್ಕದು. ಜೊತೆಗೆ ಅಂತಹ ಮುಖ್ಯಸ್ಥರ ವರ್ಗಾವಣೆಗೆ ಲಿಂಕ್ ಮಾಡಲಾಗುವುದು.

ಈ ಆದೇಶ ಹೊರಬಿದ್ದ ದಿನದಿಂದ 9 ತಿಂಗಳೊಳಗೆ ಯಾವುದೇ ಸಾಧನೆಯಾಗದಿದ್ದರೆ, ಅಂತಹ ಆರೋಗ್ಯ ಸಂಸ್ಥೆಗಳಲ್ಲಿ ಕೆಲಸ ಮಾಡುವ ಎಲ್ಲಾ ಮುಖ್ಯಸ್ಥರ ಮತ್ತು ವೈದ್ಯಕೀಯ, ಅರೆ ವೈದ್ಯಕೀಯ ಅಧಿಕಾರಿ, ಸಿಬ್ಬಂದಿಗಳ ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿಯುವುದು. ಈ ಮೇಲಿನ ಎಲ್ಲಾ ಕ್ರಮಗಳ ಹೊರತಾಗಿಯೂ ಯಾವುದೇ ಪ್ರಗತಿ ಇಲ್ಲದಿದ್ದರೆ, ಆರೋಗ್ಯ ಸಂಸ್ಥೆಗಳ ಸಿಬ್ಬಂದಿಯನ್ನು ಕಳಪೆ ಗುಣಮಟ್ಟದ ಆರೈಕೆ, ಚಿಕಿತ್ಸೆ ಇತ್ಯಾದಿಗಳಿಗೆ ಹೊಣೆಗಾರರನ್ನಾಗಿ ಮಾಡುವುದು.ಈ ಮೇಲಿನ ಅಂಶಗಳ ಜಾರಿಗೆ ಆರೋಗ್ಯ ಸಂಸ್ಥೆಗಳಿಗೆ 3 ತಿಂಗಳ ಮುಂಗಡ ಅವಧಿಯನ್ನು ನೀಡಲಾಗಿದೆ ಎಂದು ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ(ಸೇವೆಗಳು–1) ಅಧೀನ ಕಾರ್ಯದರ್ಶಿ ಬಿ.ಎಸ್.ಪ್ರದೀಪ್ ಕುಮಾರ್ ಆದೇಶಿಸಿದ್ದಾರೆ.



ಮೈಸೂರಿನ ಜಿಲ್ಲಾ ಆಸ್ಪತ್ರೆ

ಆರೋಗ್ಯ ಸೌಲಭ್ಯಗಳ ಮಟ್ಟ	ಒಟ್ಟು ಸೌಲಭ್ಯಗಳ ಸಂಖ್ಯೆ. ಎಚ್‌ಡಿಐ 2022–23	ಪ್ರಸ್ತುತ ಪ್ರಗತಿ,	ಶೇಕಡವಾರು ಪ್ರಗತಿ
ಜಿಲ್ಲಾ ಆಸ್ಪತ್ರೆಗಳು(ಡಿಎಚ್)	14	10	71.43
ತಾಲೂಕು ಆಸ್ಪತ್ರೆಗಳು(ಟಿಎಚ್)	147	65	44.22
ಕ್ಲಸ್ಟರ್ ಆರೋಗ್ಯ ಕೇಂದ್ರ	212	64	30.19
ಪ್ರಾಥಮಿಕ ಆರೋಗ್ಯ ಕೇಂದ್ರ	2132	549	25.75
ಯುಪಿಎಚ್‌ಸಿ	365	175	47.95
ಎಎಎಂ–ಎಸ್‌ಸಿಎಸ್	6501	1497	23.03

"ಸಾರ್ವಜನಿಕರ ಆರೋಗ್ಯ ಸುಧಾರಣೆಗೆ ಇತ್ತೀಚೆಗೆ ಭಾರತ ಸರ್ಕಾರ ಅಭಿವೃದ್ಧಿಪಡಿಸಿದ ಎನ್‌ಕ್ಯೂಎಎಸ್ ಮಾನದಂಡವಾಗಿದೆ. ಸಾರ್ವಜನಿಕ ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳು, ಪ್ರಾಥಮಿಕ ಕೇಂದ್ರಗಳು ಮತ್ತು ಇತರೆ ಆರೋಗ್ಯ ಸಂಸ್ಥೆಗಳ ಗುಣಮಟ್ಟ ನಿರ್ಣಯಿಸುವ ಮತ್ತು ಪ್ರಮಾಣೀಕರಿಸುವ ಸಮಗ್ರ ವ್ಯವಸ್ಥೆಯಾಗಿದೆ. ಉತ್ತಮ ಕಾರ್ಯಕ್ಷಮತೆಯ ಆರೋಗ್ಯ ಕೇಂದ್ರಗಳನ್ನು ಗುರುತಿಸುವುದು. ಸಾರ್ವಜನಿಕ ಆರೋಗ್ಯ ರಕ್ಷಣೆಯ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವುದು ಮತ್ತು ರೋಗಿಗಳಿಗೆ ಒದಗಿಸಲಾದ ಆರೈಕೆಯ ಗುಣಮಟ್ಟವನ್ನು ಸುಧಾರಿಸುವುದು ಎನ್‌ಕ್ಯೂಎಎಸ್‌ನ ಮಾನದಂಡವಾಗಿದೆ.

\- ಬಿ.ಎಸ್.ಪ್ರದೀಪ್ ಕುಮಾರ್, ಸರ್ಕಾರದ ಅಧೀನ ಕಾರ್ಯದರ್ಶಿ

ಮೈಸೂರು ಮಿತ್ರ

ನೂರಾರು ಮಂದಿಗೆ ಕೋಟ್ಯಾಂತರ ರೂ ವಂಚನೆ

ಉಡುಪಿಯಲ್ಲಿ ಮೈಸೂರು ಜಿಲ್ಲೆಯ ಆರೋಪಿ ಬಂಧನ

ಅಂದು ಅಪ್ಪ, ಇಂದು ಮಗನಿಂದ ಗ್ರಾಮಸ್ಥರಿಗೆ ಮೋಸ

ಕಳೆದ ಹತ್ತು ವರ್ಷಗಳ ಹಿಂದೆ ಚಿಕ್ಕನರಸಯ್ಯ ಗ್ರಾಮದಲ್ಲಿ ಕೂಲಿ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದ. ಈ ವೇಳೆ ಗ್ರಾಮದ ಹಲವು ಜನರ ಬಳಿ ಸಾಲ ಮಾಡಿ ನಂತರ ಊರು ಬಿಟ್ಟು ಹೋಗಿದ್ದ. ಈಗ ಈತನ ಪುತ್ರ ಡಿ.ಎನ್.ನಾಗರಾಜು ಕೂಡ ಗ್ರಾಮಕ್ಕೆ ಆಗಮಿಸಿ ಕೆಲವರ ಸಂಪರ್ಕ ಪಡೆದು ಗ್ರಾಮದ ನೂರಾರು ಮಂದಿಗೆ ಕೋಟ್ಯಾಂತರ ರೂ ಹಣ ವಂಚಿಸಿದ್ದಾನೆ. ಅಂದು ಅಪ್ಪ, ಇಂದು ಮಗನಿಂದ ಗ್ರಾಮಸ್ಥರು ಮೋಸಹೋದಂತಾಗಿದೆ.

ಮಂಡ್ಯ: ನನ್ನ ಬ್ಯಾಂಕ್ ಖಾತೆಯಲ್ಲಿರುವ 250 ಕೋಟಿ ಹಣಕ್ಕೆ ಟಿಡಿಎಸ್ ಕಟ್ಟಬೇಕು. ಈಗ ನೀವು ಹಣ ಕೊಟ್ಟರೆ ನಾನು ನೀವು ಕೊಡುವ ಹಣಕ್ಕೆ ಡಬಲ್ ಕೊಡುವೆ ಎಂದು ಜನರನ್ನು ನಂಬಿಸಿ ನೂರಾರು ಮಂದಿಗೆ ಕೋಟ್ಯಾಂತರ ರೂ. ಹಣ ವಂಚಿಸಿದ್ದ ಆರೋಪಿಯನ್ನು ಮಂಡ್ಯ ಪೊಲೀಸರು ಬಂಧಿಸಿದ್ದಾರೆ.

ಮೂಲತಃ ಮೈಸೂರು ಜಿಲ್ಲೆ ಹುಣಸೂರಿನ ನಿವಾಸಿ ಡಿ.ಎನ್.ನಾಗರಾಜು ಎಂಬಾತನೇ ಹಣ ವಂಚಿಸಿ ಬಂಧಿತನಾಗಿರುವ ಅರೋಪಿಯಾಗಿದ್ದು, ಜಿ.ಕೆಬ್ಬಹಳ್ಳಿ ಗ್ರಾಮದ ಕೆ.ಎಸ್.ಚೇತನ್ ಮತ್ತು ಇತರರು ನೀಡಿರುವ ದೂರಿನ ಆಧಾರದ ಮೇಲೆ ಆರೋಪಿಯನ್ನು ಉಡುಪಿಯಲ್ಲಿ ಪೊಲೀಸರು ಬಂಧಿಸಿದ್ದಾರೆ.

ಹತ್ತು ವರ್ಷಗಳ ಹಿಂದೆ ಹುಣಸೂರಿನ ಕೆಂಪಯ್ಯ ಮತ್ತು ಈತನ ಮಗ ಚಿಕ್ಕನರಸಯ್ಯ ದ್ಯಾಪಸಂದ್ರ ಗ್ರಾಮದಲ್ಲಿ ಕೂಲಿ ಕೆಲಸ ಮಾಡಿಕೊಂಡು ಜೀವನ ನಡೆ ಸುತ್ತಾ ಅವರಿವರ ಬಳಿ ಸಾಲ ಮಾಡಿ ಊರು ಬಿಟ್ಟು ಹೋಗಿದ್ದರು. 2020–21ನೇ ಸಾಲಿನಲ್ಲಿ ಚಿಕ್ಕನರಸಯ್ಯನ ಮಗ ಡಿ.ಎನ್.ನಾಗರಾಜು ದ್ಯಾಪಸಂದ್ರ ಗ್ರಾಮಕ್ಕೆ ಬಂದು ಗ್ರಾಮದ ಡಿ.ಆರ್. ಚಂದ್ರಶೇಖರ, ನಾಗಯ್ಯ ಎಂಬುವರೊಂದಿಗೆ ಸಂಪರ್ಕವಿಟ್ಟುಕೊಂಡಿದ್ದ.

ಪೊಲೀಸ್ ಕಮಿಷನರ್ ಕೋದಂಡರಾಮಯ್ಯ ನನಗೆ ತುಂಬಾ ಹತ್ತಿರವಿದ್ದು, ಅವರ ಬಳಿ ಸಾವಿರಾರು ಕೋಟಿ ರೂ. ಹಣವಿದೆ. ಈ ಸಾವಿರಾರು ಕೋಟಿ ರೂ. ಹಣದ ಪೈಕಿ 250 ಕೋಟಿ ರೂ. ಹಣ ನನ್ನ ಖಾತೆಗೆ ಜಮಾ ಆಗಿದೆ. ಇದನ್ನು ಚಲಾವಣೆ ಮಾಡಲು ಟಿಡಿಎಸ್ ಕಟ್ಟಬೇಕು ಎಂದು ನಂಬಿಸಿ ರಾಮಲಿಂಗೇಗೌಡ ಎಂಬುವರಿಂದ 2 ಕೋಟಿ ರೂ.ಗಳನ್ನು ಪಡೆದುಕೊಂಡಿದ್ದ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಗ್ರಾಮದ ಇನ್ನೂ ಹಲವು ಜನರಿಗೆ ಇದೇ ರೀತಿ ನಂಬಿಸಿದ್ದಾನೆ. ಅವರುಗಳು ಫೋನ್‌ಪೇ ಹಾಗೂ ಬ್ಯಾಂಕ್ ಖಾತೆಗೆ ನೇರವಾಗಿ ಹಣ ಕೊಟ್ಟಿದ್ದಾರೆ. ಈ ವಿಷಯ ಕೆ.ಎಸ್.ಚೇತನ್ ಅವರಿಗೆ ತಿಳಿದು ಜಿ. ಕೆಬ್ಬಹಳ್ಳಿ ಸೇರಿದಂತೆ ಅಕ್ಕಪಕ್ಕದ ಗ್ರಾಮದ ಸ್ನೇಹಿತರಿಗೂ ವಿಚಾರ ಹಬ್ಬಿತು. ಕೆ.ಎಸ್. ಚೇತನ್ ಅವರು ಇದೇ ವಿಚಾರವಾಗಿ ಡಿ.ಎನ್.ನಾಗರಾಜುನನ್ನು ಖುದ್ದಾಗಿ ಡಿ.ಆರ್.ಚಂದ್ರಶೇಖರ್ ಮುಖಾಂತರ ಸಂಪರ್ಕಿಸಿ ಮಾತನಾಡಿದಾಗ, ನೀವು ನನಗೆ ಒಂದು ಲಕ್ಷ ರೂ ಹಣವನ್ನು ನೀಡಿದರೆ ನಾನು ಒಂದು ತಿಂಗಳ ಬಳಿಕ ನಂತರ 10 ಲಕ್ಷ ರೂ. ಹಣ ನೀಡುವುದಾಗಿ ಆಸೆ ಹುಟ್ಟಿಸಿದ್ದ ಎನ್ನಲಾಗಿದೆ.

ಈತನ ಮಾತುಗಳಿಗೆ ಮರುಳಾದ ಕೆ.ಎಸ್.ಚೇತನ್‌ನದ್ದು 38 ಲಕ್ಷ ರೂ. ಹಣ ಸೇರಿದಂತೆ ಸುಮಾರು 200ಕ್ಕೂ ಹೆಚ್ಚು ಜನರ ಬಳಿ ಕೋಟಿಗಟ್ಟಲೆ ಹಣ ಪಡೆದು ಮೋಸ ಮಾಡಿ ಗ್ರಾಮ ತೊರೆದು ಹೋಗಿದ್ದಾನೆ ಎಂದು ಆರೋಪಿಸಲಾಗಿದೆ. ಕೆ.ಎಸ್.ಚೇತನ್ ಸೇರಿದಂತೆ ಹಲವಾರು ಜನರನ್ನು ಮೈಸೂರಿಗೆ ಕರೆದುಕೊಂಡು ಹೋಗಿ ಆಡಿಟರ್‌ರೊಬ್ಬರ ಕಚೇರಿಯಲ್ಲಿ ಸುಮಾರು ಜನರಿಗೆ ಐಟಿ ಪೈಲ್ ಮಾಡಿಸಿ ತನ್ನ ಮೇಲೆ ಯಾರಿಗೂ ಅನುಮಾನ ಬರದಂತೆ ಕೋಟಿಗಟ್ಟಲೆ ಹಣ ಪಡೆದುಕೊಂಡಿದ್ದಾನೆ ಎಂದು ದೂರಲಾಗಿದೆ.

ಈತ ಕೂಲಿ ಕೆಲಸದವನಾಗಿದ್ದರೂ ಬಹಳ ಚಾಣಾಕ್ಯ ವ್ಯಕ್ತಿಯಾಗಿದ್ದು, ಈತನಿಗೆ ಮೂವರು ಪತ್ನಿಯರಿದ್ದು ಎಲ್ಲರಿಗೂ ಒಡವೆ, ವಸ್ತ್ರ, ಮನೆ, ಸೈಟುಗಳನ್ನು ಮಾಡಿ ಕೊಟ್ಟಿದ್ದಾನೆ. ಆಡಿಟರ್ ಬಳಿ 25 ಕೋಟಿ ರೂ. ಹಣವಿದ್ದು, ಆ ಹಣವನ್ನು ನಿಮಗೆ ಹಂತ ಹಂತವಾಗಿ ಕೊಡಿಸುವುದಾಗಿ ನಂಬಿಸಿ ಮೋಸ ಮಾಡಿದ್ದಾನೆ. ಮೈಸೂರಿನ ಚಾಮರಾಜ ರಸ್ತೆಯಲ್ಲಿರುವ ಹೆಚ್‌ಡಿಎಫ್‌ಸಿ ಬ್ಯಾಂಕ್ ಲಾಕರ್‌ನಲ್ಲಿ ಎರಡೂವರೆ ಕೋಟಿ ರೂ. ಹಣವಿದೆ. ಅದನ್ನು ನಿಮಗೆ ಕೊಡುತ್ತೇನೆಂದು ಬ್ಯಾಂಕಿಗೆ ಕರೆದುಕೊಂಡು ಹೋಗಿ ವಂಚಿಸಿದ್ದಾನೆ ಎಂದು ಆರೋಪಿಸಲಾಗಿದೆ. ಕೆ.ಎಸ್. ಚೇತನ್ ಹಾಗೂ ಇತರರಿಂದ ದೂರನ್ನು ಸ್ವೀಕರಿಸಿದ ಕೆರಗೋಡು ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಉಡುಪಿಯಲ್ಲಿ ಆರೋಪಿಯನ್ನು ಬಂಧಿಸಿದ್ದಾರೆ. ತನಿಖೆ ಮುಂದುವರೆದಿದೆ.

> ಯಾವುದೋ ದಾಖಲೆಗಳನ್ನಿಟ್ಟುಕೊಂಡು ಟಿಡಿಎಸ್ ಕಟ್ಟಿದರೆ 250 ಕೋಟಿ ಹಣ ಬರುತ್ತದೆ ಎಂದು ನಂಬಿಸಿ ಜನರಿಂದ ಹಣ ಪಡೆದು ಕೋಟ್ಯಾಂತರ ರೂ. ಹಣ ವಂಚಿಸಿದ್ದಾನೆ. ಇದಲ್ಲದೆ ರೈಸ್‌ಪುಲ್ಲಿಂಗ್ ಮತ್ತು ಹಣ ಡಬ್ಲಿಂಗ್ ಹೆಸರಿನಲ್ಲೂ ಹಣ ವಸೂಲಿ ಮಾಡಿದ್ದಾನೆ. ಸದ್ಯ ಆರೋಪಿ ಡಿ.ಎನ್. ನಾಗರಾಜು ಪೊಲೀಸ್ ಕಸ್ಟಡಿಯಲ್ಲಿದ್ದು ವಿಚಾರಣೆ ನಡೆಸಲಾಗುತ್ತಿದೆ.
>
> – ಮಲ್ಲಿಕಾರ್ಜುನ ಬಾಲದಂಡಿ, ಜಿಲ್ಲಾ ಪೊಲೀಸ್ ಅಧೀಕ್ಷಕರು, ಮಂಡ್ಯ

ಮೇಲುಕೋಟೆ ಚೆಲುವ ನಾರಾಯಣ ಸ್ವಾಮಿಗೆ ವೇದ ಮಂತ್ರಗಳೊಂದಿಗೆ ಮಹಾಭಿಷೇಕ



ಮೂಲಮೂರ್ತಿ ಚೆಲುವನಾರಾಯಣಸ್ವಾಮಿಗೆ ಮಹಾಭಿಷೇಕ.

ಮೇಲುಕೋಟೆ, ಜು.12– ಮೈಸೂರು ದೊರೆ ಮುಮ್ಮಡಿ ಶ್ರೀಕೃಷ್ಣರಾಜ ಒಡೆಯರ್‌ರ ಜನ್ಮನಕ್ಷತ್ರದ ಶುಭ ದಿನವಾದ ಶನಿವಾರ ಮೂಲ ಮೂರ್ತಿ ಚೆಲುವ ನಾರಾಯಣಸ್ವಾಮಿಗೆ ವೇದ ಮಂತ್ರಗಳೊಂದಿಗೆ ಮಹಾಭಿಷೇಕ ನೆರವೇರಿತು.

ಆಷಾಢ ಬಹುಳ ಉತ್ತರಾಷಾಡ ನಕ್ಷತ್ರ ಕೂಡಿದ ದಿವ್ಯ ಶುಭಗಳಿಗೆಯಲ್ಲಿ ಸ್ವಾಮಿಗೆ ಮಹಾಭಿಷೇಕ ನೆರವೇರಿಸಿ ಲೋಕಕಲ್ಯಾಣಕ್ಕಾಗಿ ಪ್ರಾರ್ಥಿಸಲಾಯಿತು. ವೇದ ಮಂತ್ರಗಳೊಂದಿಗೆ ಹಾಲು, ಮೊಸರು, ಜೇನು, ಗಂದ, ಎಳೆನೀರು ಕುಂಭಾಭಿಷೇಕದೊಂದಿಗೆ ನಡೆದ ಮಹಾಭಿಷೇಕದ ವೈಭವದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಅವರ ಧರ್ಮ ಪತ್ನಿ ಧನಲಕ್ಷ್ಮಿ, ರಾಜ್ಯಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಕಾಡೇನಹಳ್ಳಿ ನಾಗಣ್ಣಗೌಡ, ಹುಬ್ಬಳ್ಳಿ ಶಾಸಕ ಮಹೇಶ್ ಟೆಂಗಿನಕಾಯಿ ಕಾರ್ಯನಿರ್ವಾಹಕ ಅಧಿಕಾರಿ ಶೀಲಾ ಸೇರಿದಂತೆ ಸಹಸ್ರಾರು ಭಕ್ತರು ಪಾಲ್ಗೊಂಡಿದ್ದರು. ಮಹಾಭಿಷೇಕ ನಡೆಯುತ್ತಿದ್ದ ವೇಳೆ ನಾಡಿನ ವಿವಿಧ ಭಾಗಗಳಿಂದ ಬಂದಿದ್ದ ಸಹಸ್ರಾರುಭಕ್ತರಿಗೆ ನಿರಾಶೆಯಾಗದಂತೆ ದೇವರದರ್ಶನಕ್ಕೆ ವ್ಯವಸ್ಥೆಮಾಡಲಾಗಿತ್ತು.

ಶ್ರೀಮಠದಲ್ಲಿ ಡಾ.ನಿರ್ಮಲಾನಂದನಾಥ ಸ್ವಾಮೀಜಿಗೆ ಗುರು ವಂದನೆ

ಒಂಬತ್ತು ಮಂದಿ ಸನ್ಯಾಸತ್ವ ಸ್ವೀಕಾರ



ಸಮಾರಂಭವನ್ನು ವಿವಿಧ ಮಠಾಧೀಶರು ಉದ್ಘಾಟಿಸಿದರು.

ನಾಗಮಂಗಲ: ತಾಲೂಕಿನ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದಲ್ಲಿ ಗುರು ಪೂರ್ಣಿಮೆ ಮಹೋತ್ಸವ ಕಾರ್ಯಕ್ರಮವನ್ನು ಹಾಗೂ ಪೀಠಾಧ್ಯಕ್ಷರಾದ ಡಾ.ನಿರ್ಮಲಾನಂದನಾಥ ಸ್ವಾಮೀಜಿಯವರಿಗೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ಶ್ರೀ ಕ್ಷೇತ್ರದ ಬಿಜಿಎಸ್ ಸಭಾಂಗಣದಲ್ಲಿ ಶ್ರೀಗಳಿಗೆ ಚಿನ್ನದ ಕಿರೀಟಧಾರಣೆ ಮಾಡಿ ಚಿನ್ನ ಲೇಪಿತ ಶಾಲು ಹೊದಿಸಿ ಕಂಠಿ ಹಾರ ಸೇರಿದಂತೆ ನಾನಾ ಬಗೆಯ ಪುಷ್ಪಗಳಿಂದ ಪುಷ್ಪಾರ್ಚನೆ ಮಾಡಿ ಮಹಾ ಮಂಗಳಾರತಿ ನಂತರ ಗುರುವಂದನೆ ಸಲ್ಲಿಸಲಾಯಿತು.

ನಂತರ ಭಕ್ತರು ಹಾಗೂ ಗಣ್ಯರು ನಮನ ಸಲ್ಲಿಸಿ ಶ್ರೀಗಳ ಆಶೀರ್ವಾದ ದೊಂದಿಗೆ ಸಂಭ್ರಮ ಸಡಗರದಿಂದ ನೆರವೇರಿತು. ಕ್ಷೇತ್ರದ ಆದಿ ದೇವತೆ ಶ್ರೀ ಕಾಲಭೈರವೇಶ್ವರ ಸ್ವಾಮಿ ಹಾಗೂ ಗಂಗಾಧರೇಶ್ವರ ಸ್ವಾಮಿ ಸೇರಿದಂತೆ ಕ್ಷೇತ್ರದ ದೇವರುಗಳಿಗೆ ವಿಶೇಷ ಪೂಜೆ ನೆರವೇರಿಸಿದರು. ಶ್ರೀ ಕ್ಷೇತ್ರದ ಬಸವ, ಶ್ವಾನ ಸೇರಿದಂತೆ ಭಕ್ತರು ಗಿರಿ ಪ್ರದಕ್ಷಿಣೆ ಮಾಡಿ ಉತ್ಸವ ಮೂರ್ತಿಗಳಿಗೆ ವಿಶೇಷ ಪೂಜೆ ಸಲ್ಲಿಸಿದರು.

ಇದೇ ಸಂದರ್ಭದಲ್ಲಿ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದಲ್ಲಿ ಪುಣ್ಯ ಕಾರ್ಯಕ್ರಮದಲ್ಲಿ 9 ಮಂದಿ ಬ್ರಹ್ಮಚಾರಿಗಳಿಗೆ ಪೀಠಾಧ್ಯಕ್ಷರಾದ ಡಾ.ನಿರ್ಮಲಾ ನಂದ ಸ್ವಾಮೀಜಿ, ಸನ್ಯಾ ಸತ್ವ ದೀಕ್ಷೆ ನೀಡಿದರು.

ಈ ದೀಕ್ಷೆಯಲ್ಲಿ ಶ್ರೀ ಸಾಯಿ ಕೀರ್ತಿನಾಥ ಸ್ವಾಮೀಜಿ, ಸತ್‌ಕೀರ್ತಿನಾಥ ಸ್ವಾಮೀಜಿ, ಸಂವಿಧಾನ ರಥ ಸ್ವಾಮೀಜಿ, ನಿಶ್ಚಿಲಾನಂದ ನಾಥ ಸ್ವಾಮೀಜಿ, ನಾದಮಯ ನಂದನಾಥ ಸ್ವಾಮೀಜಿ, ರಾಜಯೋಗ ನಂದನಾಥ ಸ್ವಾಮೀಜಿ, ವಿಜಯೇಂದ್ರನಾಥ ಸ್ವಾಮೀಜಿ, ಗಜೇಂದ್ರ ನಾಥ ಸ್ವಾಮೀಜಿ, ಸನ್ಯಾಸತ್ವ ದೀಕ್ಷೆ ಸ್ವೀಕರಿಸಿದರು. ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಪ್ರಧಾನ ಕಾರ್ಯದರ್ಶಿ ಶ್ರೀ ಪ್ರಸನ್ನ ನಾಥ ಸ್ವಾಮೀಜಿ ಪ್ರಾಸ್ತವಿಕ ನುಡಿಗಳ ನಾಡಿದರು

ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ್, ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಶ್ರೀ ಪುರುಷೋತ್ತಮಾ ನಂದನಾಥ ಸ್ವಾಮೀಜಿ, ಪ್ರಕಾಶನಾಥ ಸ್ವಾಮೀಜಿ, ಅನ್ನದಾನೇಶ್ವರ ರಥ ಸ್ವಾಮೀಜಿ, ಗುಣನಂದ ಸ್ವಾಮೀಜಿ, ಮಂಗಳನಾಥ ಸ್ವಾಮೀಜಿ, ಸೌಮ್ಯನಾಥ ಸ್ವಾಮೀಜಿ, ವೇದ ವಿದ್ಯಾಂಶ ರಾಮಚಂದ್ರ, ಜಯಕರ ಶೆಟ್ಟಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಇದಕ್ಕೂ ಮೊದಲು ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಭಕ್ತರಿಗೆ ಆಶೀರ್ವಚನ ನೀಡಿದರು.

ಇಂದು ಮಾತೃಗೊಂದು ಮರ-ಸಹಸ್ರ ಸಹಸ್ರ ಗಿಡನೆಡುವ ಅಭಿಯಾನ

ಮಂಡ್ಯ: ಕರ್ನಾಟಕ ಲೋಕಾಯುಕ್ತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಅರಣ್ಯ ಇಲಾಖೆ, ವಕೀಲರ ಸಂಘ ಹಾಗೂ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ 2025ರ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಮಾತೃಗೊಂದು ಮರ– ಸಹಸ್ರ ಸಹಸ್ರ ಗಿಡನೆಡುವ ಅಭಿಯಾನವನ್ನು ಜುಲೈ 13 ರಂದು ಬೆಳಗ್ಗೆ 9.30 ಗಂಟೆಗೆ ನಾಗಮಂಗಲ ತಾಲೂಕಿನ ಕಸಬಾ ಹೋಬಳಿಯ ಕಾಚೇನಹಳ್ಳಿ–ಅಂಕುಶಾಪುರದಲ್ಲಿ ಆಯೋಜಿಸ ಲಾಗಿದೆ.

ಮುಖ್ಯ ಅತಿಥಿಗಳಾಗಿ ಕರ್ನಾಟಕ ಉಚ್ಚನ್ಯಾಯಾಲಯದ ನ್ಯಾಯಮೂರ್ತಿಗಳಾದ ಎಸ್.ಜಿ.ಪಂಡಿತ್, ಬಿ.ಎಂ.ಶ್ಯಾಮ್ ಪ್ರಸಾದ್, ಎಸ್.ರಾಚಯ್ಯ, ಟಿ.ಎಂ.ನಡಾಫ್ ಉಪಲೋಕಾಯುಕ್ತರುಗಳಾದ ಕೆ.ಎನ್.ಫಣೀಂದ್ರ, ಬಿ.ವೀರಪ್ಪ, ಕರ್ನಾಟಕ ರಾಜ್ಯ ಗ್ರಾಹಕ ಆಯೋಗದ ಅಧ್ಯಕ್ಷರಾದ ಟಿ.ಜಿ.ಶಿವಶಂಕರೇಗೌಡ ಆಗಮಿಸಲಿದ್ದಾರೆ.

ಹಲಗೂರಲ್ಲಿ ಕೆಂಪೇಗೌಡ ಜಯಂತಿ ಆಚರಣೆ



ಸಮಾರಂಭದಲ್ಲಿ ಡಾ.ನಿಶ್ಚಲಾನಂದನಾಥ ಸ್ವಾಮೀಜಿ ಅವರನ್ನು ಸನ್ಮಾನಿಸಲಾಯಿತು.

ಹಲಗೂರು: ನಾಡಪ್ರಭು, ಧರ್ಮಪ್ರಭು ಬೆಂಗಳೂರು ನಿರ್ಮಾತೃ ಕೆಂಪೇಗೌಡರ ಜಯಂತಿಯನ್ನು ಮಳವಳ್ಳಿ ತಾಲೂಕಿನ ಹಲಗೂರು ಹೋಬಳಿಯಲ್ಲಿ ವಿವಿಧ ಸಂಘಟನೆಗಳ ವತಿಯಿಂದ ವಿಜೃಂಭಣೆಯಿಂದ ಆಚರಿಸಲಾಯಿತು.

ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿದ್ದ ಪರಮಪೂಜ್ಯ ಡಾ.ನಿಶ್ಚಲಾನಂದನಾಥ ಸ್ವಾಮೀಜಿಯವರನ್ನು ಪಟ್ಟಲದಮ್ಮ ದೇವಾಲಯದಿಂದ ಸಾರೋಟಿನಲ್ಲಿ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ವೇದಿಕೆಗೆ ಕರೆ ತರಲಾಯಿತು. ಮೆರವಣಿಗೆಯಲ್ಲಿ ಪೂರ್ಣಕುಂಭ, ತಮಟೆ–ನಗಾರಿ, ಪೂಜಾಕುಣಿತ, ವೀರಗಾಸೆ ಸೇರಿದಂತೆ ಜಾನಪದ ಕಲಾತಂಡಗಳು ಭಾಗವಹಿಸಿ ಜನರಲ್ಲಿ ಸಂಭ್ರಮ ಮೂಡಿಸಿದವು.

ಕಾರ್ಯಕ್ರಮವನ್ನು ಡಾ.ನಿಶ್ಚಲಾನಂದನಾಥ ಸ್ವಾಮೀಜಿ ಜ್ಯೋತಿ ಬೆಳಗಿಸಿ ಉದ್ಘಾಟಿಸಿದರು. ನಂತರ ನಡೆದ ಸಭೆಯಲ್ಲಿ ನವ ಕರ್ನಾಟಕ ಯುವಶಕ್ತಿಯ ರಾಜ್ಯಾಧ್ಯಕ್ಷ ಕೆ.ಎನ್.ಲಿಂಗೇಗೌಡ ಮಾತನಾಡಿ, ಬೆಂಗಳೂರಿನ ಸ್ಥಾಪಕರಾದ ಕೆಂಪೇಗೌಡರ ಜಯಂತಿಯನ್ನು ಮಂಡ್ಯ ಜಿಲ್ಲೆಯ ಮಣ್ಣಿನಲ್ಲಿ, ವಿಶೇಷವಾಗಿ ಹಲಗೂರಿನಲ್ಲಿ ಜನಪದ ಕಲಾ ತಂಡಗಳೊಂದಿಗೆ ನಗರದಾದ್ಯಂತ ಮೆರವಣಿಗೆ ಮಾಡುವ ಮೂಲಕ ಎಲ್ಲ ವರ್ಗದ ಜನರು ಏಕತೆಯಿಂದ ಆಚರಿಸುತ್ತಿರುವುದು ಶ್ಲಾಘನೀಯ, ಎಂದು ಹೇಳಿದರು.

ಸ್ವಾಮೀಜಿಯವರು ತಮ್ಮ ಭಾಷಣದಲ್ಲಿ, ಮಳವಳ್ಳಿ ತಾಲೂಕಿನ ಹಲಗೂರು ಈಗ ವ್ಯಾಪಾರದ ಪ್ರಮುಖ ಕೇಂದ್ರವಾಗಿ ಬೆಳೆಯುತ್ತಿದೆ. ಎಲ್ಲ ಜಾತಿ–ಜನಾಂಗದವರು ಒಂದಾಗಿ ಕೆಂಪೇಗೌಡ ಜಯಂತಿಯನ್ನು ಆಚರಿಸುತ್ತಿರುವುದು ಶ್ರೇಷ್ಠ. ಕೆಂಪೇಗೌಡರು 64 ಬಂಡೆಗಳನ್ನು ಹೊಡೆದು ಬೆಂಗಳೂರು ನಗರವನ್ನು ನಿರ್ಮಿಸಿದ ಮಹಾನ್ ಶಿಲ್ಪಿಗಳು. ಇಂದು ವಿದೇಶದಲ್ಲಿಯೂ 'ಇಂಡಿಯಾ ಎಂದರೆ ಬೆಂಗಳೂರು' ಎನ್ನುವ ಮಟ್ಟಿಗೆ ಈ ನಗರ ಹೆಸರಾಗಿದೆ ಎಂದು ಹೊಗಳಿದರು. ಅವರು ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನಿಸುವ ಕ್ರಮವನ್ನು ಪ್ರಶಂಸಿಸಿದರು.

ನಂತರ ಹಲಗೂರು ಲಯನ್ಸ್ ಕ್ಲಬ್ ವತಿಯಿಂದ ಆಯೋಜಿಸಿದ್ದ ಹಸಿವು ನಿವಾರಣಾ ಕಾರ್ಯಕ್ರಮವನ್ನು ಸ್ವಾಮೀಜಿ ಉದ್ಘಾಟಿಸಿ, ಅಗತ್ಯವಿರುವವರಿಗೆ ಊಟ ಬಡಿಸಿದರು. ನಂತರ ಶಾಲಾ ಮಕ್ಕಳಿಗೆ ಸನ್ಮಾನ ಕಾರ್ಯಕ್ರಮ ಜರುಗಿತು. ಮುಖ್ಯ ಅತಿಥಿಗಳಾದ ಡಾ.ನಿಶ್ಚಲಾನಂದ ಸ್ವಾಮೀಜಿ ಮತ್ತು ಕೆ.ಎನ್. ಲಿಂಗೇಗೌಡ ಅವರನ್ನು ಸನ್ಮಾನಿಸಲಾಯಿತು.

ಒಂದನೇ ಪುಟದಿಂದ

ಜು.25ರಿಂದ ಕಬಿನಿ ಜಲಾಶಯದಿಂದ ನಾಲೆಗಳಿಗೆ ನೀರು ಬಿಡುಗಡೆ

ಹರಿಸಿ, 10 ದಿನ ನೀರು ನಿಲ್ಲಿಸುವ ಕಟ್ಟು ನೀರು ಪದ್ಧತಿಯಲ್ಲಿ ಕಾಲುವೆಗಳಿಗೆ 4 ಅವಧಿಯಲ್ಲಿ ನೀರು ಹರಿಸಲು ತೀರ್ಮಾನಿಸಲಾಯಿತು. ಕಬಿನಿ ಜಲಾಶಯ ತುಂಬಿ ತುಳುಕುತ್ತಿದ್ದರೂ ಭತ್ತದ ಬೆಳೆಗೆ ನೀರು ಹರಿಸದಿರುವ ಸರ್ಕಾರದ ಧೋರಣೆ ವಿರುದ್ಧ ರೈತರು ಹೋರಾಟ ಹಾದಿ ಹಿಡಿಯುವ ಮುನ್ನವೆ ನೀರಾವರಿ ಸಲಹಾ ಸಮಿತಿ ನಾಲೆ ಹಾಗೂ ಕೆರೆಕಟ್ಟೆಗಳಿಗೆ ನೀರು ಹರಿಸಲು ತೀರ್ಮಾನ ಕೈಗೊಂಡು ರೈತರ ಆಕ್ರೋಶದಿಂದ ಪಾರಾಗಿದೆ.

ಕಬಿನಿ ಜಲಾಶಯದ ಗರಿಷ್ಟ ಮಟ್ಟ 2,284 ಅಡಿಗಳಾಗಿದ್ದು, ಇಂದಿನ ಮಟ್ಟ 2,268 ಅಡಿಗಳಾಗಿದೆ. ಜಲಾಶಯದಲ್ಲಿ 18.36 ಟಿಎಂಸಿ ನೀರು ಸಂಗ್ರಹವಾಗಿದ್ದು, ನೀರಾವರಿ ಬಳಕೆಗೆ 8.54 ಟಿಎಂಸಿ ನೀರು ದೊರೆಯಲಿದೆ. ಇದರಲ್ಲಿ ಕಬಿನಿ ಜಲಾಶಯದ ಎಡ ಮತ್ತು ಬಲದಂಡೆಯ ನಾಲೆಯ 1,08,060 ಎಕರೆ ಪ್ರದೇಶಗಳಿಗೆ ನೀರು ಒದಗಿಸಬೇಕಾಗಿದೆ. ಕಬಿನಿ ಎಡ ಮತ್ತು ಬಲ ದಂಡೆ ನಾಲೆಗಳಿಗೆ 2,390 ಕ್ಯುಸೆಕ್ ನೀರು, ಕುಡಿಯುವ ನೀರು ಮತ್ತು ಅಣೆಕಟ್ಟು ನಾಲೆಗೆ 800 ಕ್ಯೂಸೆಕ್ ನೀರನ್ನು 120 ದಿನಗಳ ಕಾಲ ಹರಿಸಬೇಕಾಗಿದೆ. ಇದಕ್ಕಾಗಿ 33 ಟಿಎಂಸಿ ನೀರಿನ ಅವಶ್ಯವಿದೆ.

ಕಳೆದ 10 ವರ್ಷದ ಅವಧಿಯಲ್ಲಿ ಕಬಿನಿ ಜಲಾಶಯಕ್ಕೆ ಕನಿಷ್ಟ 41.01 ಟಿಎಂಸಿ ಹಾಗೂ ಗರಿಷ್ಟ 196.81 ಟಿಎಂಸಿ ಒಳಹರಿವು ಇದೆ. ಈ ಮೂಲಕ ಸರಾಸರಿ 118.91 ಟಿಎಂಸಿ ನೀರು ಒಳಹರಿವು ಇದ್ದು, ಇದರ ಆಧಾರದ ಮೇಲೆ ಕಟ್ಟು ಪದ್ಧತಿಯಲ್ಲಿ ಕೃಷಿ ಚಟುವಟಿಕೆಗಳಿಗೆ ನೀರು ಸರಬರಾಜು ಮಾಡಬಹುದು ಎಂದು ಕಬಿನಿ–ವರುಣ ನಾಲಾ ವೃತ್ತದ ಎಕ್ಸಿಕ್ಯೂಟಿವ್ ಇಂಜಿನಿಯರ್ ಕೆ.ಮಹೇಶ್, ಸಚಿವ ಡಾ.ಮಹದೇವಪ್ಪ ಅವರಿಗೆ ವಿವರಿಸಿದರು. ಇದೇ ವೇಳೆ ಸಭೆಗೆ ಮಾಹಿತಿ ನೀಡಿದ ಜಂಟಿ ಕೃಷಿ ನಿರ್ದೇಶಕ ಕೆ.ಹೆಚ್.ರವಿ, ನಾಲೆಗಳಿಗೆ ನೀರು ಹರಿಸುವುದು ತಡವಾದರೆ ಭತ್ತದ ಬೆಳೆ ಚಳಿಗೆ ಸಿಲುಕಿ ಜಳ್ಳು ಬರುತ್ತದೆ. 9,945 ಟನ್ ಭತ್ತದ ಬಿತ್ತನೆ ಬೀಜವನ್ನು 33 ರೈತ ಸಂಪರ್ಕ ಕೇಂದ್ರಗಳಲ್ಲಿ ದಾಸ್ತಾನು ಮಾಡಲಾಗಿದೆ. ಬಿತ್ತನೆ ಬೀಜ, ರಸಗೊಬ್ಬರಕ್ಕೆ ಸಮಸ್ಯೆ ಇಲ್ಲ, ನೀರು ಹರಿಸಲು ಆರಂಭಿಸಿದರೆ ಕೃಷಿ ಚಟುವಟಿಕೆ ವೇಗ ಪಡೆಯುತ್ತದೆ ಎಂದು ಹೇಳಿದರು.

ಕಬಿನಿ ಜಲಪಾತೋತ್ಸವ ಆಚರಿಸಿ

ಕಬಿನಿ ಜಲಾಶಯ ನಿರ್ಮಾಣಗೊಂಡು 50 ವರ್ಷವಾಗಿರುವ ಹಿನ್ನೆಲೆಯಲ್ಲಿ ಕಬಿನಿ ಜಲಪಾತೋತ್ಸವ ಕಾರ್ಯಕ್ರಮ ಆಚರಿಸಬೇಕು ಎಂದು ಹೆಚ್.ಡಿ.ಕೋಟೆ ಶಾಸಕ ಅನಿಲ್ ಚಿಕ್ಕಮಾದು ಆಗ್ರಹಿಸಿದರು. ಚುಂಚನಕಟ್ಟೆ ಜಲಪಾತೋತ್ಸವ, ಗಗನಚುಕ್ಕಿ ಜಲಪಾತೋತ್ಸವದಂತೆ ಕಬಿನಿ ಜಲಪಾತೋತ್ಸವ ಕೂಡ ಮಾಡಬೇಕು. ಇದರಿಂದ ಪ್ರವಾಸಿಗರನ್ನು ಆಕರ್ಷಿಸಬಹುದು ಎಂದು ಹೇಳಿದರು.

ಕೆಆರ್‌ಎಸ್ ಬೃಂದಾವನ ಗಾರ್ಡನ್ ಮಾದರಿಯಲ್ಲಿ ಕಬಿನಿ ಜಲಾಶಯ ದಲ್ಲಿಯೂ ಕಬಿನಿ ಬೃಂದಾವನ ಗಾರ್ಡನ್ ನಿರ್ಮಾಣ ಮಾಡಬೇಕು ಎಂದರು. ರಾಜ್ಯದ ಎಲ್ಲಾ ಜಲಾಶಯಗಳಿಗಿಂತ ಮೊದಲು ಕಬಿನಿ ಭರ್ತಿಯಾಗಿದೆ. ಆದರೆ ಕೆಆರ್‌ಎಸ್‌ಗೆ ಮಾತ್ರವೇ ಮುಖ್ಯಮಂತ್ರಿಗಳು ಬಾಗಿನ ಅರ್ಪಿಸಿದ್ದಾರೆ. ಆದರೆ ಕಬಿನಿಗೆ ಇನ್ನು ಬಾಗಿನ ಅರ್ಪಿಸಿಲ್ಲ ಎಂದು ಅನಿಲ್ ಚಿಕ್ಕಮಾದು ಅಸಮಾಧಾನ ವ್ಯಕ್ತಪಡಿಸಿದರು. ಜು.16ರಿಂದ ಸಿದ್ದರಾಮಯ್ಯ ಮೈಸೂರು ಪ್ರವಾಸ ಕೈಗೊಳ್ಳುತ್ತಿದ್ದಾರೆ. ಆ ಸಂದರ್ಭದಲ್ಲಿ ಬಾಗಿನ ಅರ್ಪಿಸಲು ವ್ಯವಸ್ಥೆ ಮಾಡೋಣ. ಇಲ್ಲವೆಂದರೆ ಮತ್ತೊಂದು ದಿನ ಇದಕ್ಕೆ ದಿನಾಂಕ ನಿಗದಿ ಮಾಡೋಣ ಎಂದು ಡಾ.ಮಹದೇವಪ್ಪ ಭರವಸೆ ನೀಡಿದರು.

ಉದ್ಬೂರು ಕೆರೆಗಳಿಗೆ ನೀರು ಹರಿಸಿ

ಮೈಸೂರು ತಾಲೂಕಿನ ಉದ್ಬೂರು ಕೆರೆಗೂ ನೀರು ಹರಿಸುವಂತೆ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮನವಿ ಮಾಡಿದರು. ಈ ಕೆರೆಗೆ ನೀರು ತುಂಬಿಸುವುದರಿಂದ ಸಾವಿರಾರು ಎಕರೆ ಪ್ರದೇಶಗಳಿಗೆ ಅನುಕೂಲವಾಗುತ್ತದೆ. ಇದರಿಂದ ಆ ಭಾಗದ ಜನರ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುತ್ತದೆ. ಜೊತೆಗೆ ಅಂತರ್ಜಲ ಕೂಡ ಹೆಚ್ಚಾಗುತ್ತದೆ ಎಂದರು. ನಾಲೆಗಳಿಗೆ ನೀರು ಹರಿಸುವ ಮುನ್ನ ಹೂಳೆತ್ತಬೇಕು. ಅಧಿಕಾರಿಗಳು ಬೇಕಾಬಿಟ್ಟಿ ಕೆಲಸ ಮಾಡಬಾರದು ಎಂದು ಮಂಜೇಗೌಡ ಸಲಹೆ ನೀಡಿದರು.

ಕಬಿನಿ ಜಲಾಶಯದ ಶಾಶ್ವತ ಯೋಜನೆಗಳಿಗೆ ಡಿಪಿಆರ್

ಕಬಿನಿ ಜಲಾಶಯದ ವ್ಯಾಪ್ತಿಯಲ್ಲಿ ಕೈಬಿಟ್ಟು ಹೋಗಿರುವ ಪ್ರದೇಶಗಳಿಗೆ ನೀರು ಒದಗಿಸಲು ಶಾಶ್ವತ ಯೋಜನೆ ರೂಪಿಸುವ ಸಂಬಂಧ ಡಿಪಿಆರ್ ಸಿದ್ಧಪಡಿಸಲಾಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ಜಿಲ್ಲಾಧಿಕಾರಿಗಳು ಹಾಗೂ ನೀರಾವರಿ ಇಲಾಖೆಯ ಅಧಿಕಾರಿಗಳು ಈಗಾಗಲೇ ಪವರ್ ಪಾಯಿಂಟ್ ಪ್ರೆಸೆಂಟೇಷನ್ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಈ ಯೋಜನೆ ಬಗ್ಗೆ ವಿವರಣೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಸದರಿ ಯೋಜನೆ ಕೈಗೆತ್ತಿಕೊಳ್ಳುವುದು ಸಿದ್ದರಾಮಯ್ಯ ಅವರ ಮನಸ್ಸಿನಲ್ಲಿದೆ. ಈ ಸಂಬಂಧ ಶೀಘ್ರವೇ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಸಂಸದರು, ಶಾಸಕರು, ಅಧಿಕಾರಿಗಳ ಜೊತೆ ಸಭೆ ನಡೆಸಿ, ಕಬಿನಿ ಜಲಾಶಯದ ಯೋಜನೆಗಳ ಬಗ್ಗೆ ಚರ್ಚಿಸಲಾಗುವುದು ಎಂದರು.

ಕಬಿನಿ ಜಲಾಶಯದ ನೀರು ನಾಲೆಯ ಕೊನೆ ಭಾಗಕ್ಕೂ ತಲುಪಲು ತಾರಕ ಹಾಗೂ ನುಗು ಜಲಾಶಯವನ್ನು ಬಳಸಿಕೊಳ್ಳಲಾಗುವುದು. ಈ ಹಿನ್ನೆಲೆಯಲ್ಲಿ ವಿಸ್ತೃತವಾದ ಯೋಜನಾ ವರದಿ ತಯಾರಿಸುವಂತೆ ಸೂಚಿಸಲಾಗಿದೆ. ಈ ಎಲ್ಲಾ ಯೋಜನೆಗಾಗಿ ಈಗಾಗಲೇ ಒಂದು ಸಾವಿರ ಕೋಟಿ ರೂಪಾಯಿ ನೀಡಲಾಗಿದೆ. ಮತ್ತಷ್ಟು ಹಣದ ಅವಶ್ಯಕತೆ ಇದೆ ಎಂದು ವಿವರಿಸಿದಾಗ, ಹಣ ನೀಡಲು ಸಿದ್ದರಾಮಯ್ಯ ಸಕರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದರು.

ಇಂಧನ ಪೂರೈಕೆ ಸ್ಥಗಿತವೇ ದುರಂತಕ್ಕೆ ಕಾರಣ

ವಿಮಾನದಲ್ಲಿ ವಿದ್ಯುತ್ ಸರಬರಾಜಿನಲ್ಲಿ ಸಮಸ್ಯೆ ಇದ್ದಾಗ ಮಾತ್ರ ರಾಮ್ ಏರ್ ಟರ್ಬೈನ್ ಸಕ್ರಿಯವಾಗುತ್ತದೆ. ಇದರ ಅರ್ಥ ಎಂಜಿನ್ ಸ್ಥಗಿತ ಗೊಂಡಿದ್ದರಿಂದ ಅದು ವಿಮಾನದ ವಿದ್ಯುತ್ ಪೂರೈಕೆ ಮೇಲೂ ಪರಿಣಾಮ ಬೀರಿತ್ತು. ಎಂಜಿನ್‌ಗೆ ಇಂಧನ ಪೂರೈಕೆಯಾಗುತ್ತಿಲ್ಲ ಎಂಬುದನ್ನು ಪೈಲಟ್‌ಗಳು ಅರಿತುಕೊಂಡಾಗ ಅವರು ವಿಮಾನವನ್ನು ದುರಂತದಿಂದ ರಕ್ಷಿಸಲು ಕೈಲಾದಷ್ಟು ಪ್ರಯತ್ನಿಸಿದರು. ಆಗ ಒಂದು ಎಂಜಿನ್ ಮತ್ತೆ ಸ್ಟಾರ್ಟ್ ಆಗಿದೆ. ಆದರೆ ಮತ್ತೊಂದು ಇಂಜಿನ್ ಒತ್ತಡವನ್ನು ಉತ್ಪಾದಿಸಲು ಸಾಧ್ಯವಾಗದೇ ವಿಮಾನ ಪತನಗೊಂಡಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದ್ದು, ಈ ಪ್ರಾಥಮಿಕ ವರದಿಯ ಆಧಾರದ ಮೇಲೆ ಯಾವುದೇ ಸ್ಪಷ್ಟ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂದು ವಿಮಾನಯಾನ ಸಚಿವರು ಸ್ಪಷ್ಟಪಡಿಸಿದ್ದಾರೆ.

ವಿಮಾನವು ಸರಿ ಸುಮಾರು 08:08:42 ಸಮಯದಲ್ಲಿ (ಗ್ರೀನ್‌ವಿಚ್ ಸಮಯ) 180 ನಾಟ್‌ಗಳ ಗರಿಷ್ಠ ವೇಗವನ್ನು ತಲುಪಿತು. ತಕ್ಷಣವೇ 2 ಇಂಜಿನ್‌ಗಳ ಸ್ವಿಚ್‌ಗಳು 1 ಸೆಕೆಂಡ್ ಅಂತರದಲ್ಲಿ ರನ್‌ನಿಂದ ಕಟ್ ಆಫ್‌ಗೆ ಬದಲಾಯಿತು. ಇಂಜಿನ್‌ಗಳಿಗೆ ಇಂಧನ ಪೂರೈಕೆ ಸ್ಥಗಿತಗೊಂಡಿದ್ದರಿಂದ ಟೇಕಾಫ್ ವೇಗ ಕಡಿಮೆಯಾಗಲಾರಂಭಿಸಿತು. ವಿಮಾನ ಹಾರಾಟದ ಹಾದಿಯಲ್ಲಿ ಯಾವುದೇ ಪಕ್ಷಿ ಹಾರಾಟ ಚಟುವಟಿಕೆ ಕಂಡುಬಂದಿಲ್ಲ. ವಿಮಾನ ನಿಲ್ದಾಣದ ಕಾಂಪೌಂಡ್ ದಾಟುವ ಮೊದಲೇ ವಿಮಾನ ಎತ್ತರ ಕಳೆದುಕೊಳ್ಳಲಾರಂಭಿಸಿತು. 10 ಸೆಕೆಂಡ್‌ಗಳ ನಂತರ ಒಂದು ಎಂಜಿನ್‌ನ ಇಂಧನ ಕಡಿತ ಸ್ವಿಚ್‌ಗಳು ಮತ್ತೆ ರನ್‌ಗೆ ಬದಲಾಯಿತು. ಇಂಧನ ಪೂರೈಕೆ ಪ್ರಾರಂಭವೂ ಆಯಿತು. 4 ಸೆಕೆಂಡ್‌ಗಳ ನಂತರ ಮತ್ತೊಂದು ಇಂಜಿನ್‌ದು ಇಂಧನ ಮರು ಆರಂಭವಾಯಿತು. ಆದರೆ ಅಷ್ಟರಲ್ಲೇ ತಡವಾಗಿತ್ತು.

ಅದಾದ 9 ಸೆಕೆಂಡ್‌ಗಳ ನಂತರ ಪೈಲಟ್‌ಗಳು ಮೇಡೇ... ಮೇಡೇ... ಮೇಡೆ... ಎಂದು ತುರ್ತು ಸಂದೇಶ ರವಾನಿಸಿದರು. ಏರ್ ಟ್ರಾಫಿಕ್ ಕಂಟ್ರೋಲ್ ನಿಂದ ಯಾವುದೇ ಪ್ರತಿಕ್ರಿಯೆ ಸಿಗಲಿಲ್ಲ. ಆದರೆ ತಕ್ಷಣ ನಿಲ್ದಾಣದಿಂದ ತುರ್ತು ಪ್ರತಿಕ್ರಿಯೆಯನ್ನು ಸಕ್ರಿಯಗೊಳಿಸಲಾಯಿತು. ಅಗ್ನಿಶಾಮಕದಳ ರಕ್ಷಣೆ ಮತ್ತು ಬೆಂಕಿ ನಂದಿಸಲು ಕಾರ್ಯೋನ್ಮುಖವಾಯಿತು. ನಂತರ ವಿಮಾನ ಬಿ.ಜೆ.ವೈದ್ಯಕೀಯ ಕಾಲೇಜು ಹಾಸ್ಟೆಲ್‌ಗೆ ಡಿಕ್ಕಿ ಹೊಡೆದಿದೆ. ಇದು ರನ್ ವೇನ ನಿರ್ಗಮನದ ತುದಿಯಿಂದ 1.6 ಕಿ.ಮೀ. ದೂರದಲ್ಲಿದೆ. ವಿಮಾನ ಎತ್ತರ ಕಳೆದುಕೊಳ್ಳುತ್ತಿದ್ದಂತೆಯೇ ಆರಂಭ ದಲ್ಲಿ ಮರಗಳು ಮತ್ತು ಆರ್ಮಿ ಮೆಡಿಕಲ್ ಕ್ಯಾಂಪ್‌ನ ಕಾಂಪೌಂಡಿನೊಳಗಿನ ಚಿಮಣಿಗೆ ಸ್ಪರ್ಶಿಸಿ, ನಂತರ ಹಾಸ್ಟೆಲ್‌ಗೆ ಡಿಕ್ಕಿ ಹೊಡೆದು ಪತನಗೊಂಡಿದೆ

ಕೆಲವೇ ಸೆಕೆಂಡ್‌ಗಳಲ್ಲಿ ಆಗಿದ್ದೇನು?

- ಲಂಡನ್‌ಗೆ ಟೇಕಾಫ್ ಆಗಲು ವಿಮಾನವು ಅಹಮದಾಬಾದ್‌ನಿಂದ ಕಳುಹಿಸಲ್ಪಟ್ಟ ಸಮಯ ಮಧ್ಯಾಹ್ನ 1:18:38.
- ವಿಮಾನ ಟ್ಯಾಕ್ಸಿ ಮಾಡಲು ಆರಂಭಿಸಿದ್ದು 1:26:08.
- ಟೇಕ್ ಅಫ್ ರೋಲ್ ಪ್ರಾರಂಭವಾಗಿದ್ದು 1:37:37.
- ವಿಮಾನ ಟೇಕ್ ಅಫ್ ಆರಂಭಿಸಿದ್ದು 1:38:39.
- ಗರಿಷ್ಠ ವೇಗ ಪಡೆದ ನಂತರ ಇಂಧನದ ಸ್ವಿಚ್‌ಗಳು ರನ್‌ನಿಂದ ಕಟ್ ಆಫ್‌ಗೆ ಬದಲಾಗಿದ್ದು 1:38:42.
- ಒಂದು ಇಂಜಿನ್‌ನ ಇಂಧನ ಸ್ವಿಚ್ ಕಟ್ ಆಫ್‌ನಿಂದ ರನ್ ಆಗಿದ್ದು 1:38:52.
- ಮತ್ತೊಂದು ಇಂಜಿನ್ ಇಂಧನ ಸ್ವಿಚ್ ಕಟ್ ಆಫ್‌ನಿಂದ ರನ್ ಆಗಿದ್ದು 1:38:56.
- ಕಡೆಯದಾಗಿ ವಿಮಾನದ ಡಾಟಾ ರೆಕಾರ್ಡಿಂಗ್ ನಿಂತ ಸಮಯ 1:39:11.

ಪಾಲಿಕೆ ನೌಕರರ ಮುಷ್ಕರ ತಾತ್ಕಾಲಿಕ ಅಂತ್ಯ



ಮೈಸೂರಿನ ದೇವರಾಜ ಮಾರುಕಟ್ಟೆ ಸಮೀಪದ ಕೊತ್ವಾಲ್ ರಾಮಯ್ಯ ಸ್ಟ್ರೀಟ್‌ನಲ್ಲಿ ರಸ್ತೆಬದಿಯಲ್ಲಿ ತ್ಯಾಜ್ಯ ವಿಲೇವಾರಿ ಆಗದೇ ಬಿದ್ದಿರುವುದು.



ದಿವಾನ್ಸ್ ರಸ್ತೆಯ ಡಾ.ಅಂಬೇಡ್ಕರ್ ಭವನದ ಕಾಂಪೌಂಡ್ ಬಳಿ ಕಸದ ರಾಶಿ.

ರಾಜ್ಯದ ಮಹಾನಗರಪಾಲಿಕೆ ನೌಕರರ ಸಂಘದ ಕರೆ ಮೇರೆಗೆ ಮೈಸೂರು ಮಹಾಪಾಲಿಕೆ ಸೇರಿದಂತೆ ರಾಜ್ಯದ 10 ಮಹಾನಗರಪಾಲಿಕೆಗಳ ನೌಕರರು ಜು.8ರಿಂದ ಸಾಮೂಹಿಕ ರಜೆ ಹಾಕಿ, ಎಲ್ಲಾ ಕೆಲಸ ಕಾರ್ಯಗಳನ್ನು ಸ್ಥಗಿತಗೊಳಿಸಿದ್ದರು.

ಮೈಸೂರು ಪಾಲಿಕೆ ನೌಕರರ ಮುಷ್ಕರದಲ್ಲಿ ಪೌರಕಾರ್ಮಿಕರು ಪಾಲ್ಗೊಂಡ ಹಿನ್ನೆಲೆಯಲ್ಲಿ ಮೈಸೂರು ನಗರಾದ್ಯಂತ ರಸ್ತೆಬದಿಗಳಲ್ಲಿ ಪ್ಲಾಸ್ಟಿಕ್ ಸೇರಿದಂತೆ ವಿವಿಧ ತ್ಯಾಜ್ಯ ರಾಶಿಯಾಗಿ ಬಿದ್ದಿದೆ. ಶನಿವಾರ ಸಂಜೆ ವೇಳೆಗೆ ನೌಕರರ ರಾಜ್ಯ ಸಂಘವು ತಾತ್ಕಾಲಿಕವಾಗಿ ಮುಷ್ಕರ ಕೈಬಿಡುವ ನಿರ್ಧಾರ ಪ್ರಕಟಿಸಿದ್ದು, ಈ ಹಿನ್ನೆಲೆಯಲ್ಲಿ ನಾಳೆ (ಜು.13 ಭಾನುವಾರ) ಕಸ ವಿಲೇವಾರಿ ಆರಂಭಗೊಳ್ಳಲಿದೆ.



ದೇವರಾಜ ಮೊಹಲ್ಲಾದ ಕೃಷ್ಣವಿಲಾಸ ರಸ್ತೆಯಲ್ಲಿ ಬಿದ್ದಿರುವ ಕಸದ ರಾಶಿ.

> ಮನೆ ಮನೆ ಕಸ ಸಂಗ್ರಹ ನಾಳೆಯಿಂದ (ಭಾನುವಾರ) ಆರಂಭವಾಗಲಿದೆ. ಎರಡು ದಿನಗಳಲ್ಲಿ ನಗರಾದ್ಯಂತ ರಸ್ತೆಬದಿ ಗುಡ್ಡೆ ಹಿಡಿದಿರುವ ತ್ಯಾಜ್ಯದ ವಿಲೇವಾರಿ ಮಾಡಿಸಲು ಕ್ರಮ ವಹಿಸಲಾಗುವುದು.
>
> –ತನ್ವೀರ್ ಆಸಿಫ್ ಶೇಖ್, ಆಯುಕ್ತರು, ಮೈಸೂರು ಪಾಲಿಕೆ.

> ಪಾಲಿಕೆ ನೌಕರರ ಎಲ್ಲಾ ಬೇಡಿಕೆಗಳೂ ಪೌರಕಾರ್ಮಿಕರಿಗೂ ಅನ್ವಯಿಸುತ್ತದೆ. ಪೌರಕಾರ್ಮಿಕರು ನಮ್ಮ ಪಾಲಿಕೆಯ ಗ್ರೂಪ್ ಡಿ ನೌಕರರ ವ್ಯಾಪ್ತಿಗೆ ಬರುತ್ತಾರೆ. ರಾಜ್ಯ ಸರ್ಕಾರಿ ನೌಕರರಿಗೆ ಇರುವಂತಹ ವೇತನ ಹಾಗೂ ಸೌಲಭ್ಯಗಳು ಪಾಲಿಕೆ ನೌಕರರಿಗೆ ಇಲ್ಲವಾಗಿದೆ. ಈ ತಾರತಮ್ಯ ನಿವಾರಿಸಬೇಕೆಂಬುದು ನಮ್ಮ ಪ್ರಮುಖ ಬೇಡಿಕೆ.
>
> –ಬಿ.ವೆಂಕಟರಾಮ್, ಅಧ್ಯಕ್ಷರು, ಮೈಸೂರು ಪಾಲಿಕೆ ನೌಕರರ ಸಂಘ.

ಜು.15ರವರೆಗೆ ಮುಷ್ಕರ ಮುಂದೂಡಿಕೆ: ನೌಕರರ ಬೇಡಿಕೆಗಳ ಬಗ್ಗೆ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಆರ್ಥಿಕ ಇಲಾಖೆ ಅಧಿಕಾರಿಗಳು ಮತ್ತು ಸಂಘದ ರಾಜ್ಯ ಪದಾಧಿಕಾರಿಗಳೊಂದಿಗೆ ಜು.15ರಂದು ಸಭೆ ನಡೆಸಿ, ನಿಯಮಾನುಸಾರ ಸೂಕ್ತ ತೀರ್ಮಾನ ತೆಗೆದುಕೊಳ್ಳುತ್ತೇನೆ. ಹಾಗಾಗಿ ಮುಷ್ಕರವನ್ನು ಇಂದೇ ಅಂತ್ಯಗೊಳಿಸಿ ಕರ್ತವ್ಯಕ್ಕೆ ಹಾಜರಾಗಬೇಕೆಂದು ಜು.11ರಂದು ಪತ್ರದ ಟಿಪ್ಪಣಿ ಮುಖೇನ ಪಾಲಿಕೆ ನೌಕರರ ರಾಜ್ಯ ಸಂಘದವರಲ್ಲಿ ನಗರಾಭಿವೃದ್ಧಿ ಸಚಿವ ಬಿ.ಎಸ್.ಸುರೇಶ ಮನವಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಶನಿವಾರ ಸಂಜೆ ವೇಳೆಗೆ ತಾತ್ಕಾಲಿಕವಾಗಿ ಮುಷ್ಕರ ಕೈಬಿಡುವ ತೀರ್ಮಾನವನ್ನು ಪಾಲಿಕೆ ನೌಕರರ ರಾಜ್ಯ ಸಂಘ ಕೈಗೊಂಡಿದೆ.

ಅಲ್ಲದೆ, ಈ ತಕ್ಷಣದಿಂದ ಜಾರಿಗೆ ಬರುವಂತೆ ಜು.15ರವರೆಗೆ ಕರೆ ನೀಡಿದ್ದ ಮುಷ್ಕರ ಹಾಗೂ ಪ್ರತಿಭಟನೆಯನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ ಎಂದು ಕರ್ನಾಟಕ ರಾಜ್ಯ ಮಹಾನಗರಪಾಲಿಕೆ ನೌಕರರ ಸಂಘ ಪ್ರಕಟಣೆ ಹೊರಡಿಸಿದೆ.

ಪೌರಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದ್ದ ಹಿನ್ನೆಲೆಯಲ್ಲಿ ಕಸ ವಿಲೇವಾರಿ ಮಾಡದ ಕಾರಣ ಮನೆಗಳಲ್ಲಿ ಕಸ ಭಾರೀ ಪ್ರಮಾಣದಲ್ಲಿ ಸಂಗ್ರಹವಾಗಿ ಕೊಳೆಯುವಂತಾಗಿದೆ. ಮತ್ತೊಂದೆಡೆ ನಗರದ ಹೃದಯಭಾಗವೂ ಸೇರಿದಂತೆ ಇಡೀ ನಗರಾದ್ಯಂತ ರಸ್ತೆಬದಿ, ನಾಗರಿಕರು ಕಸ ಹಾಕಿರುವ ಪರಿಣಾಮ ಅನೈರ್ಮಲ್ಯದ ವಾತಾವರಣ ನಿರ್ಮಾಣವಾಗಿದೆ. ಜು.8ರಿಂದ ನೀರು ಪೂರೈಕೆ ಹೊರತಾಗಿ ಪಾಲಿಕೆ ಆಡಳಿತ ಕಾರ್ಯ ಸ್ಥಗಿತಗೊಂಡಿದೆ.

ಮೈಸೂರು ಮಿತ್ರ

ಭಾನುವಾರ 13 ಜುಲೈ 2025

ಜು.15, ಶ್ರೀ ಚಾಮುಂಡೇಶ್ವರಿ ವರ್ಧಂತಿ



ಮೈಸೂರು, ಜು. 12– ಮೈಸೂರು ಜಿಲ್ಲಾ ಬ್ರಾಹ್ಮಣ ಮಹಾ ಸಭಾ ವತಿಯಿಂದ ಜು.15 ರಂದು ಬೆಳಗ್ಗೆ 10.30ಕ್ಕೆ ನಾಡದೇವತೆ ಶ್ರೀ ಚಾಮುಂಡೇಶ್ವರಿ ದೇವಿ ವರ್ಧಂತಿ ಹಾಗೂ ಹಿರಿಯ ಸಮಾಜ ಸೇವಕ ಡಾ.ಬಿ.ಆರ್. ನಟರಾಜ ಜೋಯಿಸ್ ಅವರ ಹುಟ್ಟುಹಬ್ಬವನ್ನು ದೇವಯ್ಯನಹುಂಡಿಯ ಶಾಕಂಬರಿ ಧಾರ್ಮಿಕ ಶ್ರದ್ಧಾಕೇಂದ್ರದಲ್ಲಿ ಏರ್ಪಡಿಸಲಾಗಿದೆ. ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ ಅಧ್ಯಕ್ಷತೆ ವಹಿಸಲಿದ್ದು, ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ, ಹೆಚ್.ವಿಶ್ವನಾಥ್, ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ಡಾ.ಡಿ.ತಿಮ್ಮಯ್ಯ, ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣ ಕುಮಾರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಡಾ.ವೈ.ಡಿ.ರಾಜಣ್ಣ, ಚಂದ್ರಶೇಖರ್, ಡಾ.ರಾಜಶೇಖರ್, ಡಾ. ಎಸ್.ಪಿ. ಯೋಗಣ್ಣ, ಡಾ.ಲತಾ ರಾಜಶೇಖರ್, ಅಂಶಿ ಪ್ರಸನ್ನಕುಮಾರ್, ಶ್ರೀಮತಿ ಪುಷ್ಪಾ ಅಯ್ಯಂಗಾರ್, ಮೂಗೂರು ನಂಜುಂಡಸ್ವಾಮಿ, ವಿಕ್ರಾಂತ್ ಪಿ.ದೇವೇಗೌಡ, ತೇಜಸ್ ಲೋಕೇಶ್‌ಗೌಡ, ಡಾ.ಎಂ.ಜಿ.ಆರ್. ಅರಸ್, ರತ್ನ ಹಾಲಪ್ಪಗೌಡ ಮತ್ತಿತರರು ಭಾಗವಹಿಸಲಿದ್ದಾರೆ.

ಪಡುವಾರಹಳ್ಳಿ ವರ್ಧಂತಿ ಮಹೋತ್ಸವ

ಮೈಸೂರಿನ ವಿನಾಯಕನಗರ (ಪಡುವಾರಹಳ್ಳಿ)ದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಸೇವಾ ಸಮಿತಿ ಟ್ರಸ್ಟ್ ವತಿಯಿಂದ ಜು.17ರಂದು ಚಾಮುಂಡೇಶ್ವರಿ ವರ್ಧಂತಿ ಮಹೋತ್ಸವ ನಡೆಯಲಿದೆ.

ಅಂದು ಬೆಳಗ್ಗೆ ಅಮ್ಮನವರಿಗೆ ಪಂಚಾಮೃತಾಭಿಷೇಕ, ದುರ್ಗಾಹೋಮ, ಮಧ್ಯಾಹ್ನ 12ಕ್ಕೆ ಮಹಾಪೂರ್ಣಾಹುತಿ, ಮಹಾಮಂಗಳಾರತಿ ಹಾಗೂ ಮಧ್ಯಾಹ್ನ 1 ಗಂಟೆಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ.

ಸಂಜೆ 7 ಗಂಟೆಗೆ ಚಾಮುಂಡೇಶ್ವರಿ ತಾಯಿಯ ಉತ್ಸವ ಮೂರ್ತಿಯನ್ನು ಪಡುವಾರಹಳ್ಳಿಯ ಪ್ರಮುಖ ಬೀದಿಗಳಲ್ಲಿ ಜಾನಪದ ಕಲಾತಂಡಗಳ ಸಮೇತ ಮೆರವಣಿಗೆ ಮಾಡಲಾಗುವುದು. ಇದೇ ವೇಳೆ ಉತ್ಸವ ಮೂರ್ತಿಗೆ ಬೆಳ್ಳಿ ಕವಚ ಧಾರಣೆ ಮಾಡಲಾಗುವುದು. ಪೂಜಾ ಕಾರ್ಯಕ್ರಮದಲ್ಲಿ ಶಾಸಕ ಹರೀಶ್‌ಗೌಡ ಭಾಗವಹಿಸಲಿದ್ದಾರೆ.

ಭಾವಸಾರ್ ಕ್ಷತ್ರಿಯ ಸಂಘದಿಂದ ಶ್ರೀ ಚಾಮುಂಡೇಶ್ವರಿ ಪೂಜಾ ಮಹೋತ್ಸವ

ಮೈಸೂರಿನ ಬನ್ನಿಮಂಟಪದಲ್ಲಿರುವ ಭಾವಸಾರ್ ಕ್ಷತ್ರಿಯ ಸಂಘದ ವತಿಯಿಂದ ಜು.15 ಮತ್ತು 16ರಂದು ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ ಏರ್ಪಡಿಸಲಾಗಿದೆ.

ಬನ್ನಿಮಂಟಪ ಎಲ್‌ಐಜಿ 88 ಸಂಖ್ಯೆ ಮೆಂದರ್‌ಕರ್ ಪ್ರಭಾಕರ್‌ರಾವ್ ಮನೆ ಆವರಣದಲ್ಲಿ ಜು.15ರಂದು ಮಧ್ಯಾಹ್ನ 12 ಗಂಟೆಗೆ ಶ್ರೀ ಚಾಮುಂಡೇಶ್ವರಿ ಅಮ್ಮನವರ ಕಳಸ ಸ್ಥಾಪನೆ ನೆರವೇರಲಿದೆ. ಜು.16ರಂದು ಮಧ್ಯಾಹ್ನ 12.30ಕ್ಕೆ ಅನ್ನಸಂತರ್ಪಣೆ ಏರ್ಪಡಿಸಲಾಗಿದ್ದು, ಅಂದು ಸಂಜೆ 5 ಗಂಟೆಗೆ ಮಹಾಮಂಗಳಾರತಿ, ನಂತರ ಶ್ರೀರಂಗಪಟ್ಟಣದ ಕಾವೇರಿ ನದಿಯಲ್ಲಿ ದೇವಿಯ ಕಳಸವನ್ನು ವಿಸರ್ಜಿಸಲಾಗುವುದು. ನಂತರ ಪ್ರಸಾದ ವಿನಿಯೋಗ ಮಾಡಲಾಗುವುದು ಎಂದು ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಪ್ರಭಾಕರ್ ಮೇಂದರ್‌ಕರ್, ವೆಂಕಟೇಶ್ ದೊಂಗಡೆ, ಜಗದೀಶ್ ದಾಮೋದರ್, ದಿನೇಶ್ ಕುತ್ನಿಕರ್ ತಿಳಿಸಿದ್ದಾರೆ.

ಚಾಮುಂಡೇಶ್ವರಿ ಪೂಜಾ ಮಹೋತ್ಸವ



ಮೈಸೂರಿನ ಬಸವೇಶ್ವರ ರಸ್ತೆಯ ಅರಳಿಕಟ್ಟೆ ಚಾಮುಂಡೇಶ್ವರಿ ಸೇವಾ ಸಮಿತಿ ಆಶ್ರಯದಲ್ಲಿ ಮೂರನೇ ಆಷಾಢ ಮಾಸದ ಹಿನ್ನೆಲೆಯಲ್ಲಿ ಶ್ರೀ ಚಾಮುಂಡೇಶ್ವರಿ ದೇವಿಯ ಪೂಜಾ ಮಹೋತ್ಸವ ಮತ್ತು ಅನ್ನದಾಸೋಹ ವಿಜೃಂಭಣೆಯಿಂದ ನಡೆಯಿತು. ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅನ್ನದಾನಕ್ಕೆ ಚಾಲನೆ ನೀಡಿದರು. ಈ ವೇಳೆ ನಾಗೇಂದ್ರ ಪ್ರಸಾದ್, ಹೋಟೇಲ್ ಮಂಜುನಾಥ್, ಶಶಿ, ಗೋಪಿ, ನಿತೇಶ್, ಸುನೀಲ್‌ಕುಮಾರ್, ರಾಘವೇಂದ್ರ (ಮೊಟ್ಟೆ), ರಘುರಾಂ ವಾಜಪೇಯಿ, ಮಹೇಶ್, ಭಾಸ್ಕರ್ ಮತ್ತಿತರರು ಉಪಸ್ಥಿತರಿದ್ದರು.

ಒಕ್ಕಲಿಗ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು,ಜು.12–ರಾಜ್ಯ ಒಕ್ಕಲಿಗರ ಸಂಘದ ವತಿಯಿಂದ 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಶೇ. 95ಕ್ಕಿಂತ ಹೆಚ್ಚು ಅಂಕ ಗಳಿಸಿದ ಒಕ್ಕಲಿಗ ಜನಾಂಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ 5000 ರೂ. ನಗದು ಬಹುಮಾನ, ಪ್ರಶಸ್ತಿ ಪತ್ರ ನೀಡಿ ಸನ್ಮಾನಿಸಲಾಗುವುದು. ಅರ್ಹ ವಿದ್ಯಾರ್ಥಿಗಳು ಸ್ವವಿವರ (ಹೆಸರು, ಪೋಷಕರ ಹೆಸರು, ವಿಳಾಸ, ದೂರವಾಣಿ ಸಂಖ್ಯೆ, ವಿದ್ಯಾಭ್ಯಾಸ ಮಾಡಿದ ಶಾಲೆ, ಕಾಲೇಜಿನ ಹೆಸರು, ಎಸ್‌ಎಸ್‌ಎಲ್‌ಸಿ, ಪಿಯುಸಿ ಅಂಕಪಟ್ಟಿ ದೃಢೀಕೃತ ನಕಲು ಪ್ರತಿ ಹಾಗೂ ಬ್ಯಾಂಕ್ ಖಾತೆ ವಿವರ)ಗಳನ್ನೊಳಗೊಂಡ ಅರ್ಜಿಯನ್ನು ಭರ್ತಿ ಮಾಡಿ, ಪ್ರತಿಭಾ ಪುರಸ್ಕಾರ ವಿಭಾಗ, ನಾಡಪ್ರಭು ಕೆಂಪೇಗೌಡ ಭವನ, ರಾಜ್ಯ ಒಕ್ಕಲಿಗರ ಸಂಘ, ಕೆ.ಆರ್. ರಸ್ತೆ, ವಿ.ವಿ. ಪುರ, ಬೆಂಗಳೂರು ಈ ವಿಳಾಸಕ್ಕೆ ಜು.25ರೊಳಗೆ ಸಲ್ಲಿಸಲು ಕೋರಲಾಗಿದೆ. ಪ್ರತಿಭಾ ಪುರಸ್ಕಾರದ ಅರ್ಜಿಗಳನ್ನು ಸಂಘದ ಕೇಂದ್ರ ಕಚೇರಿಯ ಪ್ರತಿಭಾ ಪುರಸ್ಕಾರ ವಿಭಾಗದಲ್ಲಿ ಪಡೆದುಕೊಳ್ಳಬಹುದು ಎಂದು ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಡಾ. ಎಂ.ಬಿ. ಮಂಜೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜು.20, ಮೈಸೂರಲ್ಲಿ ಪಿಕೆಡಿ ಕ್ರೀಡಾ ಉತ್ಸವ

ಮೈಸೂರು, ಜು.12(ಜಿಎ)–ಮೈಸೂರಿನ ಪ್ರಜ್ವಲ್ ಕರಾಟೆ ದೋಜೋ ಸಂಸ್ಥೆ (ಪಿಕೆಡಿ) ಹಾಗೂ ನಗರ ಹೊರವಲಯದ ಜಕ್ಕನಕುಪ್ಪೆಯ ಐ ಕ್ಯಾನ್ ಇಂಟರ್ ನ್ಯಾಷನಲ್ ಶಾಲೆ ಸಹಯೋಗದಲ್ಲಿ ಜು.20ರಂದು ಶಾಲೆಯ ಆವರಣದಲ್ಲಿ ವಿವಿಧ ಸ್ಪರ್ಧೆಗಳನ್ನು ಒಳಗೊಂಡ ಪಿಕೆಡಿ ಕ್ರೀಡಾ ಉತ್ಸವ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಸಂಸ್ಥಾಪಕ ಪ್ರಜ್ವಲ್ ಈ ವಿಷಯ ತಿಳಿಸಿ, ಈ ಕ್ರೀಡಾ ಉತ್ಸವದಲ್ಲಿ ರಾಜ್ಯ, ದೇಶ, ಹೊರ ದೇಶಗಳ ಯಾರು ಬೇಕಾದರೂ ಪಾಲ್ಗೊಳ್ಳಬಹುದಾಗಿದೆ. ಫುಟ್ಬಾಲ್, ಅಂಡರ್ 18 ಚೆಸ್ ಟೋರ್ನಮೆಂಟ್, ಫಿಟ್ನೆಸ್ ಚಾಲೆಂಜ್, ಸಮೂಹ ಕರಾಟೆ ಪ್ರದರ್ಶನ, ಆರ್ಮ್ ರೆಸ್ಲಿಂಗ್, ನೃತ್ಯ ಮೊದಲಾದವು ಇರಲಿವೆ. ಅಂದು ಬೆಳಗ್ಗೆ 8ಕ್ಕೆ ಪ್ರಾರಂಭವಾಗಿ ರಾತ್ರಿ 8 ರವರೆಗೂ ನಡೆಯಲಿದ್ದು, ವಿಜೇತರಿಗೆ ಆಕರ್ಷಕ ನಗದು ಬಹುಮಾನ, ಪ್ರಮಾಣಪತ್ರಗಳು ನೀಡಲಾಗುತ್ತದೆ. ಮಾಹಿತಿಗೆ ದೂ. 93439 05316 ಅನ್ನು ಸಂಪರ್ಕಿಸಿ ಎಂದರು. ಗೋಷ್ಠಿಯಲ್ಲಿ ಸಂಸ್ಥೆಯ ನರೇಶ್, ಅಬ್ದುಲ್ ಕರೀಂ ಇದ್ದರು.

ದೃಷ್ಟಿಹೀನ ಪ್ರಯಾಣಿಕರಿಗೆ ನೆರವಾಗಲು ಮೈಸೂರು ನಗರ ಸಾರಿಗೆ ಬಸ್‌ಗಳಲ್ಲಿ 'ಧ್ವನಿ ಸ್ಪಂದನ' ಉಪಕರಣ ಅಳವಡಿಕೆ

ನಾಳೆಯಿಂದಲೇ ಮೈಸೂರಿನ 200 ಬಸ್‌ಗಳಲ್ಲಿ ಈ ವ್ಯವಸ್ಥೆ

- ದೆಹಲಿಯ ಐಐಟಿ ಸಂಸ್ಥೆ ಅಭಿವೃದ್ಧಿಪಡಿಸಿರುವ ಸಾಧನ
- 400 ದೃಷ್ಟಿಹೀನ ಪ್ರಯಾಣಿಕರಿಗೆ ಉಪಕರಣ ವಿತರಣೆ
- 100 ಅಡಿ ಅಂತರದಲ್ಲಿ ಬಸ್‌ಗಳ ಮಾರ್ಗದ ಮಾಹಿತಿ ರವಾನೆ



ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು, ಜು.12–ಮೈಸೂರು ನಗರ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಪ್ರತಿದಿನ ಪ್ರಯಾಣಿಸುವ ದೃಷ್ಟಿಹೀನ ಪ್ರಯಾಣಿಕರಿಗೆ ಅನುಕೂಲಕಾರಿಯಾಗಿ ದೆಹಲಿಯ ಐಐಟಿ ಸಂಸ್ಥೆ ಅಭಿವೃದ್ಧಿಪಡಿಸಿರುವ 'ದಿವ್ಯ ಸ್ಪಂದನ' ವಿಶೇಷ ಉಪಕರಣ ಅಳವಡಿಸಿದ್ದು, ಜು.14ರಿಂದ ಈ ಸೇವೆ ಲಭ್ಯವಿದೆ.

ಪ್ರತಿದಿನ ನಗರ ಸಾರಿಗೆ ಬಸ್‌ಗಳಲ್ಲಿ ಸಂಚರಿಸುವ ದೃಷ್ಟಿಹೀನ ಪ್ರಯಾಣಿಕರ ಅನುಕೂಲಕ್ಕಾಗಿ ಕರ್ನಾಟಕ ಸಾರಿಗೆ ಸಂಸ್ಥೆ, ದೆಹಲಿಯ ಐಐಟಿ ಸಂಸ್ಥೆ ಹಾಗೂ ಜಿಐಝೆಡ್ ಇಂಡಿಯಾ ಸಂಸ್ಥೆಯ ಸಹಯೋಗದಲ್ಲಿ 'ದಿವ್ಯ ಸ್ಪಂದನ' ಯೋಜನೆಯನ್ನು ಮೈಸೂರು ದೇಶದಲ್ಲೇ ಅತೀ ಹೆಚ್ಚು ನಗರ ಸಾರಿಗೆಯ 200 ಬಸ್‌ಗಳಲ್ಲಿ ಅನುಷ್ಠಾನಗೊಳಿಸುತ್ತಿದ್ದು, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥೆಯು ದೃಷ್ಟಿವಿಕಲಚೇತನರು, ಸಾರಿಗೆ ಸಂಸ್ಥೆ ಚಾಲಕ ಹಾಗೂ ನಿರ್ವಾಹಕರಿಗೆ ತರಬೇತಿ ನೀಡುವ ಮೂಲಕ ಯೋಜನೆಯ ಯಶಸ್ವಿಗೆ ರೂಪು–ರೇಷೆ ಸಿದ್ಧಪಡಿಸಿದೆ.

ಭಾರತ ಮತ್ತು ಜರ್ಮನಿ ನಡುವೆ ಆಗಿರುವ ಗ್ರೀನ್ ಅರ್ಬನ್ ಮೊಬಲಿಟಿ ಪಾರ್ಟನರ್‌ಶಿಪ್ ಒಪ್ಪಂದದಂತೆ ಈ ಯೋಜನೆ ಜಾರಿಗೊಳಿಸಲಾಗುತ್ತಿದೆ. ಜರ್ಮನ್ ಫಂಡಿಂಗ್ ಏಜೆನ್ಸಿಯಾದ ಜಿಐಝೆಡ್ ಇಂಡಿಯಾ ಸಂಸ್ಥೆಯು ಈ ಯೋಜನೆಗೆ ಆರ್ಥಿಕ ನೆರವು ನೀಡಿದೆ. ಈಗಾಗಲೇ ದೆಹಲಿಯಲ್ಲಿ 20, ಮುಂಬೈನಲ್ಲಿ 25 ಹಾಗೂ ಬೆಂಗಳೂರಲ್ಲಿ 100 ಬಿಎಂಟಿಸಿ ಬಸ್‌ಗಳಲ್ಲಿ ಈ ಉಪಕರಣ ಅಳವಡಿಸಲಾಗಿದ್ದು, ದಿವ್ಯಾಂಗಚೇತನರು ಯಾವ ಬಸ್‌ನಲ್ಲಿ ಸಂಚರಿಸಬೇಕು ಎಂಬ ಮಾಹಿತಿ ನೀಡುವ ಮೂಲಕ ಅವರಿಗೆ ನೆರವಾಗುತ್ತದೆ.

400 ದೃಷ್ಟಿಹೀನರಿಗೆ ನೆರವು: ಮೈಸೂರು ನಗರ ಹಾಗೂ ತಾಲೂಕಿನ ವಿವಿಧೆಡೆ ನಗರ ಸಾರಿಗೆ ಬಸ್‌ಗಳಲ್ಲಿ ಸಂಚರಿಸುವ 400 ದೃಷ್ಟಿಹೀನ ಪ್ರಯಾಣಿಕರನ್ನು ಮೊದಲ ಹಂತದಲ್ಲಿ ಗುರುತಿಸಲಾಗಿದೆ. ಈಗಾಗಲೇ ಅವರಿಗೆ ಹಂತಹಂತವಾಗಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥೆಯ ರಾಮ್‌ಪ್ರಸಾದ್ ನೇತೃತ್ವದಲ್ಲಿ ತರಬೇತಿ ನೀಡಲಾಗಿದೆ.



ದೃಷ್ಟಿಹೀನ ಪ್ರಯಾಣಿಕರು ಯೂಸರ್ ಮಾಡ್ಯೂಲ್ ಉಪಕರಣ ಬಳಸುವ ವಿಧಾನದ ತರಬೇತಿ.



ಸಿಬ್ಬಂದಿ ಹಾಗೂ ದೃಷ್ಟಿಹೀನರಿಗೆ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥೆಯ ರಾಮ್‌ಪ್ರಸಾದ್ ಮಾಹಿತಿ ನೀಡುತ್ತಿರುವುದು.

200 ಬಸ್‌ಗಳಿಗೆ ದಿವ್ಯ ಸ್ಪಂದನ ಸಾಧನ ಅಳವಡಿಕೆ

> "ಮೈಸೂರು ನಗರ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಸಂಚರಿಸುವ 200 ಬಸ್‌ಗಳಲ್ಲಿ ದೃಷ್ಟಿ ಹೀನ ಪ್ರಯಾಣಿಕರಿಗೆ ಧ್ವನಿ ಮೂಲಕ ಮಾಹಿತಿ ನೀಡುವ ಉಪಕರಣ ಅಳವಡಿಸಲಾಗಿದೆ. ಜು.14ರಂದು ಮಧ್ಯಾಹ್ನ 1.30ಕ್ಕೆ ನಗರ ಬಸ್ ನಿಲ್ದಾಣದಲ್ಲಿ ಸಾರಿಗೆ ಸಚಿವ ರಾಮಲಿಂಗರೆಡ್ಡಿ ಅವರು ದಿವ್ಯ ಸ್ಪಂದನ ಬಸ್‌ಗೆ ಚಾಲನೆ ನೀಡಲಿದ್ದಾರೆ. ಅಲ್ಲದೆ ಶಕ್ತಿಯೋಜನೆಯಡಿ 500 ಕೋಟಿ(ಬಾರಿ) ಪ್ರಯಾಣಿಕರು ಸಂಚರಿಸಿರುವ ಹಿನ್ನೆಲೆಯಲ್ಲಿ ಪ್ರಯಾಣಿಕರಿಗೆ ಸಿಹಿ ವಿತರಣೆ ಕಾರ್ಯಕ್ರಮ ಜರುಗಲಿದೆ.
> –ಹೆಚ್.ಟಿ.ವೀರೇಶ್, ವಿಭಾಗೀಯ ನಿಯಂತ್ರಣಾಧಿಕಾರಿ, ಮೈಸೂರು ನಗರ ವಿಭಾಗ

ಅಲ್ಲದೆ, ದಿವ್ಯ ಸ್ಪಂದನ ಉಪಕರಣ ಅಳವಡಿಸಿರುವ ಸಾರಿಗೆ ಸಂಸ್ಥೆಯ ಚಾಲಕ ಮತ್ತು ನಿರ್ವಾಹಕರಿಗೆ ತರಬೇತಿ ಕೂಡ ನೀಡಲಾಗಿದೆ.

ಉಪಕರಣ ಹೇಗೆ ಉಪಯೋಗಕಾರಿ!: ಈ ಉಪಕರಣಕ್ಕೆ 'ಆನ್ ಬೋರ್ಡ್' ಎಂದು ವೈಜ್ಞಾನಿಕ ಹೆಸರಿಡಲಾಗಿದೆ. ಆದರೆ, ದೃಷ್ಟಿಹೀನ ಪ್ರಯಾಣಿಕರ ನೆರವಿಗಾಗಿ ಉಪಕರಣವನ್ನು ಬಸ್‌ಗೆ ಅಳವಡಿಸಿ ಬಳಿಕ ಆ ಉಪಕರಣಕ್ಕೆ 'ದಿವ್ಯ ಸ್ಪಂದನ' ಎಂದು ಹೆಸರಿಸಲಾಗಿದೆ. ಇದರಲ್ಲಿ 'ಯೂಸರ್ ಮಾಡ್ಯೂಲ್' ಹಾಗೂ 'ಬಸ್ ಮಾಡ್ಯೂಲ್' ಎಂಬ ಎರಡು ಉಪಕರಣವಿದ್ದು, ಯೂಸರ್ ಮಾಡ್ಯೂಲ್ ಎಂಬ ಸಣ್ಣ ರಿಮೋಟ್ ಮಾದರಿಯ ಉಪಕರಣವನ್ನು, ಮೈಸೂರಲ್ಲಿ ಗುರುತಿಸಿದ 400 ದೃಷ್ಟಿಹೀನ ಪ್ರಯಾಣಿಕರಿಗೆ ನೀಡಲಾಗಿದೆ. ಬಸ್ ಮಾಡ್ಯೂಲ್ ಉಪಕರಣವನ್ನು 200 ಬಸ್‌ಗಳ ಮುಂಭಾಗದ ಬಾಗಿಲ ಬಳಿ ಅಳವಡಿಸಲಾಗಿದೆ.



ನಗರ ಸಾರಿಗೆ ಬಸ್‌ನಲ್ಲಿ ದಿವ್ಯ ಸ್ಪಂದನ ಉಪಕರಣ ಅಳವಡಿಸಿರುವುದು.

ಈ ಉಪಕರಣ ರೇಡಿಯೋ ಫ್ರೀಕ್ವೆನ್ಸಿ ಮಾದರಿಯಲ್ಲಿ ಕಾರ್ಯನಿರ್ವಹಿಸಲಿದೆ. ಬಸ್ ನಿಲ್ದಾಣ ಅಥವಾ ತಂಗುದಾಣದಲ್ಲಿ ಬಸ್‌ಗಾಗಿ ಕಾಯುತ್ತಿರುವ ಯೂಸರ್ ಮಾಡ್ಯೂಲ್ ಉಪಕರಣ ಹೊಂದಿರುವ ದೃಷ್ಟಿಹೀನ ಪ್ರಯಾಣಿಕರು ಮಾಡ್ಯೂಲ್ ಬಟನ್ ಒತ್ತಿದರೆ, ಅಲ್ಲಿ 100 ಅಡಿ ಅಂತರದಲ್ಲಿ ಬಸ್ ಮಾಡ್ಯೂಲ್ ಉಪಕರಣವಿರುವ ಬಸ್‌ಗಳ ಮಾರ್ಗ ಸಂಖ್ಯೆ ಧ್ವನಿ ಮೂಲಕ ಲಭ್ಯವಾಗಲಿದೆ. ಆ ಬಸ್ ಸಮೀಪ ಬರುತ್ತಿದ್ದಂತೆ ಮಾರ್ಗಸಂಖ್ಯೆ ಭಿತ್ತರದ ಧ್ವನಿ ಜೋರಾಗಲಿದ್ದು, ದೃಷ್ಟಿಹೀನ ಪ್ರಯಾಣಿಕರಿಗೆ ಬಸ್ ಬಗ್ಗೆ ಮಾಹಿತಿ ಲಭ್ಯವಾಗಲಿದೆ. ಒಂದೇ ಬಾರಿ 3–4 ಬಸ್ ಬಂದರೂ, ಸರದಿಯಂತೆ ಬಸ್‌ಗಳ ಸಂಖ್ಯೆ ಭಿತ್ತರಗೊಳ್ಳಲಿದೆ. ಇದರಿಂದ ದಿವ್ಯಾಂಗರಿಗೆ ಬಸ್‌ಗಳ ಬಗ್ಗೆ ಮಾಹಿತಿ ಒದಗಲಿದೆ. ಯೂಸರ್ ಮಾಡ್ಯೂಲ್ ಉಪಕರಣದ ಚಾರ್ಜ್ ಮಾಡಿಕೊಳ್ಳಲು ಚಾರ್ಜರ್ ನೀಡಲಾಗಿದೆ.

ಬೆಂಗಳೂರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕಾಲ್ತುಳಿತ ಪ್ರಕರಣದ ಹಿನ್ನೆಲೆ

ಮಹಾರಾಜ ಟ್ರೋಫಿ ಪಂದ್ಯಗಳಲ್ಲಿ ಪ್ರೇಕ್ಷಕರಿಗೆ ಪ್ರವೇಶಾವಕಾಶ ನಿರ್ಬಂಧ

- ಆ.11ರಿಂದ 27ರವರೆಗೆ ಪಂದ್ಯಾವಳಿ
- ಜು.15ರಂದು ಆಟಗಾರರ ಹರಾಜು ಪ್ರಕ್ರಿಯೆ



ಅರ್ಜುನ್ ರಂಗ

ಮೈಸೂರು,ಜು.12(ಪಿಎಂ)–ಬೆಂಗಳೂರು ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಆರ್‌ಸಿಬಿ ವಿಜಯೋತ್ಸವದ ವೇಳೆ ಉಂಟಾದ ಕಾಲ್ತುಳಿತದಲ್ಲಿ 11 ಮಂದಿ ಮೃತಪಟ್ಟ ಪ್ರಕರಣದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು (ಕೆಎಸ್‌ಸಿಎ) ನಾಲ್ಕನೇ ಆವೃತ್ತಿಯ ಮಹಾರಾಜ ಟ್ರೋಫಿ–2025ರ ಪಂದ್ಯಗಳಲ್ಲಿ ಪ್ರೇಕ್ಷಕರಿಗೆ ಪ್ರವೇಶಾವಕಾಶ ನಿರ್ಬಂಧಿಸುವ ನಿರ್ಧಾರ ಕೈಗೊಂಡಿದೆ.

ಕೆಎಸ್‌ಸಿಎ ಆಶ್ರಯದಲ್ಲಿ ಪಂದ್ಯಾವಳಿ ನಡೆಯಲಿವೆ. ಬೆಂಗಳೂರಿನಲ್ಲಿ ಶುಕ್ರವಾರ ಫ್ರಾಂಚೈಸಿ ಮಾಲೀಕರು, ಪ್ರತಿನಿಧಿಗಳು ಹಾಗೂ ಕೆಎಸ್‌ಸಿಎ ಪದಾಧಿಕಾರಿಗಳು ಸಭೆ ನಡೆಸಿ ಈ ಬಾರಿ ಪ್ರೇಕ್ಷಕರಿಗೆ ಪ್ರವೇಶಾವಕಾಶ ನಿರ್ಬಂಧಿಸುವ ನಿರ್ಧಾರ ಕೈಗೊಂಡರು.

ಈ ವರ್ಷದ ಮಹಾರಾಜ ಟ್ರೋಫಿಗಾಗಿ ಆಟಗಾರರ ಹರಾಜು ಪ್ರಕ್ರಿಯೆ ಜು.15ರಂದು ನಡೆಯಲಿದ್ದು, ಪಂದ್ಯಾವಳಿಯು ಆ.11ರಿಂದ 27ರವರೆಗೆ ನಡೆಯಲಿದೆ. ಪ್ರತಿ ತಂಡವು ಕನಿಷ್ಠ 16 ಹಾಗೂ ಗರಿಷ್ಠ 18 ಆಟಗಾರರೊಂದಿಗೆ ತಮ್ಮ ತಂಡಗಳನ್ನು ರಚಿಸಿಕೊಳ್ಳಲು ಅವಕಾಶವಿದೆ.

ಸೈಕಲ್ ಪ್ಯೂರ್ ಅಗರಬತ್ತಿ ವ್ಯವಸ್ಥಾಪಕ ನಿರ್ದೇಶಕ ಮತ್ತು ಮೈಸೂರು ವಾರಿಯರ್ಸ್ ತಂಡದ ಮಾಲೀಕ ಅರ್ಜುನ್ ರಂಗ, 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಪ್ರೇಕ್ಷಕರ ಕ್ರೀಡಾ ಉತ್ಸಾಹದ ಬಗ್ಗೆ ನಮಗೆ ಅತ್ಯಂತ ಗೌರವವಿದೆ. ಮುಖ್ಯ ವಿಷಯವೆಂದರೆ ಇಂತಹ ಪಂದ್ಯಾವಳಿಗಳು ಆಟಗಾರರು ತಮ್ಮ ಕ್ರೀಡಾ ಕೌಶಲ್ಯ ಮೆರೆಯಲು ಉತ್ತಮ ವೇದಿಕೆಯಾಗಲಿದೆ. ಆ ಮೂಲಕ ರಾಜ್ಯ ಮತ್ತು ರಾಷ್ಟ್ರೀಯ ತಂಡಗಳಲ್ಲಿ ಸ್ಥಾನ ಪಡೆಯಲು ಅವಕಾಶವೂ ಲಭಿಸಲಿದೆ ಎಂದು ತಿಳಿಸಿದರು.

ಇಂತಹ ಪಂದ್ಯಾವಳಿಗಳಿಂದಲೇ ಮನ್ವಂತ್ ಕುಮಾರ್ ಹಾಗೂ ಮನೋಜ್ ಭಂಡಗೆಯಂತಹ ಆಟಗಾರರು ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಫ್ರಾಂಚೈಸಿಗಳ ಗಮನ ಸೆಳೆಯಲು ಸಾಧ್ಯವಾಯಿತು ಎಂದು ಹೇಳಿದರು.

ಆರು ತಂಡಗಳು ಭಾಗಿ: ಮಹಾರಾಜ ಟ್ರೋಫಿಯಲ್ಲಿ ಹಾಲಿ ಚಾಂಪಿಯನ್ ಸ್ಥಾನದಲ್ಲಿರುವ ಮೈಸೂರು ವಾರಿಯರ್ಸ್, ರನ್ನರ್ ಅಪ್ ಸ್ಥಾನದಲ್ಲಿರುವ ಬೆಂಗಳೂರು ಬ್ಲಾಸ್ಟರ್ಸ್, ಹುಬ್ಬಳ್ಳಿ ಟೈಗರ್ಸ್, ಗುಲ್ಬರ್ಗ್ ಮಿಸ್ಟಿಕ್ಸ್, ಶಿವಮೊಗ್ಗ ಲಯನ್ಸ್ ಮತ್ತು ಮಂಗಳೂರು ಡ್ರಾಗನ್ಸ್ ತಂಡಗಳು ಸೇರಿದಂತೆ ಆರು ತಂಡಗಳು ಪಾಲ್ಗೊಳ್ಳಲಿವೆ.

ಸುರತ್ಕಲ್‌ನ ಎಂಆರ್‌ಪಿಎಲ್ ಘಟಕದಲ್ಲಿ ಅನಿಲ ಸೋರಿಕೆ; ಇಬ್ಬರು ಸಾವು

ಮಂಗಳೂರು: ಸುರತ್ಕಲ್‌ನ ಎಂಆರ್‌ಪಿಎಲ್ ಘಟಕದಲ್ಲಿ ಹೈಡ್ರೋಜನ್ ಸಲ್ಫೈಡ್ ಅನಿಲ ಸೋರಿಕೆಯಾಗಿ ಇಬ್ಬರು ಕಾರ್ಮಿಕರು ಮೃತಪಟ್ಟು, ಓರ್ವ ಅಸ್ವಸ್ಥಗೊಂಡಿರುವ ಘಟನೆ ಸಂಭವಿಸಿದೆ. ಎಂಆರ್‌ಪಿಎಲ್‌ನ OM&S ಘಟಕದ ಶೇಖರಣಾ ಪ್ರದೇಶದಲ್ಲಿ ಈ ಘಟನೆ ನಡೆದಿದೆ.

ಪೆಟ್ರೋಲಿಯಂ ರಿಫೈನರಿಯಾಗಿ ಕಾರ್ಯನಿರ್ವಹಿಸುತ್ತಿರುವ ಎಂಆರ್‌ಪಿಎಲ್‌ನ ತ್ಯಾಜ್ಯ ತೈಲ ಸಂಗ್ರಹಣ ಘಟಕದಲ್ಲಿ ಲೆವೆಲ್ ಬದಲಾವಣೆ ಪರಿಶೀಲನೆಗೆ ತೆರಳಿದ್ದ ಕಾರ್ಮಿಕ ವಾಪಸ್ ಬಾರದೇ ಇದ್ದುದನ್ನು ಕಂಡು ಇನ್ನಿಬ್ಬರು ಕಾರ್ಮಿಕರು ತೆರಳಿದ್ದಾರೆ. ಈ ವೇಳೆ ಮೂವರು ಅಸ್ವಸ್ಥಗೊಂಡಿದ್ದಾರೆ. ಕೂಡಲೇ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿದ್ದು, ದಾರಿ ಮಧ್ಯೆ ಇಬ್ಬರು ಕಾರ್ಮಿಕರು ಕೊನೆಯುಸಿರೆಳೆದಿದ್ದಾರೆ. ಓರ್ವನನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ.

ತ್ಯಾಜ್ಯ ತೈಲ ಸಂಗ್ರಹ ಟ್ಯಾಂಕ್‌ನಲ್ಲಿ ಅನಿಲ ಸೋರಿಕೆಯಾಗಿ ಈ ದುರಂತ ಸಂಭವಿಸಿದ್ದು. ಕಾರ್ಮಿಕರಲ್ಲಿ ಒಬ್ಬರು ಕನ್ನಡಿಗರಾಗಿದ್ದು, ಇಬ್ಬರು ಹೊರರಾಜ್ಯದವರೆಂದು ತಿಳಿದು ಬಂದಿದೆ.

ಅಧಿಕಾರ ಯಾರಿಗೂ ಶಾಶ್ವತವಲ್ಲ; ನಾಳೆ ಏನಾಗುವುದೊ ಗೊತ್ತಿಲ್ಲ

ರಾಜ್ಯದಲ್ಲಿ ನಾಯಕತ್ವ ಬಗ್ಗೆ ಶಾಸಕ ತನ್ವೀರ್ ಸೇಠ್ ಪ್ರತಿಕ್ರಿಯೆ



ಮೈಸೂರು, ಜು.12(ಬಿಎಲ್‌ಯು)– ಅಧಿಕಾರ ಯಾರಿಗೂ ಶಾಶ್ವತವಲ್ಲ, ನಾಳೆ ಏನಾಗುತ್ತದೆ ಎಂದು ಈಗಲೇ ಹೇಳಲು ಸಾಧ್ಯವಿಲ್ಲ ಎಂದು ಶಾಸಕ ತನ್ವೀರ್ ಸೇಠ್ ಅಚ್ಚರಿಯ ಹೇಳಿಕೆ ನೀಡಿದ್ದಾರೆ.

ಸೆಪ್ಟೆಂಬರ್ ವೇಳೆಗೆ ರಾಜ್ಯದಲ್ಲಿ ಹಾಗೂ ಪ್ರಸ್ತುತ ನಾಯಕತ್ವ ಬದಲಾವಣೆ ವಿಚಾರದಲ್ಲಿ ನಡೆದಿರುವ ಬೆಳವಣಿಗೆ ಕ್ರಾಂತಿ ಆಗಲಿದೆ ಎಂಬ ಸಹಕಾರ ಸಚಿವ ರಾಜಣ್ಣ ಭವಿಷ್ಯದ ಹಿನ್ನೆಲೆಯಲ್ಲಿ ತನ್ವೀರ್ ಸೇಠ್ ನೀಡಿರುವ ಈ ಹೇಳಿಕೆ ಕಾಂಗ್ರೆಸ್ ಪಕ್ಷದ ಒಳ ರಾಜಕೀಯ ಬೆಳವಣಿಗೆ ಬಹಿರಂಗವಾಗಿದೆ. ಮೈಸೂರಿನಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ಪ್ರಸಕ್ತ ರಾಜಕೀಯ ವಿಚಾರಗಳನ್ನು ಮಾಧ್ಯಮಗಳ ಮುಂದೆ ಮಾತನಾಡುವುದು ಸರಿಯಲ್ಲ. ಜನರ ಆಶೀರ್ವಾದ ಪಡೆದು ಈ ಸರ್ಕಾರ ರಚನೆಯಾಗಿದೆ. 5 ವರ್ಷಗಳ ಕಾಲ ಸುಭದ್ರ ಸರ್ಕಾರ ನೀಡುವುದು ಕಾಂಗ್ರೆಸ್ ಪಕ್ಷದ ಜವಾಬ್ದಾರಿ ಎಂದರು.

ಆದರೆ ಅಧಿಕಾರ ಎಂಬುದು ಯಾರಿಗೂ ಶಾಶ್ವತವಲ್ಲ. ಮುಂದೆ ಏನಾಗುತ್ತದೆ ಎಂದು ಈಗಲೇ ಹೇಳಲು ಸಾಧ್ಯವಿಲ್ಲ. ಅಧಿಕಾರ ಹಂಚಿಕೆಯ ಸೂತ್ರ ನಮಗೆ ಗೊತ್ತಿಲ್ಲ. ಈ ವಿಚಾರವಾಗಿ ಹೈಕಮಾಂಡ್ ಏನೇ ತೀರ್ಮಾನ ಮಾಡಿದರೂ ಅದಕ್ಕೆ ನಾವು ಬದ್ಧರಾಗಿದ್ದೇವೆ ಎಂದು ತನ್ವೀರ್ ಸೇಠ್ ಸ್ಪಷ್ಟಪಡಿಸಿದರು.

ಸಚಿವ ಸಂಪುಟ ಪುನರ್‌ರಚನೆ ಬಗ್ಗೆ ಪ್ರತಿಕ್ರಿಯೆ ನೀಡಿದ ತನ್ವೀರ್ ಸೇಠ್, ಸಚಿವ ಸಂಪುಟ ಪುನರ್‌ರಚನೆ ಆಗುವುದೋ ಅಥವಾ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಏನು ಬೇಕಾದರೂ ಆಗಬಹುದು ಎಂದು ಮತ್ತೊಮ್ಮೆ ಕುತೂಹಲಕಾರಿ ಹೇಳಿಕೆ ನೀಡಿದರು. ಆದರೆ ನಾನು ಕೂಡ ಸಚಿವಾಕಾಂಕ್ಷಿ. ನಾನೇನು ಸನ್ಯಾಸಿಯಲ್ಲ. ಅವಕಾಶಕ್ಕಾಗಿ ಕಾಯುತ್ತಿದ್ದೇನೆ. ಅವಕಾಶ ದೊರೆತರೆ ಖಂಡಿತವಾಗಿ ಸಚಿವನಾಗಿ ಜವಾಬ್ದಾರಿ ನಿಭಾಯಿಸಲು ಸಿದ್ಧನಿದ್ದೇನೆ ಎಂದು ತನ್ವೀರ್‌ಸೇಠ್ ಸ್ಪಷ್ಟನೆ ನೀಡಿದರು.

ಶ್ರೀ ಚಾಮುಂಡೇಶ್ವರಿ ಪೂಜಾ ಮಹೋತ್ಸವ...



ಮೂರನೇ ಆಷಾಢ ಹಿನ್ನೆಲೆಯಲ್ಲಿ ದಿ ಮೈಸೂರು ಸಿಟಿ ಶಿವ ಛತ್ರಪತಿ ಕೋ ಆಪರೇಟಿವ್ ಸೊಸೈಟಿಯಲ್ಲಿ ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ ಆಚರಿಸಲಾಯಿತು. ಸೊಸೈಟಿ ಅಧ್ಯಕ್ಷ ನಾಗೇಂದ್ರರಾವ್ ಅವತಾಡೆ, ಉಪಾಧ್ಯಕ್ಷ ಹರಿರಾವ್ ಶಿಂದೆ, ನಿರ್ದೇಶಕರಾದ ಕೃಷ್ಣೋಜಿರಾವ್ ಗಾಯಕ್‌ವಾಡ್, ವೆಂಕೋಬರಾವ್ ಕಿರದಂತ್, ಎನ್.ಎಂ.ತುಕಾರಾಂ ರಾವ್, ಕೆಕೆಎಂಪಿಯ ಕೇಶವನಾಥ್‌ರಾವ್ ಜಾದವ್, ಜ್ಞಾನ ಪ್ರಕಾಶ್ ರಾವ್ ಪವಾರ್, ಸವಿತಾಬಾಯಿ ಘಾಟ್ಕೆ, ಮಹದೇವರಾವ್ ಇದ್ದರು.

ದೇಶ - ವಿದೇಶ

ಮ್ಯಾನ್ಮಾರ್‌ನ ಬೌದ್ಧ ಮಠದ ಮೇಲೆ ವೈಮಾನಿಕ ದಾಳಿ; 23 ಜನ ಸಾವು




ಮ್ಯಾನ್ಮಾರ್: ಮ್ಯಾನ್ಮಾರ್‌ನ ಮಧ್ಯ ಸಾಗೈಂಗ್ ಪ್ರದೇಶದ ಬೌದ್ಧ ಮಠವೊಂದರ ಮೇಲೆ ಮ್ಯಾನ್ಮಾರ್ ಸೇನೆ ನಡೆಸಿದ ವೈಮಾನಿಕ ದಾಳಿಯಲ್ಲಿ ನಾಲ್ವರು ಮಕ್ಕಳು ಸೇರಿದಂತೆ 23 ಮಂದಿ ಸಾವನ್ನಪ್ಪಿದ್ದಾರೆ. ಲಿನ್ ಟಾ ಲು ಗ್ರಾಮದಲ್ಲಿ ಈ ದುರಂತ ದಾಳಿ ಸಂಭವಿಸಿದೆ. ಅಲ್ಲಿ ನಡೆಯುತ್ತಿರುವ ಸಂಘರ್ಷದಿಂದ ತಪ್ಪಿಸಿಕೊಳ್ಳಲು 150ಕ್ಕೂ ಹೆಚ್ಚು ಜನರು ಬೌದ್ಧ ಮಠದಲ್ಲಿ ಆಶ್ರಯ ಪಡೆದಿದ್ದರು. ಇಂದು ರಾತ್ರಿ ನಡೆದ ದಾಳಿಯಲ್ಲಿ ಸುಮಾರು 30 ಜನರು ಗಾಯಗೊಂಡಿದ್ದಾರೆ, ಅವರಲ್ಲಿ 10 ಜನರ ಸ್ಥಿತಿ ಗಂಭೀರವಾಗಿದೆ ಎಂದು ವರದಿಯಾಗಿದೆ. ಮಿಲಿಟರಿ ಜೆಟ್ ಇಂದು ಬೆಳಗಿನ ಜಾವ 1 ಗಂಟೆ ಸುಮಾರಿಗೆ ಮಠದ ಆವರಣದೊಳಗಿನ ಕಟ್ಟಡದ ಮೇಲೆ ಬಾಂಬ್ ಹಾಕಿತು. ಇತ್ತೀಚಿನ ಘರ್ಷಣೆಯಲ್ಲಿ ಸಿಲುಕಿದ ಸ್ಥಳಾಂತರಗೊಂಡ ಗ್ರಾಮಸ್ಥರು ಈ ಮಠವನ್ನು ಆಶ್ರಯ ತಾಣವಾಗಿ ಬಳಸುತ್ತಿದ್ದರು. ಕೊಲ್ಲಲ್ಪಟ್ಟವರೆಲ್ಲರೂ ರಕ್ಷಣೆ ಬಯಸಿ ಬಂದಿದ್ದ ನಾಗರಿಕರು 2021ರಲ್ಲಿ ಮಿಲಿಟರಿ ಅಧಿಕಾರವನ್ನು ವಶಪಡಿಸಿಕೊಂಡಾಗಿನಿಂದ ಮ್ಯಾನ್ಮಾರ್‌ನಲ್ಲಿ ನಡೆಯುತ್ತಿರುವ ಮಾನವೀಯ ಬಿಕ್ಕಟ್ಟಿನ ನಡುವೆ ಈ ಘಟನೆಯು ಮತ್ತಷ್ಟು ಆತಂಕ ಸೃಷ್ಟಿಸಿದೆ.

ಬೌದ್ಧ ಧರ್ಮಗುರು ದಲೈ ಲಾಮಾ ಲಡಾಖ್‌ಗೆ ಆಗಮನ



ಲೇಹ್: ಒಂದು ತಿಂಗಳ ಕಾಲದ ಆಧ್ಯಾತ್ಮಿಕ ಭೇಟಿಯ ಹಿನ್ನೆಲೆಯಲ್ಲಿ 14ನೇ ದಲೈಲಾಮಾ ಶನಿವಾರ ಲೇಹ್‌ಗೆ ಆಗಮಿಸಿದರು. ಅವರ ಆಗಮನವು ಆ ಪ್ರದೇಶದಾದ್ಯಂತ ಅಪಾರ ಭಕ್ತಿ ಮತ್ತು ಆಧ್ಯಾತ್ಮಿಕ ಉತ್ಸಾಹದಿಂದ ಗುರುತಿಸಲ್ಪಟ್ಟಿದೆ. ದಲೈಲಾಮಾ ಅವರ ವಾಸ್ತವ್ಯದ ಸಮಯದಲ್ಲಿ ವಿಮಾನ ನಿಲ್ದಾಣದಿಂದ ಅವರ ಅಧಿಕೃತ ನಿವಾಸವಾದ ಶೆವಾಟ್ಸೆಲ್ ಫೋಡ್ರಾಂಗ್‌ವರೆಗಿನ ರಸ್ತೆಗಳಲ್ಲಿ ಸಾವಿರಾರು ಸನ್ಯಾಸಿಗಳು, ಭಕ್ತರು ಮತ್ತು ಹಿತೈಷಿಗಳು ಸಾಲುಗಟ್ಟಿ ನಿಂತು ಹೂವುಗಳು ಮತ್ತು ಪ್ರಾರ್ಥನೆ ಅರ್ಪಿಸಿದರು. ಟಿಬೆಟಿಯನ್ ಆಧ್ಯಾತ್ಮಿಕ ನಾಯಕನನ್ನು ವಿವಿಧ ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳ ಪ್ರತಿನಿಧಿಗಳು, ಸ್ಥಳೀಯ ಮುಖಂಡರು ವಿಧ್ಯುಕ್ತ ಗೌರವಗಳು ಮತ್ತು ಆತ್ಮೀಯ ಶುಭಾಶಯಗಳೊಂದಿಗೆ ಬರಮಾಡಿಕೊಂಡರು. ಸುಗಮ ಮತ್ತು ಸುರಕ್ಷಿತ ಸ್ವಾಗತವನ್ನು ಖಚಿತಪಡಿಸಿ ಕೊಳ್ಳಲು Z-ಪ್ಲಸ್ ರಕ್ಷಣೆಯೊಂದಿಗೆ ಭದ್ರತಾ ವ್ಯವಸ್ಥೆಗಳನ್ನು ಹೆಚ್ಚಿಸಲಾಗಿದೆ. ಒಂದು ವರ್ಷದ ಅಂತರದ ನಂತರ ಈ ಭೇಟಿ ನೀಡಲಾಗುತ್ತಿದ್ದು, ದಲೈಲಾಮಾ ಅವರನ್ನು ತಮ್ಮ ಸರ್ವೋಚ್ಚ ಆಧ್ಯಾತ್ಮಿಕ ಮಾರ್ಗದರ್ಶಕ ಎಂದು ಪರಿಗಣಿಸುವ ಲಡಾಖ್ ಜನರಿಗೆ ಇದು ಮಹತ್ವದ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಕ್ಷಣವೆಂದು ಪರಿಗಣಿಸಲಾಗುತ್ತಿದೆ.

ಪಾಕಿಸ್ತಾನದಲ್ಲಿ ಉಗ್ರರ ಸಂಘಟನೆಗಳು ಇರುವುದು ನಿಜ



ಇಸ್ಲಾಮಾಬಾದ್: ಭಾರತೀಯ ಪತ್ರಕರ್ತ ಕರಣ್ ಥಾಪರ್ ಅವರೊಂದಿಗಿನ ಸಂದರ್ಶನದಲ್ಲಿ ಪಾಕಿಸ್ತಾನದ ಮಾಜಿ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೋ ಜರ್ದಾರಿ ಅವರು ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್ ದಾಳಿಯು ಭಯೋತ್ಪಾದಕ ಕೃತ್ಯ ಎಂದು ಒಪ್ಪಿಕೊಂಡಿದ್ದಾರೆ. ಲಷ್ಕರ್–ಎ–ತೈಬಾ ಮತ್ತು ಜೈಶ್–ಎ–ಮೊಹಮ್ಮದ್‌ನಂತಹ ಭಯೋತ್ಪಾದಕ ಸಂಘಟನೆಗಳು ಪಾಕಿಸ್ತಾನದಲ್ಲಿ ಇನ್ನೂ ಅಸ್ತಿತ್ವದಲ್ಲಿವೆ ಎಂದು ಅವರು ಒಪ್ಪಿಕೊಂಡಿದ್ದಾರೆ. ಇದೇ ಮೊದಲ ಬಾರಿಗೆ ಪಾಕಿಸ್ತಾನದ ನಾಯಕರೊಬ್ಬರು ತಮ್ಮ ದೇಶದಲ್ಲಿ ಉಗ್ರರ ಅಸ್ತಿತ್ವವಿರುವುದು ಸತ್ಯ ಎಂದು ಹೇಳಿದ್ದಾರೆ.

ಪಹಲ್ಗಾಮ್ ದಾಳಿಯಲ್ಲಿ ಪಾಕಿಸ್ತಾನ ಸರ್ಕಾರ ಅಥವಾ ಸೈನ್ಯದ ಪಾತ್ರವನ್ನು ಬಿಲಾವಲ್ ಭುಟ್ಟೋ ನಿರಾಕರಿಸಿದ್ದಾರೆ. ಅಂತಹ ಆರೋಪಗಳನ್ನು ಅಪಪ್ರಚಾರ ಎಂದು ಕರೆದಿದ್ದಾರೆ. ಪಾಕಿಸ್ತಾನ ಭಯೋತ್ಪಾದನೆಯನ್ನು ಬೆಂಬಲಿಸುವುದಿಲ್ಲ, ಪಾಕಿಸ್ತಾನವೂ ಭಯೋತ್ಪಾದನೆಯಿಂದ ತೀವ್ರವಾಗಿ ಬಳಲುತ್ತಿದೆ ಎಂದು ಅವರು ಒತ್ತಿ ಹೇಳಿದ್ದಾರೆ. ನಾವು ಭಯೋತ್ಪಾದನೆಯಿಂದ 92,000ಕ್ಕೂ ಹೆಚ್ಚು ಜೀವಗಳನ್ನು ಕಳೆದುಕೊಂಡಿದ್ದೇವೆ ಎಂದು ಅವರು ಹೇಳಿದ್ದಾರೆ.


1.18 ಕೋಟಿ ರೂ. ಬಹುಮಾನದ 23 ನಕ್ಸಲೀಯರ ಶರಣಾಗತಿ

ಸುಕ್ಮಾ: ಛತ್ತೀಸ್ ಗಢದಲ್ಲಿ ಶಸ್ತ್ರಾಸ್ತ್ರ ತ್ಯಜಿಸಿ ಶರಣಾಗುತ್ತಿರುವ ನಕ್ಸಲೀಯರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ನಾರಾಯಣಪುರ ಜಿಲ್ಲೆಯಲ್ಲಿ ನಿನ್ನೆಯಷ್ಟೇ 22 ನಕ್ಸಲೀಯರು ಶರಣಾಗಿದ್ದರು. ಇಂದು ಸುಕ್ಮಾ ಜಿಲ್ಲೆಯಲ್ಲಿ ರೂ. 1.18 ಕೋಟಿ ಬಹುಮಾನ ಘೋಷಿಸಲಾಗಿದ್ದ ಮೂವರು ದಂಪತಿ ಸೇರಿದಂತೆ 23 ನಕ್ಸಲೀಯರು ಶರಣಾಗಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇದರಲ್ಲಿ ನಕ್ಸಲ್ ಗುಂಪಿನ 11 ಹಿರಿಯ ಸದಸ್ಯರು ಸೇರಿದ್ದಾರೆ. ಅವರಲ್ಲಿ ಬಹುತೇಕರು ಪೀಪಲ್ಸ್ ಲಿಬರೇಶನ್ ಗೆರಿಲ್ಲಾ ಆರ್ಮಿ ಬೆಟಾಲಿಯನ್ ನಂ.1ನಲ್ಲಿ ಸಕ್ರಿಯರಾಗಿದ್ದರು ಎಂದು ಅವರು ಮಾಹಿತಿ ನೀಡಿದ್ದಾರೆ.

ಪೊಳ್ಳು ನಕ್ಸಲ್ ಸಿದ್ಧಾಂತ, ಅಮಾಯಕ ಆದಿವಾಸಿಗಳ ಮೇಲೆ ನಕ್ಸಲೀಯರು ನಡೆಸಿದ ದೌರ್ಜನ್ಯ ಮತ್ತು ಸಂಘಟನೆಯಲ್ಲಿ ಹೆಚ್ಚುತ್ತಿರುವ ಆಂತರಿಕ ಭಿನ್ನಾಭಿಪ್ರಾಯಗಳಿಂದ ನಿರಾಸೆಗೊಂಡು ಶರಣಾಗುತ್ತಿರುವುದಾಗಿ ಅವರು ಅಧಿಕಾರಿಗಳ ಮುಂದೆ ಹೇಳಿದ್ದಾರೆ ಎಂದು ಸುಕ್ಮಾ ಪೊಲೀಸ್ ವರಿಷ್ಠಾಧಿಕಾರಿ ಕಿರಣ್ ಚವಾಣ್ ತಿಳಿಸಿದ್ದಾರೆ. ಶರಣಾದವರಲ್ಲಿ 9 ಮಂದಿ ಮಹಿಳೆಯರು ಸೇರಿದ್ದಾರೆ.

'ಆಪರೇಷನ್ ಬಾಮ್': ಪಾಕ್‌ನಲ್ಲಿ ರಕ್ತದೋಕುಳಿ ಹರಿಸಿದ ಬಲೂಚ್



ಇಸ್ಲಾಮಾಬಾದ್: ಕಳೆದ 5 ದಿನಗಳಲ್ಲಿ ಬಲೂಚಿಸ್ತಾನ್ ಮತ್ತು ಪಾಕಿಸ್ತಾನದ ಇತರ ಪ್ರಾಂತ್ಯಗಳಲ್ಲಿ ಸುಮಾರು 84 ದಾಳಿಗಳು ನಡೆದಿವೆ. ಈ ಎಲ್ಲಾ ದಾಳಿಗಳ ಜವಾಬ್ದಾರಿಯನ್ನು ಬಲೂಚಿಸ್ತಾನ್ ಲಿಬರೇಶನ್ ಫ್ರಂಟ್ ವಹಿಸಿಕೊಂಡಿದೆ. ಇದನ್ನು 'ಆಪರೇಷನ್ ಬಾಮ್'ನ ಭಾಗವೆಂದು ಹೇಳಿದೆ. ಜುಲೈ 8ರಂದು ಬಿಎಲ್‌ಎಫ್ ಆಪರೇಷನ್ ಬಾಮ್ ಆರಂಭವನ್ನು ಘೋಷಿಸಿತ್ತು. 84 ಸಂಘಟಿತ ದಾಳಿಗಳನ್ನು ಒಳಗೊಂಡ ದೊಡ್ಡ ಪ್ರಮಾಣದ ಮಿಲಿಟರಿ ಕಾರ್ಯಾಚರಣೆಯಾದ ಆಪರೇಷನ್ ಬಾಮ್ ಅನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದೇವೆ ಎಂದು ಬಿಎಲ್‌ಎಫ್ ಘೋಷಿಸಿದೆ. ಶುಕ್ರವಾರ ಸಂಜೆ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ಬಿಎಲ್‌ಎಫ್ ವಕ್ತಾರ ಮೇಜರ್ ಗ್ವಾಹ್ರಾಮ್ ಬಲೋಚ್, ಜುಲೈ 9 ಮತ್ತು ಜುಲೈ 11ರ ನಡುವೆ ಪಾಕಿಸ್ತಾನಿ ಮಿಲಿಟರಿ ಸಿಬ್ಬಂದಿ, ಗುಪ್ತಚರ ಕಾರ್ಯಕರ್ತರು ಮತ್ತು ಪ್ರಮುಖ ರಾಜ್ಯ ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡು ದಾಳಿಗಳು ನಡೆದಿವೆ ಎಂದರು. ಬಲೂಚಿಸ್ತಾನ್ ಪೋಸ್ಟ್ ಪ್ರಕಾರ ಪಾಕಿಸ್ತಾನ ಸೇನೆ ಮತ್ತು ಫ್ರಾಂಟಿಯರ್ ಕಾರ್ಪ್ಸ್‌ನ ಕನಿಷ್ಠ 50 ಸಿಬ್ಬಂದಿ ಸಾವನ್ನಪ್ಪಿದ್ದಾರೆ ಮತ್ತು 51ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ಅಸಮರ್ಪಕ ಕಸ ವಿಲೇವಾರಿ; ರೋಗದ ಭೀತಿ

ಸಿದ್ದಾಪುರ,ಜು.12–ಪಟ್ಟಣದಲ್ಲಿ ಸಮರ್ಪಕವಾಗಿ ಕಸ ವಿಲೇವಾರಿ ಮಾಡದ ಕಾರಣ ಇಡೀ ಪಟ್ಟಣದ ಮುಖ್ಯ ಪ್ರದೇಶಗಳಲ್ಲಿ ಕಸದ ರಾಶಿಯೇ ಆವೃತ್ತಗೊಂಡಿದೆ.

ಕಸದ ದುರ್ವಾಸನೆಯಿಂದ ಪಟ್ಟಣ ಗಬ್ಬೆದ್ದು ನಾರುತ್ತಿದೆ. ಚರಂಡಿಗಳಲ್ಲಿ ಸೊಳ್ಳೆಗಳು ಉತ್ಪತ್ತಿಯಾಗಿ ಸಾಂಕ್ರಾಮಿಕ ರೋಗ ಬಾಧಿಸತೊಡಗಿದೆ. ಹಲವರಿಗೆ ಡೆಂಗ್ಯೂ ಸೇರಿದಂತೆ ಇತರೆ ಸಾಂಕ್ರಾಮಿಕ ರೋಗಗಳು ಕಾಡಿವೆ. ಕಳೆದ ವರ್ಷವೂ ಈ ಭಾಗದಲ್ಲಿ ಸುಮಾರು 16 ಡೆಂಗ್ಯೂ ಪ್ರಕರಣಗಳು ಪತ್ತೆಯಾಗಿ ಹಲವು ಮಂದಿ ಸಂಕಷ್ಟವನ್ನು ಎದುರಿಸಿದ್ದರು. ಇದೀಗ ಮಳೆಗಾಲವಾದ ಕಾರಣ ಮತ್ತಷ್ಟು ಡೆಂಗ್ಯೂ ಪ್ರಕರಣ ಹೆಚ್ಚಾಗುವ ಆತಂಕ ಇಲ್ಲಿನ ಜನರಿಗೆ ಕಾಡುತ್ತಿದೆ.

ತೆರಿಗೆ ಸಂಗ್ರಹದಲ್ಲಿ ಮುಂಚೂಣಿಯಲ್ಲಿ ಇರುವ ಇಲ್ಲಿನ ಗ್ರಾಮ ಪಂಚಾಯಿತಿ ಎರಡು ದಶಕಗಳಿಂದ ಕಸ ವಿಲೇವಾರಿಗೆ ಜಾಗವಿಲ್ಲದೆ ಸಮಸ್ಯೆ ಎದುರಿಸುತ್ತಿದ್ದು, ಸಿದ್ದಾಪುರ ಸಂತೆ ಮಾರುಕಟ್ಟೆಯ ಸರಕಾರಿ ಪ್ರಾಥಮಿಕ ಶಾಲೆಗೆ ಅನತಿ ದೂರದಲ್ಲಿ ಗ್ರಾಮ ಪಂಚಾಯಿತಿ ಕಸ ತಂದು ಸುರಿಯುತ್ತಿದ್ದು ಇಡೀ ವಾತಾವರಣವೇ ಗಬ್ಬು ವಾಸನೆಯೊಂದಿಗೆ ದುರ್ನಾಥ ಬೀರುತ್ತಿದೆ. ಪರಿಣಾಮ ಸೊಳ್ಳೆ, ನೊಣ, ಬೀದಿ ನಾಯಿಗಳ ಹಾವಳಿಯು ಹೆಚ್ಚಾಗಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.



ಸಿದ್ದಾಪುರ ಪಟ್ಟಣದ ಮುಖ್ಯ ಪ್ರದೇಶಗಳಲ್ಲಿ ಕಸದ ರಾಶಿಯೇ ಆವೃತ್ತಗೊಂಡಿದೆ.

ಶಾಸಕರ ನೇತೃತ್ವದಲ್ಲಿ ನಡೆದ ಜನ ಸಂಪರ್ಕ ಸಭೆಯಲ್ಲಿ ಕಸ ವಿಲೇವಾರಿ ವಿಚಾರವಾಗಿ ವ್ಯಾಪಕ ಚರ್ಚೆ ನಡೆದು 20 ದಿನಗಳಲ್ಲಿ ತ್ಯಾಜ್ಯ ವಿಲೇವಾರಿ ಮಾಡುಸುವಂತೆ ಆಡಳಿತ ಮಂಡಳಿಗೆ ಸೂಚಿಸಿದ್ದರು. ಆಗ ಮಾತ್ರ ಕಸವನ್ನು ಖಾಲಿ ಮಾಡಿದ್ದು ಬಿಟ್ಟರೆ ನಂತರ ಇದೇ ಪ್ರದೇಶದಲ್ಲಿ ಗ್ರಾಮ ಪಂಚಾಯಿತಿ ಕಸ ಶೇಖರಣೆ ಮಾಡುತ್ತಿರುವುದಾಗಿ ಸ್ಥಳೀಯರು ಆರೋಪಿಸಿದ್ದಾರೆ. ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಮಳಿಗೆಗಳನ್ನು ನಿರ್ಮಿಸಿ ಅದರ ಸುತ್ತಲು ಈ ರೀತಿ ಕಸ ಹಾಕಿರುವುದರಿಂದ ಕಟ್ಟಡಗಳು ಉಪಯೋಗ ಶೂನ್ಯವಾಗಿ ಪಂಚಾಯಿತಿಯ ಆದಾಯ ಕುಂಠಿತವಾಗಿದೆ ಎಂದು ಸಾಮಾಜಿಕ ಕಾರ್ಯಕರ್ತ ಸಮದ್ ಹೇಳಿದ್ದಾರೆ.

ಪಕ್ಕದಲ್ಲೆ ಪ್ರಾಥಮಿಕ ಶಾಲೆ ಇದ್ದು ಮಕ್ಕಳು, ವಯೊವೃದ್ದರು ಸೇರಿದಂತೆ ಸಾರ್ವಜನಿಕರು ಇದೇ ರಸ್ತೆಯಲ್ಲಿ ತಿರುಗಾಡುತ್ತಿದ್ದು, ಕಸ ಸಂಗ್ರಹಿಸಲು ವಾಹನ ಸರಿಯಾದ ಸಮಯಕ್ಕೆ ಬಾರದೆ ಸಮಸ್ಯೆಯಾಗಿದೆ ಎಂದು ಸ್ಥಳೀಯ ನಿವಾಸಿ ಫಯಾಜ್ ಅಹಮದ್ ಹೇಳಿದ್ದಾರೆ. ಒಟ್ಟಿನಲ್ಲಿ ಜನವಸತಿ ಪ್ರದೇಶದಲ್ಲೇ ಪಂಚಾಯಿತಿ ಕಸ ವಿಲೇವಾರಿ ಮಾಡುತ್ತಿರುವುದರಿಂದ ಸ್ಥಳೀಯ ನಿವಾಸಿಗಳಿಗೆ ಸಾಂಕ್ರಾಮಿಕ ರೋಗದ ಭೀತಿ ಎದುರಾಗಿದೆ.

ಜನಾಂಗೀಯ ಪ್ರಮಾಣ ಪತ್ರ ಪಡೆಯಲು ಸಿಎನ್‌ಸಿ ಸಲಹೆ

ಮಡಿಕೇರಿ,ಜು.12–ಕೊಡವರು ಬಂದೂಕು ವಿನಾಯಿತಿ ಪ್ರಮಾಣ ಪತ್ರವನ್ನು ಪಡೆಯಲು ಜಮ್ಮಾ ಪ್ರಮಾಣ ಪತ್ರಗಳನ್ನು ಅವಲಂಬಿಸುವ ಬದಲು 'ಕೊಡವ' ಜನಾಂಗೀಯ ಪ್ರಮಾಣ ಪತ್ರವನ್ನು ಪಡೆಯುವಂತೆ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಸಲಹೆ ನೀಡಿದೆ.

ಪತ್ರಿಕಾ ಹೇಳಿಕೆ ನೀಡಿರುವ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಸಂವಿಧಾನದ 25 ಮತ್ತು 26ನೇ ವಿಧಿಗಳ ಅಡಿಯಲ್ಲಿ ಶಸ್ತ್ರಾಸ್ತ್ರಗಳನ್ನು ಹೊಂದುವ ಕೊಡವ ಸಮುದಾಯದ ಹಕ್ಕನ್ನು ಧಾರ್ಮಿಕ ಸಂಸ್ಕಾರವಾಗಿ ಸಂರಕ್ಷಿಸಲು ಕೊಡವ ಜನಾಂಗೀಯ ಪ್ರಮಾಣ ಪತ್ರವನ್ನು ಪಡೆಯುವ ಕ್ರಮ ಸಹಕಾರಿಯಾಗಲಿದೆ. ಕೊಡವ ಸಮುದಾಯದ ಸಂಪ್ರದಾಯ ಮತ್ತು ಹಕ್ಕುಗಳ ಸಮಗ್ರತೆಯನ್ನು ಕಾಪಾಡಿಕೊಳ್ಳಲು ಕೊಡವ ಜನಾಂಗ ಪ್ರಮಾಣ ಪತ್ರದ ಅಗತ್ಯವಿದೆ. ಕೊಡವ ಪ್ರಮಾಣ ಪತ್ರವು ಜಮ್ಮಾ ಹೊಂದಿರುವವರ ಪ್ರಮಾಣ ಪತ್ರಗಳನ್ನು ಅವಲಂಬಿಸದೆ ಬಂದೂಕು ವಿನಾಯಿತಿಯ ಹಕ್ಕನ್ನು ಗಟ್ಟಿಗೊಳಿಸುತ್ತದೆ ಎಂದು ತಿಳಿಸಿದ್ದಾರೆ.



ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ಎನ್.ಯು.ನಾಚಪ್ಪ ಬಂದೂಕುಗಳಿಗೆ ನಮಿಸಿದರು.

ಜಮ್ಮಾ ಭೂಮಿಯನ್ನು ಖರೀದಿಸುವ ಮೂಲಕ ಅಥವಾ ಈ ಉದ್ದೇಶಕ್ಕಾಗಿ ಮಾತ್ರ ಕೊಡವ ಮಹಿಳೆಯರೊಂದಿಗೆ ವಿವಾಹವಾಗುವ ಮೂಲಕ ಕೊಡವರಲ್ಲದ ಹೊರಗಿನವರು ಬಂದೂಕು ವಿನಾಯಿತಿ ಸವಲತ್ತನ್ನು ಬಳಸಿಕೊಳ್ಳುವುದನ್ನು ತಡೆಯಬೇಕು. ಕೊಡವ ಸಮುದಾಯದ ಜಾನಪದ ಕಾನೂನು ವ್ಯವಸ್ಥೆಗಳು ಮತ್ತು ಗುರುತನ್ನು ಬಲಪಡಿಸಬೇಕು. ಕೊಡವ ಸಮುದಾಯದ ಅರ್ಹ ಸದಸ್ಯರು ಬಂದೂಕು ವಿನಾಯಿತಿ ಪ್ರಮಾಣ ಪತ್ರವನ್ನು ಪಡೆಯುತ್ತಿದ್ದಾರೆಯೇ ಎನ್ನುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಒತ್ತಾಯಿಸಿರುವ ಅವರು, ಇದರಿಂದಾಗಿ ರಾಷ್ಟ್ರೀಯ ಭದ್ರತೆಗೆ ಮತ್ತು ಸುರಕ್ಷತೆಗೆ ಕೊಡುಗೆ ನೀಡಿದಂತಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಕಾಡಾನೆ ಹಾವಳಿ: ಪರಿಹಾರಕ್ಕೆ ಗ್ರಾಮಸ್ಥರ ಆಗ್ರಹ



ಕಾಡಾನೆಗಳ ದಾಂಧಲೆಯಿಂದ ಕೃಷಿ ಗಿಡ ಹಾಗೂ ಗೊಬ್ಬರ ಮೂಟೆಗಳು ನಾಶಗೊಂಡಿವೆ.

ಮಡಿಕೇರಿ,ಜು.12–ನರಿಯಂಡಡ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೋಕೇರಿ, ನರಿಯಂಡಡ ಗ್ರಾಮದಲ್ಲಿ ಕಳೆದ ಕೆಲ ದಿನಗಳಿಂದ ಕಾಡಾನೆಗಳ ಹಿಂಡು ಗ್ರಾಮದ ಬೆಳೆಗಾರರ ತೋಟಗಳಿಗೆ ಲಗ್ಗೆ ಇಟ್ಟು ದಾಂಧಲೆ ನಡೆಸಿ ಕೃಷಿ ಗಿಡಗಳನ್ನು ಹಾಗೂ ಗೊಬ್ಬರ ನಾಶಪಡಿಸಿವೆ. ಇದರಿಂದಾಗಿ ಕೃಷಿಕರಿಗೆ ಅಪಾರ ನಷ್ಟ ಸಂಭವಿಸಿದ್ದು, ಕಾಡಾನೆಗಳ ಹಾವಳಿಯಿಂದ ಗ್ರಾಮಸ್ಥರಲ್ಲಿ ಆತಂಕ ಸೃಷ್ಟಿಯಾಗಿದೆ.

ಕೋಕೇರಿ ಗ್ರಾಮದ ಚೇರುವಳಂಡ ಕಿಶನ್ ಸೋಮಯ್ಯ ಎಂಬುವರಿಗೆ ಸೇರಿದ ತೋಟಕ್ಕೆ ಲಗ್ಗೆ ಇಟ್ಟ ಕಾಡಾನೆ ಸಂಗ್ರಹಿಸಿಟ್ಟಿದ್ದ 25ಕ್ಕೂ ಹೆಚ್ಚು ಗೊಬ್ಬರ ಚೀಲಗಳನ್ನು ತುಳಿದು ನಾಶಪಡಿಸಿದೆ. ತೋಟದಲ್ಲಿ ಅಡಿಕೆ, ಕಾಫಿ, ಬಾಳೆ ಮತ್ತಿತರ ಗಿಡಗಳನ್ನು ತುಳಿದು ನಾಶ ಗೊಳಿಸಿದೆ. ನರಿಯಂಡಡ ಗ್ರಾಮದ ತೋಟಂಬೈಲು ಅನಂತ್ ಕುಮಾರ್ ಎಂಬುವರ ಮನೆಯ ಸಮೀಪದಲ್ಲಿ ಕಾಡಾನೆಗಳ ಹಿಂಡು ತೋಟದಲ್ಲಿ ಬೆಳೆದ ಕಾಫಿ, ಅಡಿಕೆ, ಕರಿ ಮೆಣಸು, ಬಾಳೆ ಇನ್ನಿತರ ಫಸಲುಭರಿತ ಕೃಷಿ ಗಿಡಗಳನ್ನು ತುಳಿದು ಅಪಾರ ನಷ್ಟ ಉಂಟು ಮಾಡಿದೆ.

ಈ ವ್ಯಾಪ್ತಿಯಲ್ಲಿ 20ಕ್ಕೂ ಅಧಿಕ ಕಾಡಾನೆಗಳು ತೋಟದಲ್ಲೇ ಬೀಡು ಬಿಟ್ಟಿದ್ದು ಕಾಫಿ ತೋಟವನ್ನೇ ಆವಾಸ ಸ್ಥಾನವನ್ನಾಗಿಸಿಕೊಂಡಿವೆ. ಈ ವ್ಯಾಪ್ತಿಯಲ್ಲಿರುವ ಕಾಡಾನೆಗಳ ಪೈಕಿ ಒಂದೆರಡು ಕಾಡಾನೆ ಕುಂಟುತ್ತ ಸಂಚರಿಸುತ್ತದೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಕೂಡಲೇ ಸಂಬಂಧಪಟ್ಟ ಅರಣ್ಯ ಇಲಾಖೆ ಕುಂಟುತ್ತ ಸಂಚರಿಸುವ ಕಾಡಾನೆಗಳನ್ನು ಸೆರೆ ಹಿಡಿದು ಬೇರೆಡೆ ಸ್ಥಳಾಂತರಿಸಬೇಕು. ಬೆಳೆ ನಷ್ಟಕ್ಕೊಳಗಾದ ಬೆಳೆಗಾರರಿಗೆ ಸೂಕ್ತ ಪರಿಹಾರ ನೀಡಬೇಕೆಂದು ಆಗ್ರಹಿಸಿದ್ದಾರೆ.

ಜನಗಣತಿ ಹಿನ್ನೋಟ–ಮುನ್ನೋಟ ಬಗ್ಗೆ ಬಿಜೆಪಿ ಪೂರ್ವಭಾವಿ ಸಭೆ

ಮಡಿಕೇರಿ,ಜು.12– ಕೇಂದ್ರ ಸರ್ಕಾರದ ಜಾತಿ ಮತ್ತು ಜನಗಣತಿಯ ಕುರಿತು ಸ್ಪಷ್ಟತೆ ಹಾಗೂ ಜನಗಣತಿಯ ಹಿನ್ನೋಟ ಮತ್ತು ಮುನ್ನೋಟ ಎಂಬ ವಿಷಯದ ಕುರಿತು ಜಿಲ್ಲಾ ಬಿಜೆಪಿ ಸಭೆ ನಡೆಯಿತು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಹಿಂದುಳಿದ ವರ್ಗಗಳ ಮೋರ್ಚಾದ ಜಿಲ್ಲಾಧ್ಯಕ್ಷ ಅಪ್ರು ರವೀಂದ್ರ, ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರ ದೇಶದಲ್ಲಿ ಅನೇಕ ಸಾಮಾಜಿಕ ಸುಧಾರಣೆಗಳನ್ನು ತಂದಿದ್ದು, ಇದೀಗ ಜಾತಿ ಮತ್ತು ಜನಗಣತಿಯ ದಿಟ್ಟ ಹೆಜ್ಜೆ ಇಟ್ಟಿದೆ. ಈ ಮಹತ್ವದ ಕಾರ್ಯದ ಯಶಸ್ಸಿಗೆ ಕಾರ್ಯಕರ್ತರ ಪಾತ್ರವೂ ಅಗತ್ಯ ಎಂದರು. ಪ್ರತಿಯೊಬ್ಬರು ಪಕ್ಷ ಸಂಘಟನೆಯ ಮೂಲಕ ನರೇಂದ್ರ ಮೋದಿ ಅವರ ಕೈ ಬಲಪಡಿಸಬೇಕೆಂದರು.



ಜನಗಣತಿಯ ಹಿನ್ನೋಟ, ಮುನ್ನೋಟ ವಿಷಯದ ಬಗ್ಗೆ ಪೂರ್ವಭಾವಿ ಸಭೆ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ನಡೆಯಿತು.

ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಹಿಂದುಳಿದ ವರ್ಗಗಳ ಮೋರ್ಚಾದ ಪ್ರಧಾನ ಕಾರ್ಯದರ್ಶಿ ವಿನೋದ್ ಪೂಜಾರಿ, ಎಸ್.ಎನ್. ರಘು, ಉಪಾಧ್ಯಕ್ಷ ಕೆ.ಗಿರೀಶ್, ನಗರಾಧ್ಯಕ್ಷ ಗಜೇಂದ್ರ, ವಿರಾಜಪೇಟೆ ಅಧ್ಯಕ್ಷ ನವೀನ್ ಉತ್ತಯ್ಯ, ಸೋಮವಾರಪೇಟೆ ಅಧ್ಯಕ್ಷ ಸುನಿಲ್, ಗ್ರಾಮಾಂತರ ಅಧ್ಯಕ್ಷ ಪ್ರದೀಪ್, ಮಾಧ್ಯಮ ಸಂಚಾಲಕ ವಿಠಲ ಪೂಜಾರಿ, ಅಕ್ಷಿತ್ ಪೂಜಾರಿ, ಬಿಜೆಪಿ ನಗರಾಧ್ಯಕ್ಷ ಉಮೇಶ್ ಸುಬ್ರಮಣಿ, ಮಹಿಳಾ ಅಧ್ಯಕ್ಷೆ ಸೌಮ್ಯ ಸುನಿಲ್, ಜಿಲ್ಲಾ ಕಾರ್ಯದರ್ಶಿಗಳು, ಕೋಶಾಧಿಕಾರಿಗಳು ಹಾಗೂ ಕಾರ್ಯಕಾರಿಣಿ ಸದಸ್ಯರು ಉಪಸ್ಥಿತರಿದ್ದರು.

ವಿರಾಜಪೇಟೆಯಲ್ಲಿ ಮೆಗಾ ಲೋಕ ಅದಾಲತ್



ವಿರಾಜಪೇಟೆ ನ್ಯಾಯಾಲಯದಲ್ಲಿ ಶನಿವಾರ ಮೆಗಾ ಲೋಕ ಅದಾಲತ್ ನಡೆಯಿತು.

ವಿರಾಜಪೇಟೆ, ಜು.12–ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ ವಿರಾಜಪೇಟೆ ನ್ಯಾಯಾಲಯಗಳ ಸಮುಚ್ಚಯದಲ್ಲಿ ಶನಿವಾರ ಮೆಗಾ ಲೋಕ ಅದಾಲತ್ತನ್ನು ಹಮ್ಮಿಕೊಳ್ಳಲಾಗಿತ್ತು. ಅದಾಲತ್‌ನಲ್ಲಿ ಮೋಟಾರು ವಾಹನ ಅಪಘಾತಗಳ ಪ್ರಕರಣಗಳು, ಕೌಟಂಬಿಕ ಪ್ರಕರಣಗಳು, ಚೆಕ್‌ಬೌನ್ಸ್ ಪ್ರಕರಣಗಳು, ಎಂ.ಎಂ.ಡಿ.ಆರ್ ಪ್ರಕರಣಗಳು, ಪಾಲು ವಿಭಾಗ ದಾವೆಗೆ ಸಂಬಂಧಿಸಿದ ಸಿವಿಲ್ ಪ್ರಕರಣಗಳು ಸೇರಿದಂತೆ ಒಟ್ಟು 2815 ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಲು ಆಯ್ದುಕೊಳ್ಳಲಾಗಿತ್ತು.

ಇದರಲ್ಲಿ ಚೆಕ್ ಬೌನ್ಸ್ ಪ್ರಕರಣಗಳು ಒಟ್ಟು 485 ಪ್ರಕರಣಗಳಲ್ಲಿ 63 ಪ್ರಕರಣಗಳು ಇತ್ಯರ್ಥಗೊಂಡವು ಮತ್ತು ಸಿವಿಲ್ ದಾವೆ ಪ್ರಕರಣಗಳು 477ರಲ್ಲಿ 57 ಪ್ರಕರಣ ಮತ್ತು ಇತರೆ ಪ್ರಕರಣಗಳು ಇತ್ಯರ್ಥಗೊಂಡಿರುತ್ತವೆ, ಪೂರ್ವ ದಾವೆ ಬ್ಯಾಂಕಿಂಗ್ ಪ್ರಕರಣಗಳಲ್ಲಿ ಒಟ್ಟು 1764 ಇತ್ಯರ್ಥಗೊಂಡು ಒಟ್ಟಾರೆಯಾಗಿ ಅಂದಾಜು ಹಣದ ಮೊತ್ತ ರೂ.11,40,21,929 ರಾಜೀ ಸಂಧಾನದ ಮೂಲಕ ಇತ್ಯರ್ಥಗೊಂಡಿರುತ್ತದೆ.

ಮೆಘಾ ಲೋಕ ಅದಾಲತ್‌ನಲ್ಲಿ 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಎಸ್.ನಟರಾಜ್, ಹಿರಿಯ ಸಿವಿಲ್ ನ್ಯಾಯಾಧೀಶರಾದ ಆರ್.ಮಂಜುನಾಥ್, ಪ್ರಧಾನ ಸಿವಿಲ್ ನ್ಯಾಯಾಧೀಶ ಪ್ರದೀಪ ಪೋತದಾರ ಅವರು ಹಾಗೂ ವಕೀಲ ಸಂಧಾನಕಾರರಾಗಿ ಎಂ.ಎಂ.ನಂಜಪ್ಪ, ಕೆ.ಎನ್.ವಿಶ್ವನಾಥ್ ಮತ್ತು ಸಿ.ಕೆ.ಪೂವಣ್ಣ ಅವರುಗಳು ಭಾಗವಹಿಸಿದ್ದರು.

ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ವಿದ್ಯಾರ್ಥಿಗಳಿಗೆ ಜಾಗೃತಿ

ನಾಪೋಕ್ಲು: ಪಟ್ಟಣದ ಕರ್ನಾಟಕ ಪಬ್ಲಿಕ್ ಶಾಲೆಯ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ನಾಪೋಕ್ಲು ಪೊಲೀಸ್ ಠಾಣೆಯಿಂದ ಮಾದಕ ವಸ್ತುಗಳ ಸೇವನೆ, ಸಮಾಜಕ್ಕೆ ಆಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಮಕ್ಕಳಿಗೆ ಆಗುತ್ತಿರುವ ಲೈಂಗಿಕ ದೌರ್ಜನ್ಯ, ಬಾಲ್ಯ ವಿವಾಹ, ವಾಹನ ಚಾಲನಾ ನಿಯಮ ಮತ್ತು ರಸ್ತೆ ಸುರಕ್ಷತೆ, ಮಾದಕ ವಸ್ತುಗಳ ಸೇವನೆಯ ದುಷ್ಪರಿಣಾಮಗಳು, ಮೊಬೈಲ್ ಬಳಕೆಯಿಂದ ಆಗುವ ಡಿಜಿಟಲ್ ಸಮಸ್ಯೆಗಳ ಬಗ್ಗೆ ಠಾಣಾಧಿಕಾರಿ ಪಿ.ಜಿ.ರಾಘವೇಂದ್ರ ತಿಳಿಸಿಕೊಟ್ಟರು. ಉಪ ಪ್ರಾಂಶುಪಾಲ ಶಿವಣ್ಣ, ಶಾಲಾ ಶಿಕ್ಷಕರು, ಪೊಲೀಸ್ ಸಿಬ್ಬಂದಿ ವಿದ್ಯಾರ್ಥಿಗಳು, ಉಪಸ್ಥಿತರಿದ್ದರು.



ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ಪೊಲೀಸರು ಜಾಗೃತಿ ಮೂಡಿಸಿದರು.

ಶಾಲೆಯಲ್ಲಿ ಕೆಲಸ ಕೊಡಿಸುವುದಾಗಿ ನೂರಾರು ಮಂದಿಗೆ ಲಕ್ಷಾಂತರ ರೂ. ವಂಚನೆ

ಡಿಡಿಪಿಐಯವರ ಆದೇಶ ನಂಬಿ ಮೋಸ ಹೋದ ಸಂತ್ರಸ್ತರು



ಪೊಲೀಸ್ ಠಾಣೆಯಲ್ಲಿ ಜಮಾಯಿಸಿರುವ ವಂಚನೆಗೊಳಗಾದ ಮಹಿಳೆಯರು.

ಎನ್. ನಾಗೇಂದ್ರ ಸ್ವಾಮಿ

ಕೊಳ್ಳೇಗಾಲ,ಜು.12– ಅಬ್ದುಲ್ ಕಲಾಂ ಸಂಸ್ಥೆಯಲ್ಲಿ ಉದ್ಯೋಗ ಕೊಡಿಸುವುದಾಗಿ ಹೇಳಿ ನೂರಾರು ಮಂದಿಯಿಂದ ಕೋಟ್ಯಾಂತರ ಹಣ ವಸೂಲಿ ಮಾಡಿ ವಂಚಿಸಿರುವ ಪ್ರಕರಣವೊಂದು ಬೆಳಕಿಗೆ ಬಂದಿದೆ.

ವಂಚನೆಗೆ ಒಳಗಾದ ಮಹಿಳೆಯರು, ಪುರುಷರು ಈಗ ತಮಗೆ ನ್ಯಾಯ ಒದಗಿಸಿಕೊಡುವಂತೆ ಪೋಲೀಸರಲ್ಲಿ ದುಂಬಾಲು ಬಿದ್ದಿದ್ದಾರೆ.

ಸಂಸ್ಥೆಯಲ್ಲಿ ಕೆಲಸ ಸಿಗುತ್ತದೆ ಎಂಬ ಆಸೆಯಿಂದ ವಂಚಕರು ಕೇಳಿದಷ್ಟು ಹಣ ನೀಡಿ ಮೋಸ ಹೋಗಿರುವವರಲ್ಲಿ ಕೇವಲ ಕೊಳ್ಳೇಗಾಲದವರಷ್ಟೇ ಅಲ್ಲ ಜಿಲ್ಲೆಯ ಹನೂರು, ಮೈಸೂರು, ರಾಮನಗರ ಚನ್ನಪಟ್ಟಣ, ನಂಜನಗೂಡುಗಳಿಂದಲೂ ಮೋಸಕ್ಕೆ ಒಳಗಾಗಿದ್ದಾರೆ.

ಅಗರದ ಕೃಷ್ಣ, ಬಸ್ತಿಪುರದ ಶ್ರೀಕಂಠು, ಸುಂದರ್ 2024ರ ಆ.27ರಂದು ಡಿಡಿಪಿಐ ಕಚೇರಿಗೆ ಹೋಗಿ ತಾವು ಅಬ್ದುಲ್ ಕಲಾಂ ಹೆಸರಿನಲ್ಲಿ ಸ್ವಯಂ ಸೇವಾ ಸಂಸ್ಥೆಯನ್ನು ಕಟ್ಟಿದ್ದು, ಸರ್ಕಾರಿ ಶಾಲೆಗಳಿಗೆ ಗಣಕ ಯಂತ್ರ ನೀಡಿ ನಾವೇ ಶಿಕ್ಷಣ ಕೊಡಿಸುತ್ತೇವೆ ಅದಕ್ಕೆ ಅನುಮತಿ ನೀಡುವಂತೆ ಕೇಳಿ ಅವರಿಂದ ಆದೇಶ ಪಡೆದುಕೊಂಡಿದ್ದಾರೆ. ಸ್ವಲ್ಪ ದಿನಗಳ ನಂತರ ಇದು ನಕಲಿ ಸಂಸ್ಥೆಯೆಂದು ತಿಳಿದು ತಮ್ಮ ಆದೇಶ ರದ್ದುಪಡಿಸಲು ನಿರ್ಧರಿಸಿರುವ ಸುದ್ದಿ ತಿಳಿದು ಈ ಮೂವರು ವಂಚಕರು ಡಿಡಿಪಿಐಯವರಿಗೆ ಲಂಚ ನೀಡಿ ಸುಮ್ಮನಾಗಿಸಿದ್ದರೆನ್ನಲಾಗಿದೆ.

ಮಹೇಂದ್ರ, ಮಹೇಶ್ ಎಂಬವರು ಮೈಸೂರು, ನಂಜನಗೂಡು, ರಾಮನಗರ, ಚನ್ನಪಟ್ಟಣಗಳಲ್ಲಿ ಹಣ ವಸೂಲಿ ಮಾಡಿದ್ದರೆ, ಅಗರದ ಕೃಷ್ಣ, ಬಸ್ತಿಪುರದ ಶ್ರೀಕಂಠು, ಸುಂದರ್ ಚಾಮರಾಜನಗರ ಜಿಲ್ಲೆಯಲ್ಲಿ ಹಣ ವಸೂಲಿ ಮಾಡುತ್ತಿದ್ದರೆನ್ನಲಾಗಿದೆ.

> ನನ್ನಿಂದ ಕಲಾಂ ಸಂಸ್ಥೆಯವರು ಕೆಲಸ ಕೊಡಿಸುತ್ತೇನೆ ಎಂದು ಡಿಡಿಪಿಐ ಆದೇಶ ತೋರಿಸಿ ನನಗೆ ಮೋಸ ಮಾಡಿದ್ದಾರೆ. ನನ್ನಿಂದ 1 ಲಕ್ಷದ 70 ಸಾವಿರ ರೂ.ಗಳನ್ನು ತೆಗೆದುಕೊಂಡಿದ್ದಾರೆ ನ್ಯಾಯಕ್ಕಾಗಿ ನಾನು ಪೊಲೀಸ್ ಠಾಣೆಗೆ ಬಂದಿದ್ದೇನೆ, ನಮಗೆ ಕೆಲಸ ಹಾಗೂ ಸಂಬಳ ಎರಡು ಬೇಕು,
>
> – ಅಂಜಲಿ. ಕೊಳ್ಳೇಗಾಲ,

> ಈ ದಿನವೂ ಸಹಾ ನನಗೆ ಸಂಬಳ ನೀಡುತ್ತೇನೆ ಎಂದು ಕೃಷ್ಣ ಎಂಬಾತ ನನ್ನಿಂದ ಹಾಜರಾತಿ ಪುಸ್ತಕದ ದಾಖಲೆಯನ್ನು ಮೊಬೈಲ್‌ನಲ್ಲಿ ಹಾಕಿಸಿಕೊಂಡರು. 1.50 ಲಕ್ಷ ರೂ. ವಾಪಸ್ ಕೊಡುವಂತೆ ಕೇಳಿದರೆ ಈಗ ನಮ್ಮ ಮೇಲೆ ಪ್ರಹಾರ ಮಾಡುತ್ತಿದ್ದಾರೆ, ಭಯಪಡಿಸುತ್ತಿದ್ದಾರೆ. ಸಂಬಳ ಕೇಳಿದರೆ ಧಮಕಿ ಹಾಕುತ್ತಾರೆ. ಮಾಂಗಲ್ಯ ಸರ, ಓಲೆ ಇಟ್ಟು ನಾವು ಹಣ ನೀಡಿ ಮೋಸ ಹೋಗಿದ್ದೇವೆ
>
> – ದೀಪಿಕಾ. ಮೈಸೂರು

> ನಮ್ಮ ಸಂಸ್ಥೆಗೆ ಚಾ.ನಗರ ಡಿಡಿಪಿಐ ಆದೇಶ ನೀಡಿದ್ದಾರೆ. ಹಾಗಾಗಿ ನಿಮಗೆ ಸರ್ಕಾರಿ ಶಾಲೆಗಳಲ್ಲಿ ಕೆಲಸ ಕೊಡಿಸುತ್ತೇವೆ, ಶಾಲೆಗಳಲ್ಲಿ ಗಣಕಯಂತ್ರ, ಯೋಗ ತರಬೇತಿಗೆ ನೇಮಿಸಿಕೊಳ್ಳುತ್ತೇವೆ ಎಂದು ಆದೇಶ ತೋರಿಸಿ ನಂಬಿಸಿ ಒಂದೂವರೆ ಲಕ್ಷ ಹಣ ಪಡೆದು ಮೋಸ ಮಾಡಿದ್ದಾರೆ. ಹಾಗಾಗಿ ನಮಗೆ ಡಿಡಿಪಿಐ ಮಧ್ಯೆ ಪ್ರವೇಶಿಸಿ ಹಣ, ಕೆಲಸ ಎರಡನ್ನೂ ಕೊಡಿಸಬೇಕು,
>
> – ಭಾನುಮತಿ. ರಾಮಾಪುರ. ನವೀನ್, ನಂಜನಗೂಡು

ಬೆಳಗ್ಗೆ 11 ಗಂಟೆಯಿಂದಲೇ ಅಬ್ದುಲ್ ಕಲಾಂ ಹೆಸರಿನ ಸಂಸ್ಥೆಗೆ ಡಿಡಿಪಿಐ ಅವರು ನೀಡಿದ ಆದೇಶ ನಂಬಿಕೊಂಡು ಸರ್ಕಾರಿ ಕೆಲಸ ಸಿಗುತ್ತೆ ಎಂದು ಲಕ್ಷಾಂತರ ಹಣ ನೀಡಿ ಮೋಸ ಹೋದವರು ಜಮಾಯಿಸಿದರು. ಮಧ್ಯಾಹ್ನದ ಹೊತ್ತಿಗೆ ಸಂತ್ರಸ್ಥರ ಸಂಖ್ಯೆ ಏರುತ್ತಲೇ ಹೋಯಿತು. ಹಣ ನೀಡಿ ಮೋಸ ಹೋದವರು ನ್ಯಾಯಕ್ಕಾಗಿ ಆಗ್ರಹಿಸಿ ಹೋರಾಟಗಾರ ಅಣಗಳ್ಳಿ ಬಸವರಾಜು ನೇತೃತ್ವದಲ್ಲಿ ಪೊಲೀಸ್ ಠಾಣೆಗೆ ಮುಂದೆ ಪ್ರತಿಭಟನೆ ನಡೆಸಿದರು.

ಹಣ ವಸೂಲಿ ಮಾಡುತ್ತಿದ್ದರೆನ್ನಲಾದ ಅಗರದ ಕೃಷ್ಣ, ಬಸ್ತಿಪುರದ ಶ್ರೀಕಂಠು, ಸುಂದರ್‌ರವರನ್ನು ಪೊಲೀಸರು ಠಾಣೆಗೆ ಕರೆಯಿಸಿ, ಕಳೆದ ವಾರ ಪೊಲೀಸ್ ಠಾಣೆಯಲ್ಲಿ ಒಪ್ಪಿಕೊಂಡಂತೆ ಹಣ ನೀಡುವಂತೆ ಆದೇಶಿಸಿದರು. ದೆಹಲಿಯಲ್ಲಿರುವ ಕೊಪ್ಪಳದ ಸತೀಶ್ ಪಟಗಾರ್ ಪ್ರತಿಯೊಬ್ಬರಿಗೂ 1ಲಕ್ಷ ನೀಡುತ್ತಾರೆ, ಉಳಿದ ಹಣವನ್ನು ನಾವು ನೀಡುತ್ತೇವೆ ಎಂದು ನೀವುಗಳೆ ಒಪ್ಪಿಕೊಂಡಿದ್ದರಿಂದ ಈಗಲೇ ಹಣ ನೀಡಿ ಎಂದು ಹಾಜರಿದ್ದ ನೂರಾರು ಸಂಖ್ಯೆಯ ಮಹಿಳೆಯರು, ಪುರುಷರು ಆಗ್ರಹಿಸಿ ಸ್ಥಳಕ್ಕೆ ಸತೀಶ್‌ರನ್ನು ಕರೆಸುವಂತೆ ಪಟ್ಟು ಹಿಡಿದರು.

ಸಹಾಯಕ ಸಬ್ ಇನ್ಸ್‌ಪೆಕ್ಟರ್ ಮಹದೇವಸ್ವಾಮಿ ಮಾತನಾಡಿ, ನೀವು ಒಪ್ಪಿಕೊಂಡಂತೆ ಹಣ ಪಾವತಿಸಿ ಇಲ್ಲದಿದ್ದರೆ ಡಿವೈಎಸ್ಪಿ ಗಮನಕ್ಕೆ ತಂದು ಮುಂದಿನ ಕ್ರಮಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು

4 ಮಂದಿಗೆ ಹಣ ಸಂದಾಯ : ನೂರಾರು ಸಂಖ್ಯೆಯಲ್ಲಿ ನೊಂದ ಸಂತ್ರಸ್ಥರ ಜಮಾವಣೆ ಹಿನ್ನೆಲೆ ಇಂದು ನಾಲ್ಕು ಮಂದಿಗಾದರೂ ಹಣ ಪಾವತಿಸಲೇಬೇಕು ಎಂದು ಪಟ್ಟು ಹಿಡಿದ ಹಿನ್ನೆಲೆ ಅಂಜಲಿ, ದೀಪಾ, ಐಶ್ವರ್ಯ ಸೇರಿದಂತೆ ನಾಲ್ಕು ಮಂದಿಗೆ ಎಎಸ್ಐ ಮಹದೇವಸ್ವಾಮಿ ಅವರ ಸಮ್ಮುಖದಲ್ಲಿ ಒಂದು ಲಕ್ಷದ ನಲವತ್ತು ಸಾವಿರ ರೂ.ಗಳನ್ನು ಕೊಡಿಸಿ ನಾಲ್ಕು ದಿನದಲ್ಲಿ ದೆಹಲಿಯಲ್ಲಿರುವ ಸತೀಶ್ ಎಂಬುವರನ್ನು ಕರೆತಂದು ಅವರಿಂದ ಮೋಸ ಹೋದವರಿಗೆಲ್ಲಾ ತಲಾ ಒಂದೊಂದು ಲಕ್ಷ ಕೊಡಿಸುವ ಭರವಸೆ ನೀಡಿದರು. ಆದರೆ ಈವರೆಗೂ ನ್ಯಾಯ ಲಭಿಸಿಲ್ಲ ಮಂಗಳವಾರದವರೆಗೂ ಸಮಯ ಕೊಡುತ್ತೇವೆ ಅಲ್ಲಿಯವರೆಗೆ ನ್ಯಾಯ ಸಿಗದಿದ್ದಲ್ಲಿ ಡಿವೈಎಸ್ಪಿ ಕಚೇರಿಗೆ ಇಲ್ಲವೆ ನ್ಯಾಯಾಧೀಶರ ಬಳಿಗೆ ಹೋಗುವುದಾಗಿ ಎಂದು ರೈತ ನಾಯಕ ಅಣಗಳ್ಳಿ ಬಸವರಾಜು ಎಚ್ಚರಿಕೆ ನೀಡಿದರು.

ಚಿರತೆ ಸಾವು ಪ್ರಕರಣ; ಓರ್ವನ ವಿಚಾರಣೆ

ಚಾಮರಾಜನಗರ,ಜು.12–ತಾಲೂಕಿನ ಕೊತ್ತಲವಾಡಿಯ ಕರಿಕಲ್ಲು ಕ್ವಾರಿಯಲ್ಲಿ ಚಿರತೆಯ ಅಸಹಜ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಓರ್ವ ವ್ಯಕ್ತಿಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ ಎಂದು ತಿಳಿದು ಬಂದಿದೆ.

ಚಿರತೆಯ ಕಳೇಬರ ಪತ್ತೆಯಾದ ಸಮೀಪದಲ್ಲೇ ನಾಯಿ ಹಾಗೂ ಕುರುವಿನ ಕಳೇಬರವೂ ಪತ್ತೆಯಾಗಿದ್ದರಿಂದ ವಿಷಪ್ರಾಶನದಿಂದ ಚಿರತೆ ಮೃತಪಟ್ಟಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ. ಹೀಗಾಗಿ, ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಅರಣ್ಯ ಇಲಾಖೆ ಚಾಮರಾಜನಗರ ಸಿಸಿಎಫ್ ಹೀರಾಲಾಲ್ ನೇತೃತ್ವದಲ್ಲಿ ತನಿಖೆ ನಡೆಸಲಾಗುತ್ತಿದೆ.

ಘಟನೆಗೆ ಸಂಬಂಧಿಸಿದಂತೆ ಅಧಿಕಾರಿಗಳು ಜಾನುವಾರ ಸಾಕಣೆದಾರನೊಬ್ಬನನ್ನು ವಶಕ್ಕೆ ಪಡೆದು ತೀವ್ರ ವಿಚಾರಣೆಗೆ ಒಳಪಡಿಸಿದ್ದಾರೆ ಎಂದು ಹೇಳಲಾಗುತ್ತಿದೆ.

ಇತ್ತೀಚೆಗಷ್ಟೇ ಮಲೆ ಮಹದೇಶ್ವರ ವನ್ಯಜೀವಿ ವಿಭಾಗದಲ್ಲಿ ವಿಷಪ್ರಾಶನದಿಂದ ಐದು ಹುಲಿಗಳು ಮೃತಪಟ್ಟಿದ್ದವು. ಈ ಘಟನೆ ಮಾಸುವ ಮುನ್ನವೇ ಚಿರತೆಯ ಅಸಹಜ ಸಾವು ಸಂಭವಿಸಿರುವುದಕ್ಕೆ ಪ್ರಾಣಿ ಪ್ರಿಯರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹೊನ್ನೂರು ಪಂಚಾಯಿತಿ ನರೇಗಾದಲ್ಲಿ ಉತ್ತಮ ಪ್ರಗತಿ

ಯಳಂದೂರು:ಜು12(ವಿ.ನಾಗರಾಜು)– ತಾಲೂಕಿನ ಹೊನ್ನೂರು ಗ್ರಾಮ ಪಂಚಾಯಿತಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಉತ್ತಮ ಪ್ರಗತಿಯನ್ನು ಸಾಧಿಸಿದೆ ಎಂದು ಪಿಡಿಒ ನಿರಂಜನ್ ಕುಮಾರ್ ಹೇಳಿದ್ದಾರೆ

ಹೊನ್ನೂರು ಗ್ರಾಮ ಪಂಚಾಯಿತಿಯ ಆವರಣದಲ್ಲಿ ನಡೆದ ನರೇಗಾ ಸಾಮಾಜಿಕ ಪರಿಶೋಧನಾ ಹಾಗೂ 15ನೇ ಹಣಕಾಸು ಯೋಜನೆಯ ವಿಶೇಷ ಗ್ರಾಮಸಭೆಯಲ್ಲಿ ಮಾತನಾಡಿದ ಅವರು, ಈ ಸಾಲಿನಲ್ಲಿ ಒಟ್ಟು 206 ಕಾಮಗಾರಿಗಳು ನಡೆದಿವೆ. ಇದರಲ್ಲಿ ತೋಟಗಾರಿಕಾ ಇಲಾಖೆಯ 3, ಅರಣ್ಯ ಇಲಾಖೆಯ 2, ಪಂಚಾಯತ್‌ರಾಜ್ ಇಲಾಖೆಯ 37 ಹಾಗೂ ಗ್ರಾಮ ಪಂಚಾಯಿತಿಯ 164 ಕಾಮಗಾರಿಗಳು ಸೇರಿವೆ ಇದರಲ್ಲಿ ಸಾವಿರಾರು ಕೂಲಿ ಕಾರ್ಮಿಕರು ಕೆಲಸವನ್ನು ಮಾಡಿದ್ದಾರೆ. ಕೂಲಿ ಮೊತ್ತವಾಗಿ 1.60 ಕೋಟಿ ರೂ. ಸಾಮಾಗ್ರಿ ಮೊತ್ತ 1.28 ಕೋಟಿ ರೂ. ಸೇರಿದಂತೆ ಒಟ್ಟು 2.89 ಕೋಟಿ ರೂ. ಹಣವನ್ನು ಪಾವತಿಸಲಾಗಿದ್ದು ಪಂಚಾಯಿತಿ ಉತ್ತಮ ಪ್ರಗತಿಯನ್ನು ಸಾಧಿಸಿದೆ ಎಂದರು.



ಹೊನ್ನೂರು ಗ್ರಾಪಂ ಆವರಣದಲ್ಲಿ ಶುಕ್ರವಾರ ನಡೆದ ಗ್ರಾಮಸಭೆಯಲ್ಲಿ ಪಿಡಿಒ ನಿರಂಜನ್ ಕುಮಾರ್ ಮಾತನಾಡಿದರು. ಅಧ್ಯಕ್ಷ ಎಂ. ಗುರುಪ್ರಸಾದ್ ಉಪಾಧ್ಯಕ್ಷೆ ನೇತ್ರಾವತಿ ಸೇರಿದಂತೆ ಅನೇಕರು ಇದ್ದರು.

ರೈತ ಸಂಘದ ಹೊನ್ನೂರು ಪ್ರಕಾಶ್ ಮಾತನಾಡಿ, ನಮ್ಮ ಪಂಚಾಯಿತಿಯಲ್ಲಿ ಕುಡಿಯುವ ನೀರಿಗೆ ತೆರಿಗೆ ಕಟ್ಟುವುದಿಲ್ಲ. ಈ ಬಗ್ಗೆ ನೀವು ನಿಮ್ಮ ಮೇಲ್ಮಟ್ಟದ ಅಧಿಕಾರಿಗಳಿಗೆ ಪತ್ರವನ್ನು ಬರೆಯಿರಿ, ಅಲ್ಲದೆ ಇಲ್ಲಿನ ಕುಡಿಯುವ ನೀರು ಕಲುಷಿತವಾಗಿದ್ದು ಶುದ್ಧ ನೀರನ್ನು ಪೂರೈಸಬೇಕು. ಪಂಚಾಯಿತಿ ನರೇಗಾ ಬಗ್ಗೆ ಗ್ರಾಮಸ್ಥರಲ್ಲಿ ಇನ್ನಷ್ಟು ಅರಿವು ಮೂಡಿಸಿ, ಇ–ಸ್ವತ್ತು ಪಡೆದುಕೊಳ್ಳಲು ಇರುವ ತೆರಿಗೆಯನ್ನು ಶೇ.10ಕ್ಕೆ ಇಳಿಸಬೇಕು, ಕಾಲುವೆಗಳನ್ನು ದುರಸ್ತಿ ಮಾಡಿಸಬೇಕು, ಎಲ್ಲಾ ಇಲಾಖೆಯ ಅಧಿಕಾರಿಗಳು ಗ್ರಾಮಸಭೆಯಲ್ಲಿ ಹಾಜರಿರಬೇಕು, ಇಲಾಖೆಯ ಮಾಹಿತಿಗಳನ್ನು ನೀಡಬೇಕು ಎಂದು ಮನವಿ ಪತ್ರವನ್ನು ಸಲ್ಲಿಸಿದರು.


ಗ್ರಾಪಂ ಅಧ್ಯಕ್ಷ ಎಂ.ಗುರುಪ್ರಸಾದ್, ಉಪಾಧ್ಯಕ್ಷೆ ನೇತ್ರಾವತಿ ಸದಸ್ಯರಾದ ಆರ್.ಪುಟ್ಟಬಸವಯ್ಯ, ಇಂದಿರಾ, ಎಚ್.ಕೆ.ಶಿವಪ್ರಕಾಶ್, ಎ.ನಾಗರತ್ನಮ್ಮ, ಜಿ.ಅನಿತ ನಿರಂಜನ್, ಜಯಮ್ಮ ಭಾಗ್ಯಮ್ಮ ಟಿ.ಎನ್. ರಾಧಾ, ಎಚ್.ಜಿ.ನಾಗರಾಜು, ರಾಧ, ಎಚ್.ಆರ್. ಕುಮಾರ್, ಕೆ.ಚಿನ್ನಸ್ವಾಮಿ, ಎನ್.ಶಂಕರ್ ರೂಪೇಶ್ ಗ್ರಾಪಂ ಸಿಬ್ಬಂಧಿ ಮಹದೇವಸ್ವಾಮಿ ಮುಖಂಡ ಲಿಂಗರಾಜು ಸೇರಿದಂತೆ ಅನೇಕರು ಇದ್ದರು.

ಹರವೆ ಆಂಗ್ಲ ಮಾಧ್ಯಮ ಶಾಲೆಯಲ್ಲಿ ತಂಬಾಕು ವಿರೋಧಿ ದಿನಾಚರಣೆ

ಚಾಮರಾಜನಗರ: ತಾಲೂಕಿನ ಹರವೆ ಗ್ರಾಮದ ಚನ್ನಬಸವೇಶ್ವರ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹರವೆ ವಲಯ ವತಿಯಿಂದ ತಂಬಾಕು ವಿರೋಧಿ ದಿನಾಚರಣೆ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮ ಉದ್ಘಾಟಿಸಿದ ಮದ್ಯಪಾನ ಸಂಯಮ ಜನಜಾಗೃತಿ ವೇದಿಕೆ ಮಾಜಿ ಜಿಲ್ಲಾಧ್ಯಕ್ಷ ರಾಜಶೇಖರರಾಧ್ಯ ಮಾತನಾಡಿ, ತಂಬಾಕು ಸೇವನೆಯಿಂದ ಕ್ಯಾನ್ಸರ್, ಲಿವರ್ ಹಾಗೂ ಶ್ವಾಸಕೋಶದ ಕಾಯಿಲೆಗಳಿಗೆ ತುತ್ತಾಗುವ ಸಂಭವವಿದೆ. ತಂಬಾಕು ಸೇವನೆಯಿಂದ ಎದುರಾಗುವ ದುಷ್ಪರಿಣಾಮಗಳ ಕುರಿತು ಶಾಲಾಮಕ್ಕಳು ಸಾರ್ವಜನಿಕರಿಗೆ ಅರಿವು ಮೂಡಿಸಬೇಕು ಎಂದರು.

ಹೃದಯಾಘಾತದಿಂದ ಖಾಸಗಿ ಬಸ್ ಚಾಲಕ ಸಾವು

ಚಾಮರಾಜನಗರ,ಜು.12–ಹೃದಯಾಘಾತದಿಂದ ಖಾಸಗಿ ಬಸ್ ಚಾಲಕರೊಬ್ಬರು ಮೃತಪಟ್ಟಿರುವ ಘಟನೆ ನಗರದಲ್ಲಿ ನಡೆದಿದ್ದು, ತಿಂಗಳ ಅಂತರದಲ್ಲಿ ಇಬ್ಬರು ಚಾಲಕರು ಹೃದಯಾಘಾತಕ್ಕೆ ಸಾವನ್ನಪ್ಪಿದ್ದಾರೆ.



ತಾಲೂಕಿನ ಸಂತೇಮರಹಳ್ಳಿಯ ಗುರುಸಿದ್ದು(55) ಮೃತಪಟ್ಟ ಚಾಲಕ. ಈತ ಯಳಂದೂರಿನಿಂದ ಗುಂಡ್ಲುಪೇಟೆಗೆ ತೆರಳುವ ಆರ್‌ಪಿಕೆ ಖಾಸಗಿ ಬಸ್ ಚಾಲಕರಾಗಿದ್ದರು. ಶನಿವಾರ ಮಧ್ಯಾಹ್ನ ಯಳಂದೂರಿನಿಂದ ಬಸ್ ಚಾಲನೆ ಮಾಡಿಕೊಂಡು ಬರುತ್ತಿದ್ದಾಗ ಚಾಮರಾಜನಗರದ ಸಮೀಪ ಎದೆನೋವು ಕಾಣಿಸಿಕೊಂಡಿದೆ. ಕೂಡಲೇ ಬಸ್‌ನ ಸಿಬ್ಬಂದಿ ಆತನನ್ನು ಸಿಮ್ಸ್ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಆದರೆ ಚಿಕಿತ್ಸೆ ಫಲಿಸದೇ ಸಾವನ್ನಪ್ಪಿದ್ದಾರೆ.

ತಿಂಗಳಲ್ಲಿ ಇಬ್ಬರು ಚಾಲಕರು ಸಾವು: ಜಿಲ್ಲೆಯಲ್ಲಿ ಖಾಸಗಿ ಬಸ್ ಚಾಲಕ ಹೃದಯಾಘಾತದಿಂದ ಮೃತಪಟ್ಟ ಎರಡನೇ ಪ್ರಕರಣ ಇದಾಗಿದೆ. ತಿಂಗಳ ಹಿಂದೆ ಹನೂರು ತಾಲೂಕಿನ ಮಿಣ್ಯಂ ಗ್ರಾಮದ ಖಾಸಗಿ ಬಸ್ ಚಾಲಕ ರಮೇಶ್(47) ಹನೂರು ಪಟ್ಟಣದಿಂದ ಕೊಳ್ಳೇಗಾಲಕ್ಕೆ ಬಸ್ ಚಾಲನೆ ಮಾಡಿಕೊಂಡು ತೆರಳುತ್ತಿದ್ದಾಗ ಮಧುವನಹಳ್ಳಿ ಗ್ರಾಮದ ಬಳಿ ಎದೆನೋವು ಕಾಣಿಸಿಕೊಂಡು ಮೃತಪಟ್ಟಿದ್ದರು. ಇಂದು ಮತ್ತೊಬ್ಬ ಚಾಲಕ ಸಾವನ್ನಪ್ಪಿದ್ದಾರೆ.

ನಾಗರಾಜು ನಿಧನ



ಚಾಮರಾಜನಗರ,ಜು.12–ಬಡವರ ಶವ ಸಂಸ್ಕಾರಕ್ಕೆ ನೆರವಾಗುತ್ತಿದ್ದ ಆಟೋ ಚಾಲಕ ನಾಗರಾಜು(79) ಅನಾರೋಗ್ಯದಿಂದ ಶನಿವಾರ ಬೆಳಗ್ಗೆ ನಿಧನರಾದರು. ನಗರದ ಬಣಜಿಗರ ಬಡಾವಣೆ ನಿವಾಸಿಯಾದ ಇವರು ಕಳೆದ ಹಲವು ದಿನಗಳಿಂದ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದರು. ವೃತ್ತಿಯಲ್ಲಿ ಆಟೋ ಚಾಲಕರಾಗಿದ್ದ ಇವರು ಬಡವರು, ಅಸಹಾಯಕರು ಮೃತಪಟ್ಟರೇ ಅವರೇ ಖುದ್ದಾಗಿ ಮುಂದೆ ನಿಂತು ಶವ ಸಂಸ್ಕಾರ ನಡೆಯುವುದಕ್ಕೆ ನೆರವಾಗುತ್ತಿದ್ದರು. ಹೀಗಾಗಿಯೇ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು.

ಮೃತರ ಅಂತ್ಯಕ್ರಿಯೆ ಸಂಜೆ ನಗರದ ಹೊರವಲಯದಲ್ಲಿರುವ ದಾಸ ಬಣಜಿಗರ ರುದ್ರಭೂಮಿಯಲ್ಲಿ ನೆರವೇರಿತು. ದಾಸ ಬಣಜಿಗ ಸಮುದಾಯದ ವರ್ತಕರು ಮಧ್ಯಾಹ್ನ 3 ರಿಂದ 5 ರವರೆಗೆ ಸ್ವಯಂ ಪ್ರೇರಿತರಾಗಿ ಅಂಗಡಿಗಳನ್ನು ಬಂದ್ ಮಾಡಿ ಮೃತರಿಗೆ ಗೌರವ ಸಲ್ಲಿಸಿದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ 13-07-2025

ಸತೀಶ್‌ಗೌಡ ಬೀಡನಹಳ್ಳಿ

ಜಾತ್ಯತೀತ ಸಂತ ಕೆ.ಹೆಚ್.ರಾಮಯ್ಯ



ಮೈಸೂರು ಸಂಸ್ಥಾನ, ಸ್ವಾತಂತ್ರ್ಯ ಪೂರ್ವದಲ್ಲೇ ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸಿತ್ತು. ಇಂತಹ ಐತಿಹಾಸಿಕ ನಿರ್ಣಯ ಕೈಗೊಂಡ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸ್ಮರಣೀಯರು. ಇವರಿಗೆ ಸಾಮಾಜಿಕ ನ್ಯಾಯದ ಪರಿಕಲ್ಪನೆ ಮನದಟ್ಟು ಮಾಡಿ, ವೈಜ್ಞಾನಿಕವಾಗಿ ಮೀಸಲಾತಿ ಜಾರಿಯಾಗಲು ಕಾರಣೀಭೂತರಾದವರು ಕೆ.ಹೆಚ್.ರಾಮಯ್ಯ. ಈ ಮಹನೀಯರ ನೆನೆಯುವುದು ಸಮಾಜದ ಕರ್ತವ್ಯ. ಹಿಂದುಳಿದವರ ಅಭಿವೃದ್ಧಿ ಕಾಳಜಿ, ಸಹಕಾರ ಹಾಗೂ ಸಂಘಟನಾತ್ಮಕ ಬೆಳವಣಿಗೆ, ಶಿಕ್ಷಣ-ಉದ್ಯೋಗದಲ್ಲಿ ಸರ್ವರಿಗೂ ಅವಕಾಶ ಸೇರಿದಂತೆ ಹಲವಾರು ಮಹತ್ವದ ಚಿಂತನೆಗಳ ಅನುಷ್ಠಾನಕ್ಕೆ ಶ್ರಮಿಸಿದ ರಾಮಯ್ಯ ಅವರು ಈ ನಾಡಿನ ಸುಧಾರಕರೆಂದರೂ ಅತಿಶಯವಾಗದು.

ದೊಡ್ಡಬಳ್ಳಾಪುರ ತಾಲೂಕು ಕಲ್ಲುದೇವರಹಳ್ಳಿಯ ರೈತ ಕುಟುಂಬದಲ್ಲಿ 12-07-1879ರಲ್ಲಿ ಜನಿಸಿದ ಕೆ.ಹೆಚ್.ರಾಮಯ್ಯ ಅವರು, ವಿದ್ಯಾರ್ಥಿ ದಿಸೆಯಲ್ಲಿಯೇ ರಾಜ್ಯದ ಹಿಂದುಳಿದ ಜನಾಂಗಗಳ ಅಭಿವೃದ್ಧಿ ಆಶಯ ಹೊಂದಿದ್ದರು. ಇಂಗ್ಲೆಂಡ್‌ನಲ್ಲಿ ನ್ಯಾಯಶಾಸ್ತ್ರ ವಿಷಯದಲ್ಲಿ ಉನ್ನತ ಶಿಕ್ಷಣ ಪಡೆದಿದ್ದ ಅವರು, ಶಿಕ್ಷಣದ ಮೂಲಕವೇ ಹಿಂದುಳಿದವರ ಏಳಿಗೆ ಸಾಧ್ಯ ಎಂಬ ಅರಿವಿನೊಂದಿಗೆ ಆ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿದ್ದರು.

ಉನ್ನತ ಶಿಕ್ಷಣ ಪಡೆದಿದ್ದರೂ ಹಿಂದುಳಿದ ವರ್ಗದವರಿಗೆ ಉನ್ನತ ಹುದ್ದೆಗಳು ದೊರಕದಿದ್ದಾಗ ಚಳುವಳಿ ರೂಪಿಸುವ ಮೂಲಕ ಮೈಸೂರು ಸಂಸ್ಥಾನದ ಅಂದಿನ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಗಮನ ಸೆಳೆದಿದ್ದರು. ಕೊನೆಗೆ ಮಹಾರಾಜರು ಸಮಿತಿಯೊಂದನ್ನು ರಚಿಸಿ ಬ್ರಾಹ್ಮಣೇತರರಿಗೆ ಸರ್ಕಾರಿ ಹುದ್ದೆಗಳನ್ನು ಮೀಸಲಿಡುವ ವ್ಯವಸ್ಥೆ ಜಾರಿಗೆ ಬರುವಲ್ಲಿ ರಾಮಯ್ಯನವರು ಪ್ರಮುಖ ಪಾತ್ರ ವಹಿಸಿದ್ದರು. ರಾಮಯ್ಯ ಅವರಿಂದ ಸಾಕಷ್ಟು ಪ್ರಭಾವಿತರಾಗಿದ್ದ ಮಹಾರಾಜರು, ಅಧ್ಯಯನ ಮುಗಿಸಿ ವಿದೇಶದಿಂದ ವಾಪಸ್ಸಾದ ಅವರಿಗೆ ಉನ್ನತ ಹುದ್ದೆ ನೀಡಿದ್ದರು.

ಪಾಶ್ಚಿಮಾತ್ಯ ದೇಶಗಳು ಕೈಗಾರಿಕಾ ಕ್ರಾಂತಿ ಮತ್ತು ಪರಸ್ಪರ ಸಹಕಾರದಿಂದ ಉನ್ನತಿ ಸಾಧಿಸುತ್ತಿದ್ದ ಸಂದರ್ಭದಲ್ಲಿ ಮೈಸೂರು ರಾಜ್ಯದಲ್ಲೂ ಗಮನಾರ್ಹ ಬದಲಾವಣೆ ಆಯಿತು. ಗ್ರಾಮಾಂತರ ಪ್ರದೇಶದ ಅಭಿವೃದ್ಧಿ ದೃಷ್ಟಿಯಿಂದ ಸಹಕಾರ ಇಲಾಖೆಯನ್ನು ಸ್ಥಾಪಿಸಿ, ಕೆ.ಎಚ್.ರಾಮಯ್ಯ ಅವರನ್ನೇ ಇಲಾಖೆಯ ಮುಖ್ಯಸ್ಥರನ್ನಾಗಿ ನಿಯೋಜಿಸಲಾಯಿತು. ಆ ವೇಳೆ ಅವರು ಹಳ್ಳಿ-ಹಳ್ಳಿಗೆ ಭೇಟಿ ನೀಡಿ ವಿವಿಧ ಜನಾಂಗಗಳ ಬಗ್ಗೆ ಅಧ್ಯಯನ ನಡೆಸಿದರು. ಎಲ್ಲಾ ಜನಾಂಗಗಳ ಸಂಘಸಂಸ್ಥೆಗಳಿಗೆ ಕೆ.ಎಚ್.ರಾಮಯ್ಯ ಅವರನ್ನು ಅಧ್ಯಕ್ಷರನ್ನಾಗಿ, ಮಾರ್ಗದರ್ಶಕರನ್ನಾಗಿ ನೇಮಿಸಿಕೊಂಡಿದ್ದು ಅವರ ಜನಪ್ರಿಯತೆಗೆ ಸಾಕ್ಷಿಯಾಗಿತ್ತು.

ಈ ಸಹಕಾರ ಚಳುವಳಿ ಎಲ್ಲಾ ಸಮುದಾಯಗಳನ್ನು ಆಕರ್ಷಿಸಲಾರಂಭಿಸಿತು. ಮಹಾರಾಜರು, ಕೊನೆಗೆ ಕೆ.ಎಚ್.ರಾಮಯ್ಯನವರನ್ನು ಸಹಕಾರ ಇಲಾಖೆಯ ಮುಖ್ಯಾಧಿಕಾರಿಯನ್ನಾಗಿ ಮಾಡಿ, ಸರ್ವ ಜನಾಂಗಗಳ ಅಭಿವೃದ್ಧಿಯ ಜವಾಬ್ದಾರಿ ವಹಿಸಿದ್ದರು. ಇಂಗ್ಲೆಂಡ್ ಮಾದರಿಯ ಕೈಗಾರಿಕಾ ಕ್ರಾಂತಿ ಹಾಗೂ ಸಾಮಾಜಿಕ ಅಭಿವೃದ್ಧಿ ನಮ್ಮ ರಾಜ್ಯದಲ್ಲೂ ಆಗಬೇಕೆಂದು ಬಯಸಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ಸಹೋದರ ಕಂಠೀರವ ನರಸಿಂಹರಾಜ ಒಡೆಯರನ್ನು ಯೂರೋಪ್ ದೇಶಗಳಿಗೆ ಅಧ್ಯಯನ ಪ್ರವಾಸಕ್ಕೆ ಕಳುಹಿಸಿದರು. ಈ ವೇಳೆ ಯುವರಾಜರ ಆಪ್ತ ಕಾರ್ಯದರ್ಶಿಯಾಗಿ ಕೆ.ಹೆಚ್.ರಾಮಯ್ಯ ಅವರನ್ನೂ ಜೊತೆಯಲ್ಲಿ ಕಳುಹಿಸಿದರು. ಪ್ರವಾಸ ಮುಗಿಸಿ ಹಿಂತಿರುಗುವ ಹೊತ್ತಿಗೆ ಇಬ್ಬರೂ ಆತ್ಮೀಯ ಸ್ನೇಹಿತರಾಗಿದ್ದರು.

ಒಗ್ಗಟ್ಟಿನ ಮಹತ್ವ ತಿಳಿಸಿದ್ದರು: ರಾಜ್ಯದಲ್ಲಿ ಜನಾಂಗಗಳು ಹಾಗೂ ಒಳಪಂಗಡಗಳು ಅಂದಿನ ಪರಿಸ್ಥಿತಿಯಲ್ಲಿ ಸಣ್ಣಪುಟ್ಟ ವಿಚಾರಕ್ಕೆ ಪರಸ್ಪರ ಕಿತ್ತಾಟದಲ್ಲಿ ತೊಡಗಿದ್ದವು. ಒಬ್ಬರ ಏಳಿಗೆಯನ್ನು ಮತ್ತೊಬ್ಬರು ಸಹಿಸುತ್ತಿರಲಿಲ್ಲ ಆ ವೇಳೆ ಕೆ.ಎಚ್. ರಾಮಯ್ಯನವರು ಪ್ರತಿಯೊಂದು ಜನಾಂಗದ ಒಳಪಂಗಡದವರನ್ನು ಒಂದೆಡೆ ಸೇರಿಸಿ ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಮಾತ್ರ ಪ್ರಗತಿ ಸಾಧ್ಯ ಎಂಬುದನ್ನು ಮನವರಿಕೆ ಮಾಡಿಕೊಟ್ಟರು. ಎಲ್ಲಾ ಜನಾಂಗಗಳ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕೆಂದು ಪ್ರತಿಪಾದಿಸುವುದರ ಜೊತೆಗೆ ಅದಕ್ಕಾಗಿ ಉಚಿತ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಲು ಪ್ರೇರೇಪಿಸಿದ್ದರು. ಹೀಗೆ ಹಿಂದುಳಿದ ಜನಾಂಗಗಳ ಸಾಮಾಜಿಕ ಮತ್ತು ಶೈಕ್ಷಣಿಕ ಏಳಿಗೆಗೆ ಅವಿರತ ದುಡಿದರು.

ಒಕ್ಕಲಿಗರ ಸಂಘ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ: ಪ್ರತಿಯೊಂದು ಜನಾಂಗವೂ ಸಂಘಟಿತವಾಗಿ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಪ್ರಗತಿ ಸಾಧಿಸಬೇಕು ಎಂಬುದು ಕೆ.ಹೆಚ್.ರಾಮಯ್ಯನವರ ಆಶಯವಾಗಿತ್ತು. ಈ ನಿಟ್ಟಿನಲ್ಲಿ ರಾಜ್ಯ ಒಕ್ಕಲಿಗರ ಸಂಘದ ಪರಿಕಲ್ಪನೆಗೆ ಹಲವು ದಾರ್ಶನಿಕರ ಜೊತೆಗೂಡಿ 1906 ಏಪ್ರಿಲ್ 1ರಂದು ಬುನಾದಿ ಹಾಕಿದರು. ಸಂಘದ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿಯಾಗಿಯೂ ತಾವು ಕಾರ್ಯನಿರ್ವಹಿಸಿದರು. ಅಂದು ತಾವು ಸಮಾಜ ಕಲ್ಯಾಣ ಇಲಾಖೆ ಜವಾಬ್ದಾರಿ ಹೊಂದಿದ್ದರಿಂದ ಸಂಘದ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ರಾಜೀನಾಮೆ ನೀಡಿದರು. ಪ್ರಸ್ತುತ ಹಲವು ಹುದ್ದೆಗಳಲ್ಲಿ ಇರುವವರು ರಾಜ್ಯ ಒಕ್ಕಲಿಗರ ಸಂಘ ಪ್ರವೇಶಿಸುತ್ತಿರುವಾಗ ರಾಮಯ್ಯನವರ ಆ ತ್ಯಾಗವನ್ನು ಸ್ಮರಿಸಿಕೊಳ್ಳಬೇಕು. ಮೂರು ತಲೆಮಾರುಗಳಲ್ಲಿ ಕ್ರಾಂತಿಕಾರಿ ಬೆಳವಣಿಗೆ ಕಂಡಿರುವ ಒಕ್ಕಲಿಗ ಸಮುದಾಯ ಅದಕ್ಕೆ ಕಾರಣೀಭೂತರಾದ ರಾಮಯ್ಯ ಅವರ ವ್ಯಕ್ತಿತ್ವ, ಕೊಡುಗೆಯನ್ನು ನೆನೆಯಲೇಬೇಕು.

ಜಾತ್ಯತೀತ ಸಂತ: ಕೆ.ಹೆಚ್.ರಾಮಯ್ಯ ಅವರು ಕೇವಲ ಒಕ್ಕಲಿಗರು ಮಾತ್ರವಲ್ಲ ಎಲ್ಲಾ ಸಮುದಾಯಗಳ ಶ್ರೇಯೋಭಿವೃದ್ಧಿಗೆ ಶ್ರಮಿಸಿದ ಜಾತ್ಯಾತೀತ ಸಂತ. ಮಳವಳ್ಳಿ ಸಮೀಪ ದಲಿತರ ಶಿಕ್ಷಣಕ್ಕಾಗಿ ಪ್ರಪ್ರಥಮವಾಗಿ ಶಾಲೆಯನ್ನು ಮೈಸೂರು ಸಂಸ್ಥಾನದ ಸಮಾಜ ಕಲ್ಯಾಣ ಇಲಾಖೆ ನಿರ್ದೇಶಕರಾಗಿದ್ದಾಗ ಸ್ಥಾಪಿಸಿದರು. ಆ ಶಾಲೆಗೆ ಮೇಲ್ವರ್ಗದ ಶಿಕ್ಷಕರು ಬಾರದಿದ್ದಾಗ ತಲಕಾಡಿನ ರಂಗೇಗೌಡರನ್ನು ಶಿಕ್ಷಕರಾಗಿ ನೇಮಿಸಿದರು. ಆದಿ ದ್ರಾವಿಡ ಸಂಘ ಎಂಬ ದಲಿತರ ಸಂಘಟನೆಯನ್ನು ಹುಟ್ಟು ಹಾಕಿ, ಸಮುದಾಯದ ಸಂಘಟನೆಗೆ ಪ್ರೋತ್ಸಾಹಿಸಿದರು.

ಆದಿಚುಂಚನಗಿರಿ ಮಠದೊಂದಿಗೆ ಬಾಂಧವ್ಯ: ಒಕ್ಕಲಿಗ ಸಮಾಜ ಗುರು ಪರಂಪರೆ ಹಾಗೂ ಸಂಘಟನೆ ಇಲ್ಲದೆ ಹಿಂದುಳಿದಿದ್ದನ್ನು ಅರಿತ ರಾಮಯ್ಯನವರು ಮತ್ತೊಂದು ಮಹತ್ವದ ಕಾರ್ಯಕ್ಕೆ ಮುಂದಾದರು. ಉತ್ತರ ಭಾರತದ ನಾಥಪಂಥೀಯರು ನಿರ್ವಹಣೆ ಮಾಡುತ್ತಿದ್ದ ಆದಿಚುಂಚನಗಿರಿ ಮಠಕ್ಕೆ ಅಲ್ಲಿನ ಗುರುಗಳು ದೈವಾಧೀನರಾದ ತರುವಾಯ ಒಕ್ಕಲಿಗ ಸಮುದಾಯದ ಧರಸಗುಪ್ಪೆ ಪಟೇಲ್ ನಿಂಗೇಗೌಡರನ್ನು ಪೀಠಾಧಿಪತಿಗಳನ್ನಾಗಿ ನೇಮಿಸುವ ಮೂಲಕ ಸಮುದಾಯಕ್ಕೆ ಗುರು ಪರಂಪರೆಯನ್ನು ತಂದುಕೊಟ್ಟರು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರೊಂದಿಗೆ ಚರ್ಚಿಸಿ, ಮಠದ ಅಭಿವೃದ್ಧಿಗಿದ್ದ ತೊಡಕುಗಳನ್ನು ನಿವಾರಿಸಿದರು.

ಸಮಾಜದ ಉನ್ನತಿಗಾಗಿ ದುಡಿದ ಕೆ.ಹೆಚ್.ರಾಮಯ್ಯ ಇನ್ನಿತರರ ಸ್ಮರಿಸಿ, ಗೌರವಿಸುವುದು ಒಂದು ಸಾಮಾಜಿಕ ಕರ್ತವ್ಯ. ಅಂತಹ ಮಹನೀಯರ ಜೀವನ ಮತ್ತು ಸಾಧನೆಗಳನ್ನು ದಾಖಲಿಸಿ, ಮುಂದಿನ ಪೀಳಿಗೆಗೆ ಪರಿಚಯಿಸುವುದು ಅತ್ಯವಶ್ಯ. ಆದರೆ ಅನೇಕ ವೇಳೆ ಮಹನೀಯರನ್ನು ನಿರ್ಲಕ್ಷಿಸುವುದು, ಮರೆತು ಬಿಡುವುದು ಪರಂಪರೆಗೆ ಅಪಚಾರ. ಹೀಗೆ ಅವಜ್ಞೆಗೆ ಗುರಿಯಾದ ಅನೇಕ ಸಾಧಕರ ಜೀವನ-ಸಾಧನೆಗಳು ಕಾಲಗರ್ಭದಲ್ಲಿ ಹುದುಗಿ ಹೋಗಿವೆ. ಇದನ್ನು ಬರಹಗಾರರು ಗಂಭೀರವಾಗಿ ಪರಿಗಣಿಸಿ, ಹೊರತರಬೇಕಿದೆ.

> “ನಿಜವಾಗಿ ನಮ್ಮ ದೇಶದ ಸುಪುತ್ರನಿವನು. ಮಿತ್ರನೋರ್ವನಿರುವ ನೆಂದರೆ ಅವನಿಲ್ಲಿ ಮಲಗಿಹನು. ಮಿತ್ರನೆಂಬ ಆ ವಸ್ತುವಿನಲ್ಲಿ ನೂರೆಂಟು ದೋಷಗಳಿದ್ದರೂ ಅವುಗಳನ್ನು ಮರೆಸುವ ನೂರೆಂಟು ಗುಣಗಳೂ ಇದ್ದವು. ಹೆಚ್ಚು ಹೇಳಲೇಕೆ ಆ ವ್ಯಕ್ತಿಗೆ ನಾವೆಲ್ಲಾ ಸೇರಿ ತಲೆ ಬಾಗಿಸುವ.
>
> -ಇದು, ಆತ್ಮೀಯ ಸ್ನೇಹಿತ ಕೆ.ಹೆಚ್.ರಾಮಯ್ಯನವರು ನಿಧನರಾದಾಗ ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಶೋಕ ಸಂದೇಶ.




ಕೆ.ಹೆಚ್.ರಾಮಯ್ಯನವರ ಸ್ಮರಣೆ-ನಮನ

ಜಾತ್ಯಾತೀತ ಸಂತ ಕೆ.ಹೆಚ್.ರಾಮಯ್ಯನವರ 146ನೇ ಜಯಂತಿ ಹಿನ್ನೆಲೆಯಲ್ಲಿ ಶನಿವಾರ ಮೈಸೂರಿನ ಚಾಮುಂಡಿಬೆಟ್ಟ ತಪ್ಪಲಿನಲ್ಲಿರುವ ಅವರ ಸಮಾಧಿಗೆ ಗೌರವ ನಮನ ಸಲ್ಲಿಸಲಾಯಿತು. ನಮ್ಮೂರು ನಮ್ಮೋರು ಟ್ರಸ್ಟ್ ಅಧ್ಯಕ್ಷ ಬೀಡನಹಳ್ಳಿ ಸತೀಶ್ ಗೌಡ, ಮೈಸೂರು ತಾಲೂಕು ಒಕ್ಕಲಿಗರ ಸಂಘದ ಕೃಷ್ಣೇಗೌಡ, ಮೈಸೂರು ಹಾಗೂ ಚಾಮರಾಜನಗರ ಒಕ್ಕಲಿಗರ ಸಂಘದ ಚೇತನ್, ದಂತ ವೈದ್ಯ ಡಾ.ಲೋಕೇಶ್ ಚಿತ್ರದಲ್ಲಿದ್ದಾರೆ.

ಮಕ್ಕಳ ಚಿತ್ರಕಥೆ: ನಿನಗೆ ಏನು ಬೇಕೋ ಕೇಳಿಕೊ...!


ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಒಂದೂರಿನಲ್ಲಿ ಒಬ್ಬ ರಾಜನಿದ್ದ. ಆತ ತನ್ನ ಹುಟ್ಟುಹಬ್ಬಕೆಂದು ಮೀನಿನ ಅಡುಗೆ ಮಾಡುವಂತೆ ಅಡುಗೆಯವನಿಗೆ ಹೇಳಿದ. ಹಿಂದಿನ ರಾತ್ರಿ ದೊಡ್ಡ ಬಿರುಗಾಳಿ ಎದ್ದು ಅಂಬಿಗರು ತಮ್ಮ ದೋಣಿಗಳನ್ನು ನೀರಿಗೆ ಇಳಿಸದಿದ್ದುದರಿಂದ ಅಡುಗೆಯವನಿಗೆ ಎಲ್ಲೂ ಮೀನು ಸಿಗಲಿಲ್ಲ.




ಇದರಿಂದ ಹೆದರಿದ ಅಡುಗೆಯವನು "ಕ್ಷಮಿಸಬೇಕು ಮಹಾಸ್ವಾಮಿ ಮೀನು ಎಲ್ಲೂ ಸಿಗಲಿಲ್ಲ....!" ಎಂದು ಭಿನ್ನವಿಸಿಕೊಂಡ. ರಾಜನಿಗೆ ಸಿಟ್ಟುಬಂದು "ಎಷ್ಟೇ ಹಣ ಖರ್ಚಾದರೂ ಪರವಾಗಿಲ್ಲಾ. ಮೀನನ್ನು ತೆಗೆದುಕೊಂಡು ಬಾ....!" ಎಂದು ಆಜ್ಞಾಪಿಸಿದ.




ಅಷ್ಟರಲ್ಲಿ ಮೀನುಗಾರನೊಬ್ಬ ಬಂದು, ತನ್ನ ಕೈಯ್ಯಲ್ಲಿ ಭಾರಿ ಮೀನೊಂದನ್ನಿಡಿದು "ನಿನ್ನೆ ಬಿರುಗಾಳಿಯನ್ನೂ ಲೆಕ್ಕಿಸದೆ ಸಮುದ್ರದೊಳಗೆ ಧುಮುಕಿ ಇದನ್ನು ಹಿಡಿದು ತಂದಿದ್ದೇನೆ..! ಎಂದ ರಾಜನು ಅವನನ್ನು ಮೆಚ್ಚಿ "ನಿನಗೆ ಏನು ಬೇಕೋ ಕೇಳು..!" ಎಂದ




ಮೀನುಗಾರ ತುಸು ಯೋಚಿಸಿ "ಐವತ್ತು ಛಡಿ ಏಟುಗಳು.!" ಎಂದ. ರಾಜನಿಗೆ ಆಶ್ಚರ್ಯವಾಯಿತು. ಆದರೂ ಏನನ್ನೂ ತೋರಿಸಿಕೊಳ್ಳದೇ ಅಂಗರಕ್ಷಕನಿಗೆ "ಮೆಲ್ಲಗೆ ಐವತ್ತು ಛಡಿ ಏಟು ಕೊಡು...!" ಎಂದು ಆಜ್ಞಾಪಿಸಿದ.



25 ಛಡಿ ಏಟುಗಳು ಕೊಡುವವರೆಗೂ ಸುಮ್ಮನಿದ್ದ ಮೀನುಗಾರ ಕೊನೆಗೆ ಗಟ್ಟಿಯಾಗಿ ಕೂಗಿದ, "ನಿಲ್ಲಿಸಿ, ನನ್ನ ಕೆಲಸದಲ್ಲಿ ಪಾಲುದಾರನಿದ್ದಾನೆ. ಅವನಿಗೆ 25 ಏಟು ಕೊಡಿ.!" ಎಂದನು. ರಾಜನು "ಏಕೆ?" ಎಂದು ಕೇಳಿದ.



ಅದಕ್ಕೆ ಆತ, ಕಾವಲುಗಾರ "ಮೀನನ್ನು ಒಳಗೆ ಬಿಡಲು ನಿನ್ನ ಸಂಪಾದನೆಯಲ್ಲಿ ಅರ್ಧಪಾಲು ನನಗೆ ಕೊಡಬೇಕು ಎಂದಿದ್ದ...!" ಆತನಿಗೆ ತಕ್ಕ ಶಾಸ್ತಿ ಆಗಬೇಕು ಎಂದ. ರಾಜನು ಆತನ ಜಾಣತನ ಮೆಚ್ಚಿ ತನ್ನ ಆಸ್ಥಾನದಲ್ಲಿ ವಿಧೂಷಕನನ್ನಾಗಿ ನೇಮಿಸಿಕೊಂಡ.



ವಾರಭವಿಷ್ಯ

13.07.2025 ರಿಂದ 19.07.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಮಿಥುನ, ಕಟಕ, ಚಂದ್ರ-ಮಕರ, ಕುಂಭ, ಮೀನ, ಮೇಷ, ಕುಜ-ಸಿಂಹ, ಬುಧ-ಕಟಕ, ಗುರು-ಮಿಥುನ, ಶುಕ್ರ-ವೃಷಭ, ಶನಿ-ಮೀನ, ರಾಹು-ಕುಂಭ ಮತ್ತು ಕೇತು-ಸಿಂಹ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ತಾಳಿದವನು ಬಾಳಿಯಾನು ಎಂಬ ನಾಣ್ಣುಡಿಯನ್ನು ಸ್ವಲ್ಪ ಸಮಯ ಪಾಲಿಸಿಕೊಂಡು ಬನ್ನಿ. ಯಾರೋ ಸಾಲ ಕೊಡುತ್ತಾರೆಂದು ಕಾಯುತ್ತಾ ಕೂರಬೇಡಿ. ಎಲ್ಲಕ್ಕೂ ಮಿಗಿಲು ದೈವ ಸಹಾಯ. ಶುಕ್ರಗ್ರಹ ನಿಮ್ಮ ಸಹಾಯಕ್ಕೆ ಇದ್ದು ಮನೆಯಲ್ಲಿನ ಭಿನ್ನಾಭಿಪ್ರಾಯಗಳು ನಿವಾರಣೆ ಆಗಲಿದೆ. ಸ್ವಂತ ಬುದ್ಧಿಯಿಂದ ಕೆಲಸ ಪ್ರಾರಂಭಿಸಿ ಯಶಸ್ವಿಯಾಗುವಿರಿ. ಮಾತೃಶ್ರೀಯವರ ಆರೋಗ್ಯದ ಕಡೆ ಧ್ಯಾನ ನೀಡಿ.

ಶ್ರೀ ಚಾಮುಂಡೇಶ್ವರಿ ಪೂಜೆ, ಶುಭ ಸಂಖ್ಯೆ-4

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಹೊಸ ಆವಿಷ್ಕಾರಗಳಲ್ಲಿ ಸಫಲತೆಯನ್ನೂ ಅದರಿಂದ ಧನ ಸಂಪಾದನೆಯನ್ನು ಹೊಂದುವಿರಿ. ವ್ಯಾಪಾರ, ವ್ಯವಹಾರಗಳು ಲಾಭವನ್ನು ತಂದು ಕೊಡಲಿದೆ. ಪ್ರವಾಸೋದ್ಯಮ ನಡೆಸುವವರಿಗೆ ಉತ್ತಮ ಸಂಪಾದನೆ ಇದೆ. ವಿದ್ಯಾ ಪ್ರಸಂಗಗಳಲ್ಲಿ ಉನ್ನತ ಮಟ್ಟವನ್ನು ಸಾಧಿಸಲು ಬುಧ, ಶುಕ್ರ, ಗುರುಗಳ ಆಶೀರ್ವಾದವಿದೆ. ಅನ್ನದಾನ, ಧರ್ಮಕಾರ್ಯಗಳಿಂದ ಮನಃತೃಪ್ತಿ.

ಶ್ರೀ ದೇವೀ ಉಪಾಸನೆ, ಶುಭ ಸಂಖ್ಯೆ-8

ಮಿಥುನ (ಕ.ಕಿ.ಕು.ಘ.ಜ.ಛ.ಕೆ.ಕೊ.ಹ)

ಹೊಸ ಉದ್ಯೋಗ ಪ್ರಾರಂಭಿಸುವ ಮೊದಲು ಪೂರ್ವಭಾವಿ ಸಿದ್ಧತೆಗಳು ನಡೆಯುವುದು. ಸ್ಥಾನ-ಮಾನಗಳು ಅರಸಿ ಬರುವುದು. ಶ್ರೀಮತಿಯೊಂದಿಗೆ ವೈಮನಸ್ಸು ಉಂಟಾಗುವುದರಿಂದ ಮಾನಸಿಕ ವ್ಯಾಕುಲತೆ. ನಿಮ್ಮ ಆರೋಗ್ಯವೂ ಅಷ್ಟಕ್ಕಷ್ಟೇ. ದೇಹದ ಅವಯವದಲ್ಲಿ ಉಷ್ಣತಾಪದಿಂದ ಬಾಧೆ. ಅಪರೂಪವಾಗಿ ಒಮ್ಮೆ ಧನಲಾಭವಾಗಬಹುದು. ವಾರದ ಕಡೆಗೆ ಸಂತಸದ ತಂಗಾಳಿ ಬೀಸುವುದು.

ಶ್ರೀ ವಿಷ್ಣು ಸಹಸ್ರನಾಮ ಪಠಿಸಿ, ಶುಭ ಸಂಖ್ಯೆ-3

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಕಾಲಾಯ ತಸ್ಮೈನಮಃ ಎಂಬಂತೆ ಶಾಂತವಾಗಿರಿ. ಜಯಾಪಜಯಗಳು ಜೊತೆ ಜೊತೆಯಾಗಿಯೇ ಬರುವುದು. ಹಿತೈಷಿಗಳ ಸಹಕಾರದಿಂದ ನಿಮ್ಮ ಕಾರ್ಯಭಾರ ಇಳಿಯುವುದು. ನ್ಯಾಯ ಸಮ್ಮತವಲ್ಲದ ಕೆಲಸಗಳನ್ನು ತ್ಯಜಿಸಿ ಅನ್ಯಥಾ ಸಂಕಷ್ಟಕ್ಕೆ ಗುರಿಯಾಗುವಿರಿ. ವಯಸ್ಸಿಗೆ ಬಂದ ಮಕ್ಕಳ ಚಲನವಲನಗಳ ಮೇಲೆ ನಿಗಾ ಇಡಿ.

ಶ್ರೀ ಸಪ್ತಮಾತೃಕಾ ದರ್ಶನ. ಶುಭ ಸಂಖ್ಯೆ-1

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಒಳ್ಳೆಯ ಜನರ ಸಹವಾಸದಲ್ಲಿದ್ದರೆ, ನಿಮಗೂ ಒಳ್ಳೆಯದಾಗುವುದು. ಪ್ರತಿದಿನ ನೀವು ಮಾಡುವ ಕೆಲಸಗಳು ನಿಮ್ಮ ಗುರಿ ಈಡೇರಿಕೆಗೆ ಸಹಾಯಕವಾಗಲಿದೆ. ಶುಭ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವಿರಿ. ಶತ್ರುಗಳ ಮೇಲೆ ವಿಜಯ. ನೆಂಟರಿಷ್ಟರ ಭೇಟಿ ಮನಸ್ಸಿಗೆ ಮುದ ನೀಡುವುದು. ಗುರುಕೃಪೆಯಿಂದ ಆರ್ಥಿಕ ಬಿಕ್ಕಟ್ಟುಗಳು ನಿವಾರಣೆ ಆಗುವುದು. ನಿಮ್ಮ ಪ್ರಯತ್ನ ಅಪೇಕ್ಷಿತ ಫಲ ನೀಡುವುದು.

ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ-3

ಕನ್ಯಾ (ಟೊ.ಪ.ಪಿ.ಪು.ಘ.ಣ.ಠ.ಪೆ.ಪೊ)

ಈ ವಾರ ಶುಭ ಗ್ರಹಗಳ ಶುಭ ಫಲವನ್ನು ಎನ್‌ಕ್ಯಾಷ್ ಮಾಡಿಕೊಳ್ಳಲು ಹಿಂಜರಿಯದಿರಿ. ಸೋಲಿಗೆ ಹಲವು ಕಾರಣ, ಯಶಸ್ಸಿಗೆ ಕಠಿಣ ಪರಿಶ್ರಮವೊಂದೇ ಬೇಕಾಗಿರುವುದು. ಹಿರಿಯರ ನೈತಿಕ ಬೆಂಬಲ ಹಾಗೂ ಮಾರ್ಗದರ್ಶನಗಳು ದೊರೆತು ಸ್ಥಗಿತವಾಗಿದ್ದ ಜರೂರು ಕೆಲಸ ಪ್ರಗತಿಯ ಹಾದಿಯಲ್ಲಿ ಸಾಗುವುದು. ಸಪ್ತಮ ಶನಿ ಪಾಲುದಾರಿಕೆ ವ್ಯವಹಾರದಲ್ಲಿ ಒಮ್ಮತ ಮೂಡದೆ ನಷ್ಟ.

ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ-8

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ವಾರದ ಆರಂಭಕ್ಕೆ ಕೈಗೊಂಡ ಕೆಲಸ ಕಾರ್ಯಗಳು ಸುಲಲಿತವಾಗಿ ಮುನ್ನಡೆಯುತ್ತವೆ. ಗುರು-ಹಿರಿಯರ ಮಾತಿಗೆ ಮನ್ನಣೆ ನೀಡಿದರೆ ಹಿತ. ಯಂತ್ರ ವಾಹನ ವ್ಯಾಪಾರಗಳಲ್ಲಿ ಲಾಭವನ್ನು ಪಡೆಯುವಿರಿ. ವಿವಾಹ ಯೋಗ್ಯರು ವಧು-ವರಾನ್ವೇಷಣೆಯನ್ನು ಮುಂದುವರಿಸಬಹುದು. ಹೊಸ ಹೂಡಿಕೆಗಳನ್ನು ಮಾಡಬಹುದು. ಗುರುವಿನ ಅನುಗ್ರಹವಿದೆ. ವಾರಾಂತ್ಯಕ್ಕೆ ಮನೆ ಮಂದಿಯೊಂದಿಗೆ ಪಿಕ್‌ನಿಕ್.

ಶ್ರೀ ಲಿಂಗಾಷ್ಟಕ ಪಠಿಸಿ. ಶುಭ ಸಂಖ್ಯೆ-4

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ

ಈ ವಾರದಲ್ಲಿ 'ದುರ್ಭಿಕ್ಷದಲ್ಲಿ ಅಧಿಕ ಮಾಸ' ಎಂಬಂತೆ ನಡೆದೀತು. ಶ್ರೀಮತಿ ಸಲಹೆ ಮಾರ್ಗದರ್ಶನಗಳು ನಿಮ್ಮ ಒಳಿತಿಗಾಗಿಯೇ ಎಂದು ಸ್ವೀಕರಿಸಿ ಹಲವು ಮಾರ್ಗಗಳಿಂದ ವರಮಾನ ಹೆಚ್ಚಾದಂತೆ ಖರ್ಚುಗಳೂ ಹೆಚ್ಚುವುದು. ಅಷ್ಟಮ ಗುರುಕಾರಣ ನಿಮ್ಮ ಋಣಾತ್ಮಕ ಭಾವನೆಗಳಿಂದ ಹೊರ ಬರಲು ಪ್ರಯತ್ನಿಸಿ. ಮಿತ್ರರ ವಿರೋಧವನ್ನು ಎದುರಿಸಬೇಕಾದೀತು. ಅಸಹಾಯಕರಿಗೆ ಕೈಲಾದ ಸಹಾಯ ಮಾಡಿ.

ಶ್ರೀ ನವಗ್ರಹ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-6

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ನಿಮ್ಮ ರಾಶ್ಯಾಧಿಪತಿ ಬೃಹಸ್ಪತಿ ನಿಮಗೆ ಸಮತೋಲನವಾದ ಮನಸ್ಸು ದಯಪಾಲಿಸಿದ್ದಾರೆ. ಇಚ್ಛಿತ ಕಾರ್ಯಗಳು ಸಾಧನೆಯಾಗಬೇಕೆಂದಾದರೆ ಪ್ರಾಮಾಣಿಕ ಪ್ರಯತ್ನ, ದೈವ ಸಹಾಯ ಎರಡೂ ಬೇಕು. ಚತುರ್ಥ ಶನಿದೇವ ನಿಮ್ಮನ್ನು ಕಾಡಿಸಿದರೂ ಶ್ರೀ ಗುರುದೇವನ ಶ್ರೀರಕ್ಷೆ ನಿಮ್ಮನ್ನೂ, ನಿಮ್ಮ ಸಕಲ ಚರ್ಯೆಗಳನ್ನೂ ರಕ್ಷಿಸುತ್ತಲಿದೆ. ಸತಿ-ಸುತರ ಒಡನಾಟ ಹರುಷ ನೀಡುವುದು.

ಶ್ರೀ ಶಿವ ಪಂಚಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ-1

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಈ ವಾರ ವ್ಯಾಪಾರಿಗಳು ಹಣಕ್ಕೆ ಸಂಬಂಧಪಟ್ಟ ಎಲ್ಲಾ ನಿರ್ಧಾರಗಳನ್ನು ಬಹಳ ಜಾಗರೂಕತೆಯಿಂದ ತೆಗೆದುಕೊಳ್ಳಬೇಕು. ಲೆಕ್ಕ ಪತ್ರಗಳನ್ನು ಸರಿಯಾಗಿ ಇಟ್ಟುಕೊಳ್ಳಿ. ತೆರಿಗೆ ಅಧಿಕಾರಿಗಳಿಂದ ಕಿರುಕುಳವಾದೀತು. ನಿಮ್ಮ ಗೌರವಕ್ಕೆ ಚ್ಯುತಿಬರುವ ಕೆಲಸಗಳನ್ನು ಮಾಡಿಸಲು ರಾಹು ಪ್ರೇರಕನಾಗಿದ್ದಾನೆ. ವಾರಾಂತ್ಯಕ್ಕೆ ಮುಖ್ಯ ಕೆಲಸಗಳು ಸಮಯಕ್ಕೆ ಸರಿಯಾಗಿ ಸಂಪನ್ನಗೊಳಿಸುವಿರಿ.

ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ-5

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಈ ವಾರ ನಿಮ್ಮ ಆರ್ಥಿಕ ಪರಿಸ್ಥಿತಿ ಸಾಕಷ್ಟು ಸುಧಾರಿಸಲಿದೆ. ಕೆಲವು ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಧ್ಯತೆ ಇದೆ. ನಿಮ್ಮ ಉತ್ಸಾಹಭರಿತ ನಡವಳಿಕೆಯಿಂದ ನಿಮ್ಮ ಕುಟುಂಬದವರು ಹಾಗೂ ನಿಮ್ಮ ಸುತ್ತಮುತ್ತಲಿನವರು ಪ್ರಭಾವಿತರಾಗುತ್ತಾರೆ. ಆತ್ಮೀಯರ ಪುನರ್ಮಿಲನದಿಂದ ಮನಃಸಂತೋಷ. ವಾರಾಂತ್ಯಕ್ಕೆ ಅನ್ನದಾನದಲ್ಲಿ ಭಾಗವಹಿಸುವಿರಿ.

ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-7

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದ ಆದಿಗೆ ಮನೆಯಲ್ಲಿ ಶುಭ ಕಾರ್ಯಕ್ಕೆ ನಾಂದಿ. ನಿರೀಕ್ಷಿತ ಧನ ಕೈ ಸೇರುವುದು. ಮನಸ್ಸು ಉಲ್ಲಾಸ ಭರಿತವಾಗಿರುತ್ತದೆ. ಪ್ರಿಯ ಜನರ ಸಾಂಗತ್ಯ, ಆರೋಗ್ಯದಲ್ಲೂ ಸುಧಾರಣೆಯನ್ನು ಕಾಣುವಿರಿ. ರಾಹು-ಕೇತುಗಳ ಪ್ರಭಾವದಿಂದ ವಿವಾದಗಳ ಸುಳಿಯಲ್ಲಿ ಸಿಲುಕುವಿರಿ. ನಿಮ್ಮ ಮನೆ ಮಂದಿಯೇ ನಿಮ್ಮ ಮನಃಶಾಂತಿಗೆ ಭಂಗ ಉಂಟು ಮಾಡುವರು. ಎಲ್ಲವನ್ನೂ ಸಾತ್ವಿಕ ಭಾವನೆಯಿಂದ ಸ್ವೀಕರಿಸಿ. ವಾಹನ ಡ್ರೈವ್ ಮಾಡುವಾಗ ಆತುರ ಸಲ್ಲದು.

ಶ್ರೀ ಶಿವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-2



ಬನ್ನೂರು ಹೋಬಳಿಯನ್ನು ತಾಲೂಕು ಕೇಂದ್ರ ಮಾಡಿಕೊಡುವಂತೆ ಒತ್ತಾಯಿಸಿ ಬನ್ನೂರು ಪಟ್ಟಣದ ವಿವಿಧ ಪಕ್ಷಗಳ ರಾಜಕೀಯ ಮುಖಂಡರು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರಿಗೆ ಮನವಿ ಸಲ್ಲಿಸಿದರು.

ಬನ್ನೂರು ತಾಲೂಕು ಕೇಂದ್ರ ಮಾಡಲು ಪ್ರಾಮಾಣಿಕ ಪ್ರಯತ್ನ

ಬನ್ನೂರು ತಾಲೂಕು ಕೇಂದ್ರ ಹೋರಾಟ ಸಮಿತಿಯ ಮನವಿ ಸ್ವೀಕರಿಸಿದ ಸಚಿವ ಮಹದೇವಪ್ಪ ಭರವಸೆ

ತಿ.ನರಸೀಪುರ, ಜು.12– ಬನ್ನೂರು ಹೋಬಳಿ ಕೇಂದ್ರವನ್ನು ತಾಲೂಕು ಕೇಂದ್ರವನ್ನಾಗಿ ಮಾಡಲು ಪ್ರಾಮಾಣಿಕವಾಗಿ ಪ್ರಯತ್ನ ಮಾಡುವೆ ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಭರವಸೆ ನೀಡಿದ್ದಾರೆ.

ಬನ್ನೂರು ತಾಲೂಕು ಕೇಂದ್ರ ಹೋರಾಟ ಸಮಿತಿ ಸದಸ್ಯರು ಶನಿವಾರ ತಮ್ಮನ್ನು ಮೈಸೂರಲ್ಲಿ ಭೇಟಿ ಮಾಡಿ ಸಲ್ಲಿಸಿದ ಮನವಿ ಸ್ವೀಕರಿಸಿ ಅವರು ಮಾತನಾಡಿದರು.

ಈವರೆಗೆ ಬಂದ ಘಟಾನುಘಟಿ ನಾಯಕರು ಏನೂ ಮಾಡಿಲ್ಲ, ಈಗ ಬನ್ನೂರು ಪಟ್ಟಣದ ಎಲ್ಲ ಮುಖಂಡರು, ಎಲ್ಲ ರಾಜಕೀಯ ಪಕ್ಷದವರು, ತಾಲೂಕು ಕೇಂದ್ರ ಮಾಡಲು ಒತ್ತಾಯ ಮಾಡಲು ಇಲ್ಲಿಗೆ ಬಂದಿದ್ದೀರಾ, ನಿಮ್ಮೊಂದಿಗೆ ನಾನೂ ಸೇರಿ ನಿಮ್ಮ ಬೇಡಿಕೆಯನ್ನು ಸರ್ಕಾರಕ್ಕೆ ತಲುಪಿಸಿ ತಾಲೂಕು ಕೇಂದ್ರಕ್ಕೆ ಒತ್ತಾಯಿಸುತ್ತೇನೆ ಎಂದು ಭರವಸೆ ನೀಡಿದರು.

ಸಚಿವರ ಮಾತಿಗೆ ಮಾಜಿ ಶಾಸಕ ಎಸ್. ಕೃಷ್ಣಪ್ಪ, ಎರಡು ಬಾರಿ ಮಂತ್ರಿಗಳಾಗಿದ್ದೀರಾ, ಸರ್ಕಾರದ ಮುಖ್ಯ ಅಂಗವೇ ನೀವು. ಹಾಗಾಗಿ ನಾವು ಸರ್ಕಾರಕ್ಕೇ ಅಂದರೆ ನಿಮಗೇ ಬೇಡಿಕೆ ಇಟ್ಟಿದ್ದೇವೆ. ಒಂದು ವಿಧಾನಸಭಾ ಕ್ಷೇತ್ರದಲ್ಲಿ ಇಂತಿಷ್ಟೇ ತಾಲೂಕು ಇರಬೇಕೆಂಬ ನಿಯಮವಿಲ್ಲ, ಹಾಗಾಗಿ ನಮಗೆ ಬನ್ನೂರನ್ನು ತಾಲೂಕು ಕೇಂದ್ರ ಮಾಡಿಕೊಡಿ ಎಂದರು. ಈ ಮಾತಿಗೆ ನಸು ನಕ್ಕ ಸಚಿವರು, ತಾಲೂಕು ಕೇಂದ್ರ ಮಾಡಿಕೊಡುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಬನ್ನೂರು ಹೋಬಳಿ ಕೇಂದ್ರವನ್ನು ತಾಲೂಕು ಕೇಂದ್ರ ಮಾಡಬೇಕೆಂಬ ಬೇಡಿಕೆಯ ಪ್ರಕ್ರಿಯೆಗೆ ಚಾಲನೆ ದೊರಕಿದ್ದು, ಎರಡನೇ ಹಂತದ ಹೋರಾಟದ ಹಿನ್ನೆಲೆಯಲ್ಲಿ ಬನ್ನೂರು ತಾಲೂಕು ಕೇಂದ್ರ ಹೋರಾಟ ಸಮಿತಿಯ ಸದಸ್ಯರು ಶನಿವಾರ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪರನ್ನು ಮೈಸೂರಿನ ನಿವಾಸದಲ್ಲಿ ಭೇಟಿ ಮಾಡಿ ಮನವಿ ಸಲ್ಲಿಸಿ ತಾಲೂಕು ಕೇಂದ್ರಕ್ಕೆ ಒತ್ತಾಯಿಸಿದರು.

ಬನ್ನೂರು ಹೋಬಳಿ ಕೇಂದ್ರವನ್ನು ತಾಲೂಕು ಕೇಂದ್ರ ಮಾಡಬೇಕೆಂಬ ಉದ್ದೇಶದಿಂದ ಕಳೆದ ವಾರ ಬನ್ನೂರಿನ ಕಾಳಮ್ಮ ದೇವಸ್ಥಾನದಲ್ಲಿ ಸಭೆ ಸೇರಿದ್ದ ಮುಖಂಡರು ಹಾಗೂ ಗ್ರಾಮಸ್ಥರು ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲು ನಿರ್ಣಯ ಕೈಗೊಂಡಿದ್ದರು. ಬನ್ನೂರನ್ನು ತಾಲೂಕು ಮಾಡುವ ಸಂಬಂಧ ಎರಡನೇ ಹಂತದ ಪ್ರಕ್ರಿಯೆ ಆರಂಭಗೊಂಡಿದ್ದು, ಮಾಜಿ ಶಾಸಕಿ ಕೆ.ಸುನೀತಾ ವೀರಪ್ಪಗೌಡ ನೇತೃತ್ವದಲ್ಲಿ ಮುಖಂಡರು ಹಾಗೂ ಹೋರಾಟ ಸಮಿತಿ ಸದಸ್ಯರು ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರನ್ನು ಭೇಟಿ ಮಾಡಿ ಒತ್ತಾಯ ಪೂರ್ವಕವಾದ ಮನವಿ ಸಲ್ಲಿಸಿದರು.

> ತಾಲೂಕು ಕೇಂದ್ರ ಮಾಡಲು ಈಗಾಗಲೇ ನೀವು ಒಪ್ಪಿಗೆ ಸೂಚಿಸಿದ್ದೀರಿ, ನೀವು ನೀಡಿದ ಭರವಸೆಯನ್ನು ನಂಬಿ ನಾನು ತಾಲೂಕು ಕೇಂದ್ರ ಮಾಡಲು ಒತ್ತಾಯಿಸಲು ಕರೆಯಲಾಗಿದ್ದ ಸಭೆಯಲ್ಲಿ ಮುಖಂಡರು ಹಾಗೂ ಜನರಿಗೆ ಮಾತು ಕೊಟ್ಟಿದ್ದೇನೆ.ದಯವಿಟ್ಟು ಹೋಬಳಿ ಕೇಂದ್ರವನ್ನು ತಾಲೂಕು ಕೇಂದ್ರ ಮಾಡಲು ಅಗತ್ಯ ಕ್ರಮಕೈಗೊಳ್ಳಬೇಕು. –ಸುನೀತಾ ವೀರಪ್ಪಗೌಡ, ಮಾಜಿ ಶಾಸಕಿ

ಈ ವೇಳೆ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪರಿಗೆ ಮನವಿ ಸಲ್ಲಿಸಿ ಮಾತನಾಡಿದ ತಾಲೂಕು ಹೋರಾಟ ಸಮಿತಿಯ ಮುಖಂಡ ನುಗ್ಗೇಹಳ್ಳಿ ಕೊಪ್ಪಲು ಎನ್.ಎಂ.ರಾಮಚಂದ್ರ ಪುರಸಭೆ ವ್ಯಾಪ್ತಿಯು 46 ಸಾವಿರ ಜನಸಂಖ್ಯೆ ಹೊಂದಿದ್ದು, ಬನ್ನೂರು ಗ್ರಾಮದಲ್ಲಿ ರೈತಾಪಿ ವರ್ಗದವರೇ ಹೆಚ್ಚಿದ್ದಾರೆ. ತಾಲೂಕು ಕ್ಷೇತ್ರ ತಿ.ನರಸೀಪುರಕ್ಕೆ 15ಕಿಮಿ. ಅಂತರವಿದೆ, ಗ್ರಾಮಸ್ಥರು ತೀವ್ರ ತೊಂದರೆ ಎದುರಿಸುವಂತಾಗಿದೆ ಬನ್ನೂರು ಹೋಬಳಿ 60 ವರ್ಷಗಳ ಇತಿಹಾಸ ಇರುವ ಕ್ಷೇತ್ರ ಹಾಗಾಗಿ ಎಲ್ಲಾ ಸರ್ಕಾರಿ ಕಚೇರಿಗಳನ್ನು ಇಲ್ಲೇ ತೆರೆಯುವುದರಿಂದ ಎಲ್ಲ ಜನರಿಗೂ ಅನುಕೂಲವಾಗಲಿದೆ ಎಂದರು.

ಮುಖಂಡ ಡಾ.ಬಿ.ಕೆ.ಜ್ಞಾನಪ್ರಕಾಶ್ ಮಾತನಾಡಿ ಕಳೆದ ಬಾರಿಯ ಚುನಾವಣೆ ವೇಳೆ ಬನ್ನೂರು ಪಟ್ಟಣದ ಜನತೆ ನಿಮ್ಮ ಮೇಲೆ ಅಪಾರವಾದ ವಿಶ್ವಾಸವಿಟ್ಟು ಬೆಂಬಲ ವ್ಯಕ್ತಪಡಿಸಿ ಬನ್ನೂರು ತಾಲೂಕು ಕೇಂದ್ರವಾಗಲಿದೆ ಎಂಬ ಆಶಯ ಹೊಂದಿದ್ದಾರೆ. ಅಲ್ಲದೇ ಬನ್ನೂರು ಪಟ್ಟಣ ನಿರೀಕ್ಷೆಗೂ ಮೀರಿ ಬೆಳೆಯುತ್ತಿದ್ದು ಜನಸಂಖ್ಯೆ ಹೆಚ್ಚುತ್ತಿದೆ. ಪ್ರಸಕ್ತ ಸನ್ನಿವೇಶದಲ್ಲಿ ಬನ್ನೂರು ತಾಲೂಕು ಆಗಲೇಬೇಕಾದ ಅನಿವಾರ್ಯತೆ ಇದೆ. ಮಾಜಿ ಶಾಸಕಿ ಸುನೀತಾ ವೀರಪ್ಪಗೌಡರ ನೇತೃತ್ವವನ್ನು ಪಟ್ಟಣದ ಜನತೆ ನಂಬಿದೆ. ಹಾಗಾಗಿ ನಿಮ್ಮ ಸರ್ಕಾರದ ಅವಧಿ ಮುಗಿವವರೆಗೆ ಬನ್ನೂರು ಹೋಬಳಿಯನ್ನು ತಾಲೂಕು ಕೇಂದ್ರವಾಗಿ ಘೋಷಣೆ ಮಾಡಿ ಎಂದು ಮನವಿ ಸಲ್ಲಿಸಿದರು.

ಒಕ್ಕಲಿಗರ ಸಂಘದ ಕಾರ್ಯದರ್ಶಿ ವೈ. ಎಸ್.ರಾಮಸ್ವಾಮಿ, ತಾ.ಪಂ ಮಾಜಿ ಅಧ್ಯಕ್ಷ ಚಾಮೇಗೌಡ, ಪುರಸಭಾ ಮಾಜಿ ಅಧ್ಯಕ್ಷ ಡಿ.ಪದ್ಮನಾಭ, ಪುರಸಭೆ ಮಾಜಿ ಉಪಾಧ್ಯಕ್ಷ ರಾಮಲಿಂಗೇಗೌಡ, ವಿಶ್ವಕರ್ಮ ಸಮಾಜದ ಹಿರಿಯ ಮುಖಂಡ ಎ.ಎನ್.ಸ್ವಾಮಿ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಟಿ.ಎಸ್.ಪ್ರಸನ್ನ, ವೈ.ಎಚ್.ಹನುಮಂತೇಗೌಡ, ಪುರಸಭೆ ಸದಸ್ಯರಾದ ಮೂರ್ತಿ, ನಾಮ ನಿರ್ದೇಶನ ಸದಸ್ಯ ಶಿವಣ್ಣ, ಮುಖಂಡರಾದ, ಕೃಷ್ಣೇಗೌಡ, ಚೆನ್ನಗೌಡ, ಕಾರ್ ಮಹೇಶ್, ಜಯರಾಮೇಗೌಡ, ಕಾಳೇಗೌಡ, ರೈತ ಸಂಘದ ಆನಂದ, ಚಂದ್ರಶೇಖರ್, ಮಹೇಂದ್ರ ಚೌಡೇಗೌಡ ಮತ್ತಿತರರಿದ್ದರು.

ಮುಡಾ ಮಾಜಿ ಅಧ್ಯಕ್ಷರ ಹುಟ್ಟುಹಬ್ಬ ಆಚರಣೆಗೆ ಸಿದ್ಧತೆ



ಹುಟ್ಟುಹಬ್ಬದ ಆಚರಣೆಗಾಗಿ ಬೃಹತ್ ವೇದಿಕೆಯ ಸಿದ್ಧತೆಗಳನ್ನು ಪರಿಶೀಲನೆ ನಡೆಸುತ್ತಿರುವುದು.

ಕೆ.ಆರ್.ನಗರ, ಜು.12– ಮುಡಾ ಮಾಜಿ ಅಧ್ಯಕ್ಷ ಹಾಗೂ ಉಪ್ಪಾರ ಸಮಾಜದ ಮುಖಂಡ ಹೆಚ್.ಎನ್.ವಿಜಯ್ ಅವರ ಜನ್ಮ ದಿನೋತ್ಸವ ಜು.16ರಂದು ಆಚರಿಸಲಾಗುತ್ತಿದ್ದು, ಧಾರ್ಮಿಕ, ಸಾಂಸ್ಕೃತಿಕ ಸಾಮಾಜಿಕ ಕಾರ್ಯಕ್ರಮಗಳಿಗೆ ಬೃಹತ್ ವೇದಿಕೆಯನ್ನು ಸಿದ್ಧಪಡಿಸಲಾಗುತ್ತಿದೆ.

ಸಾಲಿಗ್ರಾಮ ತಾಲೂಕಿನ ಹರದನಹಳ್ಳಿ ಗ್ರಾಮದಲ್ಲಿನ ಹತ್ತು ಎಕರೆ ಪ್ರದೇಶದಲ್ಲಿ ಖ್ಯಾತ ಚಿತ್ರ ಕಲಾವಿದ ಪ್ರಕಾಶ್ ಚಿಕ್ಕಪಾಳ್ಯ ನೇತೃತ್ವದಲ್ಲಿ ವೇದಿಕೆ ನಿರ್ಮಾಣ ಮಾಡಲಾಗುತ್ತಿದ್ದು, ಸಾಲಿಗ್ರಾಮ ತಾಲೂಕು ಕೇಂದ್ರದಿಂದ ಕಾರ್ಯಕ್ರಮ ನಡೆಯುವ ವೇದಿಕೆವರೆಗೂ ಫ್ಲೆಕ್ಸ್, ಕಟೌಟ್ ಹಾಗೂ ವಿವಿದ ರೀತಿಯ ಚಿತ್ರ ವಿನ್ಯಾಸದ ಚಿತ್ತಾರಗಳ ಜೊತೆಗೆ ಹರದನಹಳ್ಳಿ ಗ್ರಾಮದ ಹೆಬ್ಬಾಗಿಲಿನಿಂದ ರಸ್ತೆಯ ಎರಡು ಬದಿಗಳಲ್ಲಿ ವಿದ್ಯುತ್ ದೀಪಾಲಂಕಾರ ಮಾಡಲಾಗುತ್ತಿದೆ.

ಜನ್ಮ ದಿನೋತ್ಸವದ ಅಂಗವಾಗಿ ಜು.15 ಮಂಗಳವಾರ ಉಚಿತ ಆರೋಗ್ಯ ತಪಾಸಣಾ ಶಿಬಿರ, ನೇತ್ರದಾನ ಮತ್ತು ಕಣ್ಣಿನ ತಪಾಸಣಾ ಶಿಬಿರ ಸೇರಿದಂತೆ ಗರ್ಭಿಣಿ ಮಹಿಳೆಯರಿಗೆ ಸೀಮಂತ ನೆರವೇರಿಸಿ ಇದರೊಂದಿಗೆ ಇನ್ನೂ ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೆಚ್.ಎನ್.ವಿಜಯ್ ಸ್ನೇಹ ಬಳಗದ ಮಿರ್ಲೆ ರಾಜೀವ್ ಮಾಹಿತಿ ನೀಡಿದರು.

ಜು.16 ರಂದು ನಡೆಯುವ ಜನ್ಮ ದಿನೋತ್ಸವ ಸಮಾರಂಭಕ್ಕೆ ನಾಡಿನ ವಿವಿಧ ಮಠಾಧೀಶರು, ರಾಜಕೀಯ ನಾಯಕರು, ಉದ್ಯಮಿಗಳು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧಕರು ಸೇರಿದಂತೆ ವಿವಿಧ ಗಣ್ಯರು ಆಗಮಿಸುವುದರಿಂದ ಶನಿವಾರ ಸಾಲಿಗ್ರಾಮ ಪೊಲೀಸ್ ಇನ್ಸ್‌ಪೆಕ್ಟರ್ ಶಶಿಕುಮಾರ್ ಸ್ಥಳ ಪರಿಶೀಲನೆ ನಡೆಸಿ ಕಾರ್ಯಕ್ರಮದ ಸಂಘಟಕರಿಗೆ ಹಲವು ಸಲಹೆ ಸೂಚನೆಗಳನ್ನು ನೀಡಿದರು.

ನಂಜನಗೂಡಿನ ಲಯನ್ಸ್ ಸಂಸ್ಥೆಯ ಅಧ್ಯಕ್ಷರಾಗಿ ಲಯನ್ ಕೆ.ಮಹೇಶ್ ಅಧಿಕಾರ ಸ್ವೀಕಾರ



ಲಯನ್ಸ್ ಪದವಿ ಪ್ರಧಾನ ಸಮಾರಂಭವನ್ನು ಉದ್ಘಾಟಿಸುತ್ತಿರುವುದು.

ನಂಜನಗೂಡು, ಜು.12– ನಂಜನಗೂಡು ಲಯನ್ಸ್ ಕ್ಲಬ್‌ನ ನೂತನ ಅಧ್ಯಕ್ಷರಾಗಿ ಉದ್ಯಮಿ ಲಯನ್ ಕೆ. ಮಹೇಶ್,ಸ ಕಾರ್ಯದರ್ಶಿಯಾಗಿ ನಾಗರಾಜು ಅಧಿಕಾರ ಸ್ವೀಕರಿಸಿದರು.

ನಗರದ ಬೈಪಾಸ್ ರಸ್ತೆಯಲ್ಲಿರುವ ಮಹದೇಶ್ವರ ಸಂಭಾಂಗಣದಲ್ಲಿ ನಡೆದ ಪದವಿ ಪ್ರದಾನ ಸಮಾರಂಭದಲ್ಲಿ ಲಯನ್ ಟಿ. ನಾರಾಯಣಸ್ವಾಮಿ ನೂತನ ಪದಾಧಿಕಾರಿಗಳಿಗೆ ಪದವಿ ಪ್ರದಾನ ಮಾಡಿದರು.

ಲಯನ್ಸ್ ಸಂಸ್ಥೆಯ ನೂತನ ಅಧ್ಯಕ್ಷ ಕೆ ಮಹೇಶ್ ಮಾತನಾಡಿ ಲಯನ್ಸ್ ಕ್ಲಬ್ ಸೇವಾ ಸಂಸ್ಥೆಗೆ ಅಂತರಾಷ್ಟ್ರೀಯ ಮಟ್ಟದಲ್ಲಿ ತನ್ನದೇ ಆದ ಇತಿಹಾಸವಿದ್ದು, ನಾನು ಕೂಡ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಲಯನ್ಸ್ ಸಂಸ್ಥೆಯ ಘನತೆಯನ್ನು ಹೆಚ್ಚಿಸಲು ಮುಂದಾಗುತ್ತೇನೆ, ಮುಖ್ಯವಾಗಿ ಪ್ರತಿ ತಿಂಗಳು ಆರೋಗ್ಯ ತಪಾಸಣಾ ಶಿಬಿರ, ಕಣ್ಣಿನ ತಪಾಸಣಾ ಶಿಬಿರ, ಬಡವರ ಮಕ್ಕಳ ವಿದ್ಯಾಭ್ಯಾಸಕ್ಕೆ ಹಾಗೂ ಬಡವರಿಗೆ ನೆರವಾಗುವಂತಹ ಸೇವಾ ಕಾರ್ಯಕ್ರಮವನ್ನು ರೂಪಿಸಲು ಮುಂದಾಗುತ್ತೇನೆ. ಜೊತೆಗೆ ಪರಿಸರ ಜಾಗೃತಿ ಮೂಡಿಸುವ ಮೂಲಕ ಪರಿಸರ ಸಂರಕ್ಷಣೆಗೆ ಶ್ರಮಿಸುತ್ತೇನೆ. ಅಲ್ಲದೆ ವಿವಿಧ ರಂಗಗಳಲ್ಲಿ ಸೇವೆ ಸಲ್ಲಿಸಿದ ಸಾಧಕರನ್ನು ಗುರುತಿಸಿ ಅವರಿಗೆ ಪ್ರೋತ್ಸಾಹ ನೀಡಲು ಮುಂದಾಗುತ್ತೇನೆ ಎಂದರು.

ನೂತನ ತಂಡದ ಪ್ರತಿಜ್ಞಾ ವಿಧಿ ಬೋಧಿಸಿದ ಲಯನ್ ಟಿ.ನಾರಾಯಣ ಸ್ವಾಮಿ ಅವರು ಮಾತನಾಡಿ, ಲಯನ್ಸ್ ಸಂಸ್ಥೆಯ ಧ್ಯೇಯವಾಕ್ಯ 'ಸೇವೆ' ಎಂಬುದಾಗಿದ್ದು, ಸೇವೆಯೇ ನಮ್ಮ ಮುಖ್ಯ ಗುರಿಯಾಗಿದೆ ನೂತನ ಪದಾಧಿಕಾರಿಗಳು ಬಡವರಿಗೆ ನೆರವಾಗುವಂತಹ ಕಾರ್ಯಕ್ರಮವನ್ನು ರೂಪಿಸಿ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಅತಿ ಹೆಚ್ಚು ಅಂಕ ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಹಾಗೂ ವೈದ್ಯರನ್ನು ಸನ್ಮಾನಿಸಿ ಗೌರವಿಸಲಾಯಿತು. ಅಂಗವಿಕಲರಿಗೆ ಪರಿಕರಗಳು ಮತ್ತು ಮಹಿಳೆಯರಿಗೆ ಹೊಲಿಗೆ ಯಂತ್ರವನ್ನು ವಿತರಿಸಲಾಯಿತು.

ಸಮಾರಂಭದಲ್ಲಿ ನಿಕಟಪೂರ್ವ ಅಧ್ಯಕ್ಷ ಪೂರ್ವ ಅಧ್ಯಕ್ಷ ಎಸ್.ಮಹದೇವ, ಪ್ರಥಮ ಉಪಾಧ್ಯಕ್ಷರಾದ ಹೆಚ್.ಎಸ್. ರಾಜು, ದ್ವಿತೀಯ ಉಪಾಧ್ಯಕ್ಷರಾದ ಸೋಮಶೇಖರ್, ಹೆಚ್.ಎಸ್, ತೃತೀಯ ಉಪಾಧ್ಯಕ್ಷರಾದ ಕೆ.ರಾಜು, ಚಿನ್ನಂಬಳ್ಳಿ ಜಂಟಿ ಕಾರ್ಯದರ್ಶಿ ಮಧುಸೂಧನ್, ಎನ್.ಎಂ.ಮಂಜುನಾಥ್, ನಂಜುಂಡ ಸ್ವಾಮಿ, ಉಮೇಶ್, ಗಂಗಾಧರ, ಶಿವ ಆರ್.ರವೀಂದ್ರ, ಹರೀಶ್‌ಕುಮಾರ್, ಎನ್.ಆರ್.ಕೃಷ್ಣಪ್ಪಗೌಡ, ಡಾ.ವೃಷಬೇಂದ್ರಸ್ವಾಮಿ, ಟಿ.ಜಿ. ತಿಮ್ಮೇಗೌಡ, ಎಸ್.ಬಸವರಾಜು, ಎನ್. ಜಯರಾಂ, ವಿಜಯ್‌ಕುಮಾರ್, ನರಸಿಂಹಸ್ವಾಮಿ, ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.

ಶಾಸಕ ಹರೀಶ್‌ಗೌಡರ ಸೂಚನೆ ಮೇರೆಗೆ 29ನೇ ವಾರ್ಡಿಗೆ ನಗರಸಭಾ ಅಧ್ಯಕ್ಷ ಭೇಟಿ

ಸಾರ್ವಜನಿಕರಿಂದ ಅಹವಾಲು ಸ್ವೀಕಾರ



ಸಾರ್ವಜನಿಕರ ಅಹವಾಲು ಆಲಿಸುತ್ತಿರುವ ಪುರಸಭಾ ಅಧ್ಯಕ್ಷ ಗಣೇಶ್ ಕುಮಾರಸ್ವಾಮಿ.

ಹುಣಸೂರು, ಜು.12– ಶಾಸಕ ಜಿ.ಡಿ. ಹರೀಶ್‌ಗೌಡರ ಸಲಹೆ ಮೇರೆಗೆ ನಗರಸಭಾ ಅಧ್ಯಕ್ಷ ಗಣೇಶ್ ಕುಮಾರಸ್ವಾಮಿ ಮತ್ತು ಪೌರಾಯುಕ್ತ ಮಾನಸ ಅವರು ಪಟ್ಟಣದ 29ನೇ ವಾರ್ಡಿಗೆ ಭೇಟಿ ನೀಡಿ ಜನರ ಸಮಸ್ಯೆಗಳನ್ನು ಆಲಿಸಿದರು.

ವಾರ್ಡಿನಲ್ಲಿ ಕೆಲವೊಂದು ಮನೆಗಳಲ್ಲಿ ನೀರಿನ ಸೌಲಭ್ಯ ಇಲ್ಲ, ಕೆಲ ಮನೆಗಳಿಗೆ ವಿದ್ಯುತ್ ಇಲ್ಲ ಇದರೊಂದಿಗೆ ಸ್ಲಂಬೋರ್ಡ್‌ಗಳಲ್ಲಿರುವ ಮನೆಗಳಿಗೆ ಹಕ್ಕುಪತ್ರಗಳನ್ನು ನೀಡಿಲ್ಲ. ಕೆಲವು ಮನೆಯಲ್ಲಿ 13ಕ್ಕೂ ಹೆಚ್ಚು ಜನರು ವಾಸವಾಗಿದ್ದಾರೆ. ಈ ಮನೆಗಳು ರಸ್ತೆಯಲ್ಲಿ ಇರುವುದರಿಂದ ಅವರಿಗೆ ನಗರಸಭಾ ವತಿಯಿಂದ ಬೇರೆ ಕಡೆ ಜಾಗ ಕೊಟ್ಟು ಸ್ಥಳಾಂತರ ಮಾಡುವುದಾಗಿ ತಿಳಿಸಲಾಯಿತು.

ರಸ್ತೆ ಬದಿಯಲ್ಲಿ ಅತಿ ಹೆಚ್ಚು ಕಸ ಬಿದ್ದಿದ್ದು ಅದನ್ನು ತೆರವುಗೊಳಿಸಲಾಯಿತು. ಕೆಲವು ಸಮಸ್ಯೆಗಳನ್ನು ಶಾಸಕರ ಗಮನಕ್ಕೆ ತಂದು ಅದನ್ನೂ ಬಗೆಹರಿಸುವುದಾಗಿ ತಿಳಿಸಲಾಯಿತು. ಇದೇ ಸಂದರ್ಭದಲ್ಲಿ 29 ನೇ ವಾರ್ಡಿನ ನಗರಸಭೆ ಸದಸ್ಯರಾದ ಪ್ರಿಯಾಂಕಾ, ಥಾಮಸ್ ವೆನ್ನಿ, AEE ಶರ್ಮಿಳ, ಲೋಕೇಶ್, ಶಿವಕುಮಾರ್, ಪರಿಸರ ಇಂಜಿನಿಯರ್ ಸೌಮ್ಯ ಹಾಗೂ ನಗರಸಭಾ ಇಲಾಖೆಯ ಎಲ್ಲಾ ಸಿಬ್ಬಂದಿ ವರ್ಗದವರು ಕಸ ವಿಲೇವಾರಿ ಮಾಡುವವರು ಸೂಪರ್‌ವೈಸರ್ ಹಾಗೂ ವಾರ್ಡಿನ ನಾಗರಿಕರು ಇದ್ದರು.

ಪ್ಲಾಸ್ಟಿಕ್ ಬಿಟ್ಟು ಪೇಪರ್ ಬ್ಯಾಗ್ ಬಳಸಿ ಎಂದು ಜಾಗೃತಿ



ಹುಣಸೂರಲ್ಲಿ ಪೇಪರ್ ಬ್ಯಾಗ್ ಬಳಸುವಂತೆ ಅರಿವು ಮೂಡಿಸಲಾಯಿತು.

ಹುಣಸೂರು, ಜು.12– ಇಂದು ವಿಶ್ವ ಪೇಪರ್ ಬ್ಯಾಗ್ ದಿನದ ಅಂಗವಾಗಿ ಟ್ಯಾಲೆಂಟ್ ಶಿಕ್ಷಣ ಸಂಸ್ಥೆ ವತಿಯಿಂದ ಹುಣಸೂರು ಪಟ್ಟಣದಲ್ಲಿ ಪ್ಲಾಸ್ಟಿಕ್ ಬಿಟ್ಟು ಪೇಪರ್ ಬ್ಯಾಗ್ ಬಳಸುವಂತೆ ಅರಿವು ಮೂಡಿಸಲಾಯಿತು.

ವಿದ್ಯಾರ್ಥಿಗಳೇ ತಮ್ಮ ಕೈಯಿಂದ ಮಾಡಿದಂತಹ ಪೇಪರ್ ಬ್ಯಾಗ್‌ಗಳನ್ನು ಬೀದಿಬದಿಯ ಅಂಗಡಿಗಳಿಗೆ ವಿತರಿಸುವ ಮುಖಾಂತರ ಪ್ಲಾಸ್ಟಿಕ್ ಮುಕ್ತ ಭಾರತವನ್ನಾಗಿಸಲು ಪೇಪರ್ ಬ್ಯಾಗ್‌ಗಳನ್ನು ಬಳಸುವ ಮುಖಾಂತರ ಪರಿಸರದ ಸಂರಕ್ಷಣೆಗೆ ನಾವೆಲ್ಲರೂ ಶ್ರಮಿಸೋಣ ಎಂಬ ಸಂದೇಶವನ್ನು ನೀಡಲಾಯಿತು.

ಈ ಕಾರ್ಯಕ್ರಮದಲ್ಲಿ ಉಪ ಪ್ರಾಂಶುಪಾಲರಾದ ಜಗದೀಶ್, ಉಪನ್ಯಾಸಕರಾದ ಅರ್ಚನಾ, ಚೈತ್ರ ಹಾಗೂ ನೂರಾರು ವಿದ್ಯಾರ್ಥಿಗಳು ಹಾಜರಿದ್ದರು.

ಅಖಿಲ ನಾಮಧಾರಿಗೌಡ ನೌಕರರ ಸಂಘದ 19ನೇ ವಾರ್ಷಿಕೋತ್ಸವ

ಹೆಚ್.ಡಿ.ಕೋಟೆ: ಅಖಿಲ ನಾಮಧಾರಿ ಗೌಡ ನೌಕರರ ಸಂಘದ ಹೆಗ್ಗಡದೇವನ ಕೋಟೆ ಮತ್ತು ಸರಗೂರಿನ ತಾಲೂಕುಗಳ ಸಂಘದ 19ನೇ ವರ್ಷದ ವಾರ್ಷಿಕ ಮಹಾಸಭೆಯನ್ನು ಭಾನುವಾರ (ಜು.12) ಮಧ್ಯಾಹ್ನ 2.30 ಗಂಟೆಗೆ ಅಖಿಲ ನಾಮಧಾರಿ ಗೌಡ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಎಂ.ಎನ್.ಭೀಮರಾಜ್ (ಅಧ್ಯಕ್ಷರು ತಾಲೂಕು ಅಖಿಲ ನಾಮಧಾರಿಗೌಡ ಸಮಾಜ) ಇವರು ನೆರವೇರಿಸುವರು. ಅಧ್ಯಕ್ಷತೆಯನ್ನು ಎಸ್. ನಾಗೇಂದ್ರ ಇವರು ವಹಿಸುವರು. ಕಾರ್ಯದರ್ಶಿ ಎ.ಅಂಕಪ್ಪ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪದವಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುವರು. ಗೌರವಾಧ್ಯಕ್ಷರು ಕೆ.ಕೆಂಪಣ್ಣ, ಆಟೋಟಗಳಲ್ಲಿ ಭಾಗವಹಿಸಿ ಗೆದ್ದಂತ ಸ್ಪರ್ಧಿಗಳಿಗೆ ಬಹುಮಾನ ವಿತರಣೆ ಮಾಡುವರು.

ಇದಕ್ಕೂ ಮುನ್ನ ಆಟೋಟ ಸ್ಪರ್ಧೆಗಳಿದ್ದು ಸಂಘದ ಸದಸ್ಯರ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

ಸರ್ಕಾರಿ ಕಚೇರಿಗಳಿಗೆ ಸಾರ್ವಜನಿಕರನ್ನು ಅಲೆದಾಡಿಸಬೇಡಿ

ತಿ.ನರಸೀಪುರ ಉಸ್ತುವಾರಿ ಅಧಿಕಾರಿ ಎಂ.ಕೆ.ಸವಿತ ಅಧಿಕಾರಿಗಳಿಗೆ ಸೂಚನೆ



ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ರೋಗಿಗಳ ಆರೋಗ್ಯ ವಿಚಾರಿಸುತ್ತಿರುವುದು.

ತಿ.ನರಸೀಪುರ, ಜು.12–ತಾಲೂಕು ಕಚೇರಿಯ ತಹಸೀಲ್ದಾರರ ನ್ಯಾಯಾಲಯದಲ್ಲಿ ತಾಲೂಕು ಉಸ್ತುವಾರಿ ಅಧಿಕಾರಿ, ವಿವಿ ಕುಲಸಚಿವೆ ಎಂ.ಕೆ.ಸವಿತ ಅವರು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದಿದ್ದ ತ್ರೈಮಾಸಿಕ ಕೆ.ಡಿ.ಪಿ ಸಭೆಯ ಅನುಪಾಲನಾ ವರದಿ ಸಂಬಂಧ ತಾಲೂಕು ಮಟ್ಟದ ಅಧಿಕಾರಿಗಳ ಸಭೆಯನ್ನು ನಡೆಸಲಾಯಿತು.

ತಾಲೂಕು ಭೇಟಿಯ ಹಿನ್ನೆಲೆಯಲ್ಲಿ ನರಸೀಪುರಕ್ಕೆ ಆಗಮಿಸಿದ್ದ ಎಂ.ಕೆ.ಸವಿತಾ ಅವರು ಅಧಿಕಾರಿಗಳ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಸೂಚನೆ, ಆದೇಶಗಳನ್ನು ಚಾಚೂ ತಪ್ಪದೆ ಪಾಲಿಸಿ, ಅನುಷ್ಠಾನಕ್ಕೆ ತರಬೇಕೆಂದು ತಾಕೀತು ಮಾಡಿದರು. ಅಲ್ಲದೆ ಆಡಳಿತಾತ್ಮಕ ವಿಷಯಗಳ ಬಗ್ಗೆಯೂ ಮಾಹಿತಿ ಪಡೆದು ಅಧಿಕಾರಿಗಳೊಂದಿಗೆ ವಿಸ್ತೃತವಾಗಿ ಚರ್ಚಿಸಿದರು.

ಸರ್ಕಾರಿ ಕಚೇರಿಗಳಿಗೆ ಸಾರ್ವಜನಿಕರನ್ನು ಅನಗತ್ಯವಾಗಿ ಅಲೆಸಬಾರದು. ತಾಲೂಕು ಕಚೇರಿಯಲ್ಲಿನ ತಾಂತ್ರಿಕ ಸಮಸ್ಯೆಗಳನ್ನು ಸರಿಪಡಿಸಿ, ಕಾನೂನಿನ ಚೌಕಟ್ಟಿನೊಳಗೆ ಆಗುವಂತಹ ಕೆಲಸಗಳನ್ನು ಮುತುವರ್ಜಿ ವಹಿಸಿ ಮಾಡಿಕೊಡಬೇಕು. ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಆಗುತ್ತಿರುವ ತೊಂದರೆಗಳನ್ನು ಸರಿಪಡಿಸಬೇಕು ಎಂದು ತಾಕೀತು ಮಾಡಿದರು. ಬಿಸಿಎಂ ಇಲಾಖೆಗಳ ಹಾಸ್ಟೆಲ್‌ಗಳ ನಿರ್ವಹಣೆ, ಜಲ ಜೀವನ್ ಮಿಷನ್ ಯೋಜನೆ ಅಡಿಯಲ್ಲಿನ ಕಾಮಗಾರಿಗಳನ್ನು ತುರ್ತಾಗಿ ಪೂರ್ಣಗೊಳಿಸಲು ಮತ್ತು ಮುಂಬರುವ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶವನ್ನು ಉತ್ತಮಪಡಿಸಲು ಕೈಗೊಳ್ಳಬೇಕಾದ ಕ್ರಮ ಹಾಗೂ ಸರ್ಕಾರಿ ಕಟ್ಟಡಗಳಿಗೆ ನಿವೇಶನ ಗುರುತಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.

ಸಾರ್ವಜನಿಕ ಆಸ್ಪತ್ರೆಗೆ ಭೇಟಿ: ತಾಲೂಕು ಕಚೇರಿ ಸಭೆಯ ಬಳಿಕ ಉಸ್ತುವಾರಿ ಅಧಿಕಾರಿ ಎಂ.ಕೆ.ಸವಿತಾ ಅವರು ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿ, ವಿವಿಧ ವಾರ್ಡುಗಳನ್ನು ಪರಿಶೀಲಿಸಿ ಒಳರೋಗಿಗಳಿಂದ ವೈದ್ಯೋಪಚಾರದ ಬಗ್ಗೆ ಮಾಹಿತಿ ಪಡೆದರು. ಆಸ್ಪತ್ರೆಯ ನಿರ್ವಹಣೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಹೆಚ್ಚುವರಿ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡುವಂತೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಾರ್ವಜನಿಕರಿಗೆ ಸಕಾಲದಲ್ಲಿ ಸೇವೆಗಳನ್ನು ಒದಗಿಸುವಂತೆ ತಾಲೂಕು ವೈದ್ಯಾಧಿಕಾರಿ ಡಾಕ್ಟರ್ ಎಂ.ಕೆ ರವಿಕುಮಾರ್ ಹಾಗೂ ಆಡಳಿತ ವೈದ್ಯಾಧಿಕಾರಿ ಡಾ.ಎಸ್.ಬಿ.ಅಭಿಲಾಷ್ ಅವರಿಗೆ ತಿಳಿಸಿದರು.

ಸಭೆಯಲ್ಲಿ ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್, ಕಾರ್ಯನಿರ್ವಾಹಕ ಅಧಿಕಾರಿ ಪಿ.ಎಸ್.ಅನಂತರಾಜು, ಸಮಾಜ ಕಲ್ಯಾಣ ಅಧಿಕಾರಿ ವಿನೂತನ್, ಪರಿಶಿಷ್ಟ ಪಂಗಡಗಳ ಕಲ್ಯಾಣ ಅಧಿಕಾರಿ ಕೋಮಲ, ಜಿ.ಪಂ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪಿ.ಎನ್.ಚರಿತ, ತೋಟಗಾರಿಕೆ ಸಹಾಯಕ ನಿರ್ದೇಶಕಿ ಶಾಂತ, ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿ ಎಂ.ರಾಜಣ್ಣ, ಪುರಸಭೆ ಮುಖ್ಯ ಅಧಿಕಾರಿಗಳಾದ ಬಿ.ಕೆ.ವಸಂತ ಕುಮಾರಿ, ಆರ್.ಹೇಮಂತ್‌ರಾಜ್ ಇದ್ದರು.

ಹೆಚ್.ಡಿ.ಕೋಟೆಯ ಜನೌಷಧಿ ಕೇಂದ್ರ ಬಂದ್

ಕಡಿಮೆ ದರದಲ್ಲಿ ಔಷಧಿ ಪಡೆಯುತ್ತಿದ್ದ ರೋಗಿಗಳಿಗೆ ಸಂಕಷ್ಟ

ಹೆಚ್.ಡಿ.ಕೋಟೆ: ಬಡರೋಗಿಗಳಿಗೆ ಆಶ್ರಯವಾಗಿದ್ದ ಪಟ್ಟಣದ ಜನೌಷಧಿ ಕೇಂದ್ರವನ್ನು ನ್ಯಾಯಾಲಯದ ತಡೆ ಆದೇಶದ ನಡುವೆಯೂ ಬಂದ್ ಮಾಡಿದ್ದು, ಬಡ ಜನರು ಔಷಧಿಗೆ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

> ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಸಾಕಷ್ಟು ಬಡ ಕುಟುಂಬಗಳೇ ಇದ್ದು ಆ ಬಡ ಕುಟುಂಬದ ರೋಗಿಗಳಿಗೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿರುವ ಜನೌಷಧಿ ಕೇಂದ್ರದಲ್ಲಿ ಕಡಿಮೆ ದರದಲ್ಲಿ ಬಹಳಷ್ಟು ಔಷಧಿಗಳನ್ನು ಖರೀದಿಸುತ್ತಿದ್ದೆವು. ಈಗ ಅದನ್ನು ಬಂದ್ ಮಾಡಿರುವುದರಿಂದ ಕಷ್ಟ ಎದುರಾಗುತ್ತಿದೆ. ನಾವು ಸರ್ಕಾರಿ ಆಸ್ಪತ್ರೆಗೆ ಹೋದರೆ ಇಲ್ಲಿರುವ ಕೆಲವು ವೈದ್ಯರು, ಜನೌಷಧಿ ತೆಗೆದುಕೊಂಡರೆ ಬೇಗನೆ ವಾಸಿಯಾಗುವುದಿಲ್ಲ ಎಂದು ಕಮಿಷನ್ ಆಸೆಗೆ ಖಾಸಗಿ ಮೆಡಿಕಲ್ ಸ್ಟೋರ್‌ಗೆ ಔಷಧಿ ಖರೀದಿಸಲು ಬರೆದುಕೊಡುತ್ತಾರೆ. ಶಾಸಕ ಅನಿಲ್ ಚಿಕ್ಕಮಾದು ಅವರು ಇದರ ಬಗ್ಗೆ ಗಮನವಹಿಸಿ ಮತ್ತೆ ಜನೌಷಧಿ ಕೇಂದ್ರ ತೆರೆಸಿ ನಮ್ಮ ಬಡ ಕುಟುಂಬಗಳಿಗೆ ಅನುಕೂಲ ಮಾಡಿಕೊಡಿ. – ಬಡ ಕುಟುಂಬದ ಸದಸ್ಯರು.

ಪಟ್ಟಣದ ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಜನೌಷಧಿ ಕೇಂದ್ರವನ್ನು ಸ್ಥಾಪಿಸಲಾಗಿತ್ತು. ಆದರೆ, ಈಗ ಅದನ್ನು ಬಂದ್ ಮಾಡಿರುವುದರಿಂದ ತಾಲೂಕಿನ ಬಡ ಕುಟುಂಬಗಳಿಗೆ ಕಡಿಮೆ ಬೆಲೆಯಲ್ಲಿ ಸಿಗುತ್ತಿದ್ದ ಔಷಧಿಗಳು ದೊರಕದೆ ಪರದಾಡುತ್ತಿದ್ದಾರೆ.

ಕಳೆದ 7–8 ವರ್ಷಗಳ ಹಿಂದೆ ಈ ಯೋಜನೆ ಜಾರಿಗೊಂಡಾಗ ಎಂಎಸ್‌ಐಎಲ್‌ನವರು ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಬಳಿ ಜನೌಷಧಿ ಕೇಂದ್ರವನ್ನು ತೆರೆದರು. ಪ್ರತಿನಿತ್ಯ ನೂರಾರು ಬಡ ರೋಗಿಗಳಿಗೆ ಕಡಿಮೆ ದರದಲ್ಲಿ ಬಹುತೇಕ ಕಾಯಿಲೆಗಳಿಗೆ ಔಷಧಿ ಸಿಗುತ್ತಿತ್ತು. ಅದರಲ್ಲೂ ಸಕ್ಕರೆ ಕಾಯಿಲೆ, ಬಿಪಿಗೆ ಔಷಧಿಯನ್ನು ಪಡೆದುಕೊಳ್ಳುತ್ತಿದ್ದರು. ಇದರಿಂದ ತಾಲೂಕಿನ ಬಹುತೇಕ ಭಾಗಗಳ ರೋಗಿಗಳಿಗೆ ಅನುಕೂಲವಾಗಿತ್ತು.

ರಾಜ್ಯ ಸರ್ಕಾರ ಇತ್ತೀಚೆಗೆ ಆಸ್ಪತ್ರೆ ಆವರಣದಲ್ಲಿರುವ ಜನೌಷಧಿ ಕೇಂದ್ರಗಳನ್ನು ಮುಚ್ಚಿ, ಆಸ್ಪತ್ರೆಗಳಲ್ಲಿಯೇ ಔಷಧಿಗಳನ್ನು ವಿತರಿಸುವ ಕುರಿತು ಆದೇಶ ಹೊರಡಿಸಿತ್ತು. ಇದರಿಂದ ಆತಂಕಗೊಂಡ ಬಹುತೇಕರು ಹೈಕೋರ್ಟ್ ಮೆಟ್ಟಿಲೇರಿದ್ದರು. ನ್ಯಾಯಾಲಯವು ಪರಿಶೀಲಿಸಿ ಸರ್ಕಾರದ ಆದೇಶಕ್ಕೆ ತಡೆಯಾಜ್ಞೆ ನೀಡಿತ್ತು. ಇದರಿಂದ ಬಡ ರೋಗಿಗಳು ನಿಟ್ಟುಸಿರು ಬಿಟ್ಟಿದ್ದರು.

ಶುಕ್ರವಾರ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿದ್ದ ಜನೌಷಧಿ ಕೇಂದ್ರವನ್ನು ಎಂಎಸ್‌ಐಎಲ್‌ನವರು ಸಂಪೂರ್ಣವಾಗಿ ಬಂದ್ ಮಾಡಿ ಅಲ್ಲಿದ್ದ ಔಷಧಿ ಮತ್ತಿತರ ಪರಿಕರಗಳನ್ನು ಸಾಗಿಸಿದ್ದಾರೆ. ಇದರಿಂದಾಗಿ ವೃದ್ಧರು, ಬಡ ರೋಗಿಗಳು ಅಕ್ಕ ಪಕ್ಕದ ಖಾಸಗಿ ಮೆಡಿಕಲ್ ಸ್ಟೋರ್‌ಗಳಲ್ಲಿ ದುಬಾರಿ ಬೆಲೆ ನೀಡಿ ಔಷಧಿಗಳನ್ನು ಖರೀದಿಸಬೇಕಾದ ಪರಿಸ್ಥಿತಿಯಿಂದ ರಾಜ್ಯ ಸರ್ಕಾರದ ವಿರುದ್ಧ ಶಾಪ ಹಾಕುತ್ತಿದ್ದಾರೆ.



ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಆವರಣದಲ್ಲಿರುವ ಜನೌಷಧ ಅಂಗಡಿ ಮುಚ್ಚಿರುವುದು.

> ಹೆಚ್.ಡಿ.ಕೋಟೆಯಲ್ಲಿರುವ ಜನೌಷಧಿ ಕೇಂದ್ರದಲ್ಲಿ ವ್ಯಾಪಾರ ಕಡಿಮೆಯಾಗುತ್ತಿತ್ತು. ಈ ಕಾರಣದಿಂದ ಬಂದ್ ಮಾಡಲಾಗಿದೆ. ಅಲ್ಲಿ ವ್ಯಾಪಾರವಾದರೆ ನಾವು ಸುಮ್ಮನೆ ಏಕೆ ಔಷಧಿ ಕೇಂದ್ರವನ್ನ ಬಂದ್ ಮಾಡುತ್ತೇವೆ. – ಶ್ರೀನಿವಾಸ್, ಜನರಲ್ ಸೀನಿಯರ್ ಮ್ಯಾನೇಜರ್.

ನರಸೀಪುರ ಆಡಳಿತ ಸೌಧದ ನೌಕರ ಹೃದಯಾಘಾತದಿಂದ ಸಾವು



ತಿ.ನರಸೀಪುರ: ಪಟ್ಟಣದ ತಾಲೂಕು ಆಡಳಿತ ಸೌಧದ ದ್ವಿತೀಯ ದರ್ಜೆ ಸಹಾಯಕ ಅರುಣ್ ಕುಮಾರ್(44) ಶನಿವಾರ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಮೂಲತಃ ನಾಗಮಂಗಲ ತಾಲೂಕಿನ ಕಿಲಾರ ಗ್ರಾಮದವರಾದ ಅರುಣ್‌ಕುಮಾರ್ ಅವರು ಬೆಂಗಳೂರಿನ ಖಾಸಗಿ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಸಂದರ್ಭದಲ್ಲಿ ತೀವ್ರ ಎದೆ ನೋವು ಕಾಣಿಸಿಕೊಂಡು ಆಸ್ಪತ್ರೆಗೆ ದಾಖಲಾದರು ಚಿಕಿತ್ಸೆ ಫಲಕಾರಿಯಾಗದೆ ಅಲ್ಲಿಯೇ ಕೊನೆಯುಸಿರೆಳೆದರು.

ಪತ್ನಿ ಲಕ್ಷ್ಮಿ ಸೇರಿದಂತೆ ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ದಿವಂಗತರ ಅಂತ್ಯಕ್ರಿಯೆ ಭಾನುವಾರ ತುಮಕೂರಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಕಂದಾಯ ಇಲಾಖೆಯ ಉದ್ಯೋಗಿಯ ಅಕಾಲಿಕ ನಿಧನಕ್ಕೆ ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್ ಹಾಗೂ ಇನ್ನಿತರರು ಸಂತಾಪ ಸೂಚಿಸಿದ್ದಾರೆ.

ಶಿವಕುಮಾರ್ ನಿಧನ



ಕೆ.ಆರ್.ನಗರ ತಾಲೂಕಿನ ಕಾಳೇನಹಳ್ಳಿ ಹೊಸಕೊಪ್ಪಲು ಗ್ರಾಮದ ಶಿವಕುಮಾರ್(43) ಶುಕ್ರವಾರ ಸಂಜೆ ನಿಧನರಾದರು.

ಪತ್ನಿ, ಇಬ್ಬರು ಪುತ್ರಿಯರು ಮತ್ತು ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಶನಿವಾರ ಮಧ್ಯಾಹ್ನ ಮೃತರ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿತು. ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕ ದೊಡ್ಡಸ್ವಾಮೇಗೌಡ ಸೇರಿದಂತೆ ಹಲವರು ಅಂತಿಮ ದರ್ಶನ ಪಡೆದು ಸಂತಾಪ ಸೂಚಿಸಿದ್ದಾರೆ.

ಶಕ್ತಿ ಯೋಜನೆಯಡಿ 500 ಕೋಟಿ ಮಹಿಳೆಯರ ಉಚಿತ ಪ್ರಯಾಣ

ನಾಳೆ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಗಳಲ್ಲಿ ಸಂಭ್ರಮಾಚರಣೆ

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಡಾ. ಪುಷ್ಪಾ ಅಮರನಾಥ್



ಮೈಸೂರಿನ ಜಿ.ಪಂ. ಸಭಾಂಗಣದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಜು.12(ಎಂಟಿವೈ)– ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳಲ್ಲಿ ಒಂದಾಗಿರುವ ಶಕ್ತಿ ಯೋಜನೆಯಲ್ಲಿ ಇದುವರೆಗೂ 500 ಕೋಟಿ ಮಹಿಳಾ ಪ್ರಯಾಣಿಕರು ಸಾರಿಗೆ ಸಂಸ್ಥೆಯ ಬಸ್‌ನಲ್ಲಿ ಉಚಿತವಾಗಿ ಪ್ರಯಾಣಿಸಿರುವ ಹಿನ್ನೆಲೆಯಲ್ಲಿ ಜು.14ರಂದು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಗಳಲ್ಲಿ ಸಂಭ್ರಮಾಚರಣೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರನಾಥ್ ತಿಳಿಸಿದ್ದಾರೆ.

ಮೈಸೂರಿನ ಜಿ.ಪಂ.ಸಭಾಂಗಣದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಇದುವರೆಗೂ ರಾಜ್ಯದಾದ್ಯಂತ 500 ಕೋಟಿ ಮಹಿಳಾ ಪ್ರಯಾಣಿಕರು ಉಚಿತವಾಗಿ ಪ್ರಯಾಣ ಮಾಡಿ ದೊಡ್ಡ ಮೈಲಿಗಲ್ಲೊಂದನ್ನು ಸ್ಥಾಪಿಸಿದ್ದಾರೆ. ಆ ಮೂಲಕ ನಮ್ಮ ಸರ್ಕಾರ ದೇಶದಲ್ಲೇ ದೊಡ್ಡ ದಾಖಲೆ ಬರೆದಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಜಿಲ್ಲಾ, ತಾಲೂಕು ಮಟ್ಟದಲ್ಲಿ 5 ಶತಕ ಮಹಿಳಾ ಸಂಭ್ರಮ ಆಚರಿಸುತ್ತಿದೆ. ನಮ್ಮದು ಬಡವರ, ಮಹಿಳೆಯರ ಪರವಾದ ಸರ್ಕಾರ. ಮಹಿಳೆಯರಿಗೆ ಶಕ್ತಿ ತುಂಬುವ ಕೆಲಸ ಮಾಡುತ್ತಿದ್ದೇವೆ. ಜು.14ರಂದು ಸಿಹಿ ಹಂಚಿ ಮಹಿಳೆಯರೊಂದಿಗೆ ಪ್ರಯಾಣಿಸಿ ಸಂಭ್ರಮಿಸಲು ತೀರ್ಮಾನಿಸಿದ್ದೇವೆ ಎಂದರು.

ಮೈಸೂರಲ್ಲಿ ಶಕ್ತಿ ಯೋಜನೆಗೆ 776.8 ಕೋಟಿ ಹಣ ವ್ಯಯವಾಗಿದೆ. ರಾಜ್ಯದಲ್ಲಿ 120,00,733.80 ಕೋಟಿ ರೂ. ಹಣ ವ್ಯಯವಾಗಿದೆ. ಇಷ್ಟು ದೊಡ್ಡ ಮೊತ್ತವನ್ನು ದೇಶದಲ್ಲೇ ಯಾವ ಸರ್ಕಾರವೂ ಕೊಟ್ಟಿಲ್ಲ. ಈ ಸಂಭ್ರಮದ ಹಿನ್ನೆಲೆಯಲ್ಲಿ ಜು.14ರಂದು ದೃಷ್ಟಿಹೀನರಿಗಾಗಿ ವಿಶೇಷ ಉಪಕರಣ ಅಳವಡಿಸಿರುವ ನೂತನ ಸಾರಿಗೆ ಬಸ್‌ಗಳನ್ನ ಸಚಿವ ರಾಮಲಿಂಗರೆಡ್ಡಿ ಮೈಸೂರಿನಲ್ಲಿ ಲೋಕಾರ್ಪಣೆ ಮಾಡಲಿದ್ದಾರೆ. ನಗರ ಬಸ್ ನಿಲ್ದಾಣದಲ್ಲಿ ಮೊದಲ ಹಂತದಲ್ಲಿ 200 ಬಸ್ ಲೋಕಾರ್ಪಣೆ ಆಗಲಿದೆ. ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವರು, ಸ್ಥಳೀಯ ಜನಪ್ರತಿನಿಧಿಗಳು ಭಾಗಿಯಾಗಲಿದ್ದಾರೆ ಎಂದು ತಿಳಿಸಿದರು.

ಆಷಾಢ ಶುಕ್ರವಾರ ಮೈಸೂರು ಸಾಕಷ್ಟು ಕಳೆಗಟ್ಟಿಕೊಂಡಿದೆ. ಈ ಬಾರಿ ವಿಶೇಷವಾಗಿ ಹೆಚ್ಚು ಮಹಿಳೆಯರು ಭಾಗವಹಿಸಿದ್ದಾರೆ. ದಸರೆಗೂ ಹೆಚ್ಚಿನ ಮಹಿಳೆಯರು ಬರುವ ನಿರೀಕ್ಷೆಯಿದೆ. ಲಕ್ಷಾಂತರ ಮಂದಿ ಮಹಿಳೆಯರು ಆಗಮಿಸಲು ಗ್ಯಾರಂಟಿ ಯೋಜನೆಗಳೇ ಕಾರಣವಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಗ್ಯಾರಂಟಿ ಅನುಷ್ಠಾನ ಸಮಿತಿಯ ಜಿಲ್ಲಾ ಅಧ್ಯಕ್ಷ ಅರುಣ್ ಕುಮಾರ್, ಉಪಾಧ್ಯಕ್ಷ ಪ್ರೊ.ಶಿವಕುಮಾರ್, ಸಾರಿಗೆ ಸಂಸ್ಥೆಯ ನಗರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಹೆಚ್.ಟಿ. ವೀರೇಶ್, ಮಾಜಿ ಉಪ ಮೇಯರ್ ಪುಷ್ಪವಲ್ಲಿ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	**(ದೂ: 2521923)**
ದೇಸಿಂಗು ರಾಜಾ2 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	**(ದೂ: 2422871)**
ಮಾದೇವ (ಕ)	4 ಪ್ರದರ್ಶನಗಳು
ಬಾಲಾಜಿ	**(ದೂ: 2497199)**
ಮಾಲಿಕ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	**(ಮೊ:9900820093)**
ಐರಾವತ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾದೇವ (ಕ)	4 ಪ್ರದರ್ಶನಗಳು
ರಾಜಕಮಲ್	
3 ಬಿಹೆಚ್‌ಕೆ (ತ)	4 ಪ್ರದರ್ಶನಗಳು
ಸಂಗಂ	
ಪೆನ್‌ಡ್ರೈವ್ (ಕ)	4 ಪ್ರದರ್ಶನಗಳು
ಲಿಡೋ	
ಐರಾವತ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ವಾಮನ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ.10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

‘ದಕ್ಷಕ’ ಚಿತ್ರದ ಪೋಸ್ಟರ್ ಬಿಡುಗಡೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ದಕ್ಷಕ ಚಿತ್ರದ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಮೈಸೂರು, ಜು.12(ಜಿಎ)–ಶ್ರೀಗೌರಿ ಎಂಟರ್‌ಪ್ರೈಸಸ್ ಅಡಿಯಲ್ಲಿ ನಿರ್ಮಿಸಿರುವ ದಕ್ಷಕ ಚಿತ್ರದ ಪೋಸ್ಟರ್ ಅನ್ನು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬಿಡುಗಡೆಗೊಳಿಸಲಾಯಿತು.

ನಂತರ ಚಿತ್ರದ ನಾಯಕ ಧ್ರುವನ್ ಶ್ರೀನಿವಾಸ್ ಮಾತನಾಡಿ, ಚಿತ್ರವು ಪುನರ್ ಜನ್ಮದ ಕಥೆಯಾಗಿದ್ದು, ನಾಗಲೋಕದ ಅಮೂಲ್ಯ ಶಕ್ತಿ ದಕ್ಷಕನು ಭೂಮಿಗೆ ಬರುವ ಎಳೆಯ ಕಥೆಯನ್ನು ಹೊಂದಿರುವ ಪೌರಾಣಿಕ ಹಾಗೂ ಈಚಿನ ಪ್ರಪಂಚದ ಸಂದರ್ಭ ಆಧರಿಸಿದ್ದು, ಚಿತ್ರೀಕರಣ ಶೇ. 50 ರಷ್ಟು ಪೂರ್ಣಗೊಂಡಿದ್ದು, ಎರಡು ಮೂರು ತಿಂಗಳಲ್ಲಿ ರಾಜ್ಯಾದ್ಯಂತ ಬಿಡುಗಡೆಗೊಳ್ಳಲಿದೆ ಎಂದು ತಿಳಿಸಿದರು.

ಇದು ತಾಯಿ ಮತ್ತು ಮಗನ ನಡುವಿನ ಬಾಂಧವ್ಯದ ಪ್ರಾಮುಖ್ಯತೆ ತಿಳಿಸುವ ಚಿತ್ರವಾಗಿದೆ. ತಾಯಿ ತನ್ನ ಪ್ರಾಣವನ್ನೇ ಪಣಕ್ಕಿಟ್ಟು ಮಗನನ್ನು ಉಳಿಸಿಕೊಳ್ಳುವ ಮನಮಿಡಿಯುವ ಕಥೆ ಹೊಂದಿದೆ. ಮೈಸೂರು ಹಾಗೂ ಮಂಡ್ಯ ಸುತ್ತಮುತ್ತ ಚಿತ್ರೀಕರಣಗೊಂಡಿದೆ. ನಾಲ್ಕು ಹಾಡಿನ ಜೊತೆಗೆ ಕೆಲ ಹೊಡೆದಾಟದ ದೃಶ್ಯಗಳೂ ಇವೆ. ಇಡೀ ಕುಟುಂಬ ಒಟ್ಟಿಗೆ ಕುಳಿತು ನೋಡಬಹುದಾದ ಚಿತ್ರ. ಹೀಗಾಗಿ ಕನ್ನಡ ಸಿನಿಮಾ ಪ್ರೇಕ್ಷಕರು ಚಿತ್ರ ವೀಕ್ಷಿಸಿ ಪ್ರೋತ್ಸಾಹಿಸಬೇಕೆಂದು ಕೋರಿದರು.

ಚಿತ್ರವನ್ನು ಗೌರಿ ನಿರ್ದೇಶಿಸಿದ್ದು, ಅವರೇ ಸಂಗೀತ ನೀಡಿದ್ದಾರೆ. ನಾಯಕಿಯಾಗಿ ಆರ್.ಸಮೀಕ್ಷಾ, ಜೊತೆಗೆ ಸಂಜೀವನ್ ರಾವ್, ಮಹದೇವ್ ತಲಕಾಡು, ವಿನಯ್ ಮೊದಲಾದವರು ನಟಿಸಿದ್ದಾರೆ. ಗೌರಿ ಛಾಯಾಗ್ರಹಣ ಮನು ಅವರದ್ದಾಗಿದ್ದು, ಹೇಮಲತಾ ನಿರ್ಮಾಣ ಮಾಡಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಜೀವನ್ ರಾವ್, ಅಜಯ್ ಅರಸು, ಮಹದೇವ್ ತಲಕಾಡು, ವಿನಯ್, ಸಮೀಕ್ಷಾ ಉಪಸ್ಥಿತರಿದ್ದರು.

ಪಾಲಿಕೆ ನೌಕರರ ಮುಷ್ಕರ ಸ್ಥಳಕ್ಕೆ ಉಸ್ತುವಾರಿ ಸಚಿವರ ಭೇಟಿ

ಮೈಸೂರು, ಜು.12(ಜಿಎ)–ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಮೈಸೂರು ಮಹಾನಗರ ಪಾಲಿಕೆ ನೌಕರರ ಸಂಘ ಹಾಗೂ ರಾಜ್ಯ ಮಹಾನಗರ ಪಾಲಿಕೆಗಳ ನೌಕರರ ಪರಿಷತ್ ಸದಸ್ಯರು ಪಾಲಿಕೆ ಮುಂಭಾಗ ನಡೆಸುತ್ತಿರುವ ಮುಷ್ಕರ ಐದನೇ ದಿನಕ್ಕೆ ಕಾಲಿಟ್ಟಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಮನವಿ ಪತ್ರ ಸ್ವೀಕರಿಸಿದರು.



ಮೈಸೂರು ಮಹಾನಗರ ಪಾಲಿಕೆ ಮುಂಭಾಗ ನಡೆಯುತ್ತಿರುವ ಮುಷ್ಕರ ಸ್ಥಳಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಭೇಟಿ ನೀಡಿ ಮನವಿ ಪತ್ರ ಸ್ವೀಕರಿಸಿ, ಮಾತನಾಡಿದರು.

ಪ್ರತಿಭಟನಾಕಾರರು 7ನೇ ವೇತನ ಆಯೋಗದ ಪರಿಷ್ಕೃತ ವೇತನ ಪಾವತಿಗೆ ಅಗತ್ಯವಿರುವ ಹೆಚ್ಚುವರಿ ಅನುದಾನ ಆರ್ಥಿಕ ಇಲಾಖೆ ಬಿಡುಗಡೆಗೊಳಿಸಬೇಕು. ವೇತನಾನುದಾನಕ್ಕೆ ಶೇ. 85 ರಿಂದ 95 ರಷ್ಟನ್ನು ಮಾತ್ರ ಬಿಡುಗಡೆಗೊಳಿಸಿ, ಉಳಿದುದನ್ನು ಪಾಲಿಕೆ ಕ್ರೋಢೀಕರಿಸಿದ ಸಂಪನ್ಮೂಲದಲ್ಲಿ ಭರಿಸಬೇಕೆಂದು ಪೌರಾಡಳಿತ ಇಲಾಖೆ ನಿರ್ದೇಶನ ಹೊರಡಿಸಿದೆ. ಇದು ಸರಿಯಲ್ಲ. ಒಂದು ವೇಳೆ ನಾಗರಿಕರು ಆಸ್ತಿ ತೆರಿಗೆ ಪಾವತಿಸದಿದ್ದರೆ ವೇತನ ನೀಡಲು ಸಾಧ್ಯವಾಗದು. ಈ ನಿಯಮ ರದ್ದಾಗಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಸಚಿವರು ಮಾತನಾಡಿ, ಮುಖ್ಯಮಂತ್ರಿಗಳಿಗೆ ನೌಕರರ ಬೇಡಿಕೆಯ ಬಗ್ಗೆ ತಿಳಿಸಲಾಗುವುದು ಎಂದು ಭರವಸೆ ನೀಡಿದರು. ಈ ಸಂದರ್ಭದಲ್ಲಿ ಶಾಸಕರಾದ ತನ್ವೀರ್ ಸೇಠ್, ಹರೀಶ್ ಗೌಡ, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮಾಜಿ ಮೇಯರ್ ಪುರುಷೋತ್ತಮ, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ ಉಪಸ್ಥಿತರಿದ್ದರು.

ವೈದ್ಯನಿಂದಲೇ ಡ್ರಗ್ಸ್ ಪೆಡ್ಲಿಂಗ್; ಡಾಕ್ಟರ್ ಪೊಲೀಸ್ ವಶಕ್ಕೆ

ಮಂಗಳೂರು, ಜು.12– ಮಂಗಳೂರಿನಲ್ಲಿ ಡ್ರಗ್ಸ್ ಜಾಲವನ್ನು ಬಯಲಿಗೆಳೆದಿರುವ ಪೊಲೀಸರು, ಡ್ರಗ್ಸ್ ಪೂರೈಸುತ್ತಿದ್ದ ಬೀದರ್ ಮೂಲದ ವೈದ್ಯನನ್ನು ಬಂಧಿಸಿದ್ದಾರೆ.

ವೈದ್ಯನ ಬಂಧನದ ಬೆನ್ನಲ್ಲೇ ಜಿಲ್ಲೆಯಲ್ಲಿ ಡ್ರಗ್ಸ್ ಜಾಲಕ್ಕೆ ಸಂಬಂಧಿಸಿದ ಅನೇಕ ಅಚ್ಚರಿ ಹಾಗೂ ಆತಂಕಕಾರಿ ಮಾಹಿತಿಗಳು ಬಹಿರಂಗವಾಗಿವೆ. ಬೆಂಗಳೂರಿನ ಕೋಡಿಪಾಳ್ಯ ನಿವಾಸಿಯಾಗಿರುವ ಪ್ರಜ್ವಲ್ ಪೀಣ್ಯಾಸ್ ಬಂಧಿತ ವೈದ್ಯನಾಗಿದ್ದು, ಈತ ಹಾಗೂ ಇತರ ಪೆಡ್ಲರ್‌ಗಳು ವಿದ್ಯಾರ್ಥಿಗಳನ್ನೇ ಗುರಿಯಾಗಿಸಿಕೊಂಡು ಡ್ರಗ್ಸ್ ಪೂರೈಕೆ ಮಾಡುತ್ತಿದ್ದರು ಎಂಬ ಅಘಾತಕಾರಿ ಅಂಶ ಈ ಕಾರ್ಯಾಚರಣೆಯ ಮೂಲಕ ಹೊರಬಿದ್ದಿದೆ.

ಮಧ್ಯಪ್ರದೇಶ, ಮಹಾರಾಷ್ಟ್ರದಿಂದ ಡ್ರಗ್ಸ್: ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರದಿಂದ ಮಂಗಳೂರಿಗೆ ಡ್ರಗ್ಸ್ ಪೂರೈಕೆಯಾಗುತ್ತಿದೆ ಎಂಬ ಅಂಶ ಈ ಕಾರ್ಯಾಚರಣೆ ಮೂಲಕ ಲಭ್ಯವಾಗಿದೆ. ಡ್ರಗ್ಸ್ ಜಾಲದ ಬೆನ್ನು ಬಿದ್ದ ಮಂಗಳೂರು ಪೊಲೀಸರು 6 ಆರೋಪಿಗಳನ್ನು ಬಂಧಿಸಿದ್ದರು. ಬಂಧಿತರನ್ನು ತೀವ್ರ ವಿಚಾರಣೆಗೆ ಒಳಪಡಿಸಿದ ವೇಳೆ, ವೈದ್ಯ ಪ್ರಜ್ವಲ್ ಪೀಣ್ಯಾಸ್ ಕಿಂಗ್‌ಪಿನ್ ಎಂಬುದು ಗೊತ್ತಾಗಿದೆ.

ಬೆಂಗಳೂರಿನಲ್ಲಿದ್ದ ವೈದ್ಯ ಪ್ರಜ್ವಲ್ ಪೀಣ್ಯಾಸ್, ಮಂಗಳೂರಿನ ಫಾದರ್ ಮುಲ್ಲರ್ಸ್ ಕಾಲೇಜಿನಲ್ಲಿ ವೈದ್ಯಕೀಯ ಶಿಕ್ಷಣ ಪಡೆದಿದ್ದ. ಮಂಗಳೂರು ನಗರದ ವಿವಿಧ ಠಾಣೆಗಳಲ್ಲಿ ಡ್ರಗ್ಸ್ ಪೂರೈಕೆ ಹಿನ್ನೆಲೆ ದಾಖಲಾಗಿದ್ದ ಪ್ರಕರಣಗಳ ಜಾಡು ಹಿಡಿದಾಗ ಪ್ರಜ್ವಲ್ ಪೀಣ್ಯಾಸ್ ಈ ಜಾಲದಲ್ಲಿ ಶಾಮೀಲಾಗಿರುವುದು ಬೆಳಕಿಗೆ ಬಂದಿದೆ. ಪ್ರಕರಣ ಸಂಬಂಧ ಈವರೆಗೆ ಒಟ್ಟು 9 ಆರೋಪಿಗಳನ್ನು ಬಂಧಿಸಲಾಗಿದೆ.

ಮಂಗಳೂರಿನಲ್ಲಿ ಡ್ರಗ್ಸ್ ಪೂರೈಕೆ ಮಾಡುತ್ತಿದ್ದ 6 ಮಂದಿಯನ್ನು ಈ ಹಿಂದೆ ಬಂಧಿಸಲಾಗಿತ್ತು. ಹೊರರಾಜ್ಯ ಹಾಗೂ ಹೊರ ಜಿಲ್ಲೆಗಳಿಂದ ಮಂಗಳೂರಿಗೆ ಈ ಜಾಲ ಡ್ರಗ್ಸ್ ಪೂರೈಕೆ ಮಾಡುತ್ತಿತ್ತು. ಮಹಾರಾಷ್ಟ್ರಕ್ಕೆ ಸೇರಿದ ಇಬ್ಬರು ಮಧ್ಯಪ್ರದೇಶಕ್ಕೆ ಸೇರಿದ ಒಬ್ಬರನ್ನ ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ನೀಡಲಾಗಿತ್ತು ಬೀದರ್ ಮೂಲದ ವೈದ್ಯನನ್ನು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ ಎಂದು ಮಂಗಳೂರು ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ ಮಾಹಿತಿ ನೀಡಿದ್ದಾರೆ.

ಗ್ರಾಫಾಲಜಿ, ಬಾಡಿ ಲಾಂಗ್ವೇಜ್ ತರಬೇತಿ ಕಾರ್ಯಾಗಾರ

ಮೈಸೂರು, ಜು. 12– ಹಸ್ತಾಕ್ಷರ ನೋಡಿ ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಸುಲಭವಾಗಿ ವಿಶ್ಲೇಷಿಸಬಹುದಾದ ಗ್ರಾಫಾಲಜಿ ಅಂದರೆ ಹಸ್ತಾಕ್ಷರ ವಿಶ್ಲೇಷಣೆ ಹಾಗೂ ಬಾಡಿ ಲಾಂಗ್ವೇಜ್ ಅಂದರೆ ಆಂಗಿಕ ಭಾಷೆ ವಿಶ್ಲೇಷಣೆ ಮಾಡುವ ಕಾರ್ಯಾಗಾರವನ್ನು ಜುಲೈ 20 ರ ಭಾನುವಾರ ಮೈಸೂರಿನಲ್ಲಿ ಏರ್ಪಡಿಸಲಾಗಿದೆ. ಈ ಎರಡೂ ಮೃದು ಕೌಶಲಗಳನ್ನು ಅಧ್ಯಯನ ಮಾಡಿದಲ್ಲಿ ಅಪರಿಚಿತ ವ್ಯಕ್ತಿಯ ಮನೋಭಾವ, ಆಸಕ್ತಿ, ಅಭಿರುಚಿಗಳನ್ನು ಸುಲಭವಾಗಿ ಅರಿಯಬಹುದು. ಈ ಕೌಶಲಗಳು ಶಿಕ್ಷಕರಿಗೆ, ವಕೀಲರಿಗೆ, ಆಡಳಿತ ಮಂಡಳಿಯ ಮುಖ್ಯಸ್ಥರು, ಸದಸ್ಯರಿಗೆ ಉಪಯೋಗವಾಗಲಿದೆ. ಅಷ್ಟೇ ಅಲ್ಲ ಪೋಷಕರಿಗೆ ತಮ್ಮ ಮಕ್ಕಳ ಮನೋಭಾವವನ್ನು ಅರಿಯಲು ಸಹಕಾರಿಯಾಗಲಿದೆ ನೇರ ತರಗತಿಗಳಲ್ಲದೆ ಆನ್‌ಲೈನ್‌ನಲ್ಲಿಯೂ ವೆಬಿನಾರ್ ಮೂಲಕ ತರಬೇತಿ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸಂಪನ್ಮೂಲ ವ್ಯಕ್ತಿಯಾದ ಜಿ.ಎಲ್.ತ್ರಿಪುರಾಂತಕ ಅವರನ್ನು ಮೊಬೈಲ್ ಸಂಖ್ಯೆ: 9686677284 ರಲ್ಲಿ ಸಂಪರ್ಕಿಸಬಹುದಾಗಿದೆ

ಗ್ಯಾರಂಟಿಗಳ ಮೂಲಕ ಕಾಂಗ್ರೆಸ್ ಜನರಿಗೆ ಮಂಕುಬೂದಿ ಎರಚಿದೆ

ಜೆಡಿಎಸ್ ಯುವ ನಾಯಕ ನಿಖಿಲ್ ಕುಮಾರಸ್ವಾಮಿ ವ್ಯಂಗ್ಯ



ಚಿಂತಾಮಣಿ, ಜು.12: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದರೂ ಸತ್ತ ಸರ್ಕಾರವಾಗಿದ್ದು, ಗ್ಯಾರಂಟಿ ಯೋಜನೆಗಳ ನೆಪದಲ್ಲಿ ಜನರಿಗೆ ಮಂಕುಬೂದಿ ಎರಚಿ ಅಧಿಕಾರದ ಗದ್ದುಗೆಯನ್ನು ಹಿಡಿದಿದೆ. ಜನಸಾಮಾನ್ಯರಿಂದ ಹಲವು ರೀತಿಯ ತೆರಿಗೆ, ದಿನನಿತ್ಯ ಬಳಕೆಯ ವಸ್ತುಗಳ ಮೇಲೆ ಬೆಲೆ ಏರಿಕೆ, ದುಪ್ಪಟ್ಟು ತೆರಿಗೆ ಮೂಲಕ ಜನತೆಯ ಸುಲಿಗೆ ಮಾಡುತ್ತಿದೆ ಎಂದು ರಾಜ್ಯ ಯುವ ಜೆಡಿಎಸ್ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಆರೋಪಿಸಿದರು.

ಸದಸ್ಯತ್ವಕ್ಕಾಗಿ ಮಿಸ್ಡ್ ಕಾಲ್: ನಗರದ ಹೊರವಲಯದ ಕಡಪ–ಬೆಂಗಳೂರು ರಸ್ತೆಯ ಜೆ ಕೆ ಭವನದಲ್ಲಿ ಪಕ್ಷದ ಕಾರ್ಯಕರ್ತರ ಸದಸ್ಯತ್ವ ಡಿಜಿಟಲ್ ನೋಂದಣಿ ಅಭಿಯಾನದಲ್ಲಿ ಮಾತನಾಡಿ ಕಾರ್ಯಕರ್ತರಿಗೆ ಬಲ ತುಂಬುವ ಉದ್ದೇಶದಿಂದ ಹಾಗೂ ಕಾರ್ಯಕರ್ತರಿಗೆ ಸದಾ ಬೆಂಬಲವಾಗಿ ನಿಲ್ಲುವ ಉದ್ದೇಶದಿಂದ ಮತ್ತು ಪಕ್ಷ ಸಂಘಟನೆಗಾಗಿ ಮಿಸ್ಡ್ ಕಾಲ್ ಅಭಿಯಾನದ ಮೂಲಕ ಸದಸ್ಯತ್ವ ನೋಂದಣಿ ಮಾಡಿಸಿಕೊಳ್ಳಲಾಗುತ್ತಿದೆ ಎಂದರು.

ರಾಜ್ಯದ ಯಾವುದೋ ಒಂದು ಭಾಗಕ್ಕೆ ಜೆಡಿಎಸ್ ಸೀಮಿತವಾಗಿಲ್ಲ. ಬದಲಾಗಿ ರಾಜ್ಯದ ಉದ್ದಗಲಕ್ಕೂ ಪ್ರಾದೇಶಿಕ ಪಕ್ಷಕ್ಕೆ ಜನರ ಮನ್ನಣೆ ದೊರೆತಿದೆ. ಈಗಾಗಲೇ ಎನ್‌ಡಿಎ ಜತೆ ಮೈತ್ರಿ ಮಾಡಿಕೊಂಡಿದ್ದು ಅದನ್ನು ಮುಂದುವರೆಸಿಕೊಂಡು ಹೋಗುವುದರ ಜೊತೆಗೆ ಪಕ್ಷವನ್ನು ಮತ್ತಷ್ಟು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಕಾರ್ಯಕರ್ತರು ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು ಎಂದರು.

ಜಿಪಂ, ತಾಪಂ ಚುನಾವಣೆ: ಯಾವುದೇ ಚುನಾವಣೆಯನ್ನು ಹಗುರವಾಗಿ ಪರಿಗಣಿಸದೇ ಪಕ್ಷದ ಅಭ್ಯರ್ಥಿಯ ಗೆಲುವಿಗೆ ಪಣತೊಡಬೇಕು. ಕಾರ್ಯಕರ್ತರಿಗೆ ಪಕ್ಷದಲ್ಲಿ ಉತ್ತಮ ಸ್ಥಾನಮಾನವನ್ನು ನೀಡುವ ನಿಟ್ಟಿನಲ್ಲಿ ಪಕ್ಷ ವಿವಿಧ ಪದಾಧಿಕಾರಿಗಳನ್ನು ಆಯ್ಕೆ ಮಾಡಿದೆ. ಮುಂಬರುವ ಡಿಸೆಂಬರ್–ಜನವರಿಯಲ್ಲಿ ಗ್ರಾಪಂ., ತಾಪಂ., ಜಿಪಂ ಹಾಗೂ ಸ್ಥಳೀಯ ಚುನಾವಣೆಗಳು ಬರಲಿದ್ದು, ಸ್ಪರ್ಧಿಸುವ ಆಕಾಂಕ್ಷಿಗಳು ಕಾರ್ಯಕರ್ತರಾಗಿರುತ್ತಾರೆ ಎಂದರು. ನಗರದ ಸರ್ಕಾರಿ ಬಾಲಕರ ಹಿರಿಯ ಪ್ರಾಥಮಿಕ ಪಾಠಶಾಲಾ ಆವರಣದಲ್ಲಿದ್ದ ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿಯನ್ನು ಸ್ಥಳೀಯ ಶಾಸಕ ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿ ತೆರವುಗೊಳಿಸಿದ್ದಾರೆ. ಪುತ್ಥಳಿ ತೆರವುಗೊಳಿಸುವುದು ಅಂಬೇಡ್ಕರ್‌ರಿಗೆ ರಾಜ್ಯ ಕಾಂಗ್ರೆಸ್ ಮಾಡಿರುವ ಅಪಮಾನವಾಗಿದೆಯೆಂದು ಗುಡುಗಿದರು.

ರಂಗರಾವ್ ಮೆಮೋರಿಯಲ್ ವಿಶೇಷ ಹೆಣ್ಣು ಮಕ್ಕಳ ಶಾಲೆ ವಿದ್ಯಾರ್ಥಿನಿಯರಿಗೆ ಸ್ಮಾರ್ಟ್ ಫೋನ್ ವಿತರಣೆ

ಮೈಸೂರು, ಜು.12(ಎಂಟಿವೈ)– ಮೈಸೂರಿನ ಮೇಟಗಳ್ಳಿಯಲ್ಲಿರುವ ರಂಗರಾವ್ ಮೆಮೋರಿಯಲ್ ವಿಶೇಷ ಹೆಣ್ಣು ಮಕ್ಕಳ ಶಾಲೆಯ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿನಿಯರಿಗೆ ಸ್ಮಾರ್ಟ್ ಫೋನ್ ನೀಡುವ ಕಾರ್ಯಕ್ರಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಚಾಲನೆ ನೀಡಿದರು.

ಎನ್.ಆರ್.ಸಂಸ್ಥೆ ಮುನ್ನಡೆಸುತ್ತಿರುವ ವಿಶೇಷ ಹೆಣ್ಣು ಮಕ್ಕಳ ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ವ್ಯಾಸಂಗ ಮಾಡುತ್ತಿರುವ 12 ವಿದ್ಯಾರ್ಥಿನಿಯರಿಗೆ ಎನ್.ಆರ್. ಸಂಸ್ಥೆ ಸ್ಯಾಮ್‌ಸಂಗ್ ಎಸ್24 ಸ್ಮಾರ್ಟ್ ಫೋನ್ ಕೊಡುಗೆ ನೀಡಿದ್ದು, ಅವುಗಳನ್ನು ಸಚಿವ ಡಾ.ಹೆಚ್.ಸಿ.ಮಹದೇವಪ್ಪ ವಿದ್ಯಾರ್ಥಿನಿಯರಿಗೆ ಹಸ್ತಾಂತರಿಸಿ ಶುಭ ಕೋರಿದರು.



ಮೈಸೂರಿನ ಮೇಟಗಳ್ಳಿಯಲ್ಲಿರುವ ಎನ್.ಆರ್.ಸಂಸ್ಥೆಯ ವಿಶೇಷ ಹೆಣ್ಣು ಮಕ್ಕಳ ಶಾಲೆಯ ಎಸ್‌ಎಸ್‌ಎಲ್‌ಸಿಯ 12 ವಿದ್ಯಾರ್ಥಿನಿಯರಿಗೆ ಸಂಸ್ಥೆ ವತಿಯಿಂದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸ್ಮಾರ್ಟ್ ಫೋನ್ ವಿತರಿಸಿದರು.

ಬಳಿಕ ಮಾತನಾಡಿದ ಸಚಿವರು, ಎನ್.ಆರ್.ಸಂಸ್ಥೆ ದೃಷ್ಟಿಹೀನ ಹೆಣ್ಣುಮಕ್ಕಳಿಗಾಗಿ ವಿಶೇಷ ಶಾಲೆ ನಡೆಸುತ್ತಿರುವುದು ಶ್ಲಾಘನೀಯ. ಈ ಶಾಲೆಯ ಮಕ್ಕಳಿಗೆ ದೃಷ್ಟಿ ಕಾಣದೇ ಇದ್ದರೂ ಜೀವನದಲ್ಲಿ ಬೆಳಕು ಬರುವ ರೀತಿಯಲ್ಲಿ ಭವಿಷ್ಯ ರೂಪಿಸಿಕೊಳ್ಳುವ ಹಾಗೂ ಬದುಕು ಕಟ್ಟಿಕೊಳ್ಳುವ ವಿಶೇಷ ಗುಣವಿದೆ. ಈ ಮಕ್ಕಳು ಪ್ರೀತಿ, ಅನುರಾಗ ಬಿತ್ತುವ ಕಾರ್ಯದಲ್ಲಿ ಮುಂದೆ ಇದ್ದಾರೆ. ಇಂದು ತಂತ್ರಜ್ಞಾನ ಬೆಳೆದಿದೆ. ವೈಜ್ಞಾನಿಕ ದೃಷ್ಟಿಕೋನ ಕೋನಗಳು ಶರವೇಗದಲ್ಲಿ ಸಾಗುತ್ತಿವೆ. ಆ ತಂತ್ರಜ್ಞಾನವನ್ನು ಶಿಕ್ಷಣದಲ್ಲಿ ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿನಿಯರಿಗೆ ಎನ್.ಆರ್. ಸಂಸ್ಥೆ ಸ್ಮಾರ್ಟ್ ಫೋನ್ ನೀಡಿದೆ ಎಂದರು.

ಇಲ್ಲಿನ ದೃಷ್ಟಿಹೀನ ವಿಶೇಷ ಮಕ್ಕಳು ಬೇರೆಯವರಿಗಿಂತ ಕಡಿಮೆ ಇಲ್ಲ. ತಮ್ಮ ಸಾಮರ್ಥ್ಯ ಪ್ರದರ್ಶಿಸುವುದಕ್ಕೆ ಎನ್.ಆರ್.ಸಂಸ್ಥೆ ಉತ್ತಮ ಸೌಲಭ್ಯ ಒದಗಿಸಿದೆ. ಸಂಸ್ಥೆ ನೀಡಿದ ಸ್ಮಾರ್ಟ್ ಫೋನ್ ಬಳಸುವ ಮೂಲಕ ಹೆಚ್ಚಿನ ಕಲಿಕಾ ಸಾಮರ್ಥ್ಯ ವೃದ್ಧಿಸಿಕೊಂಡು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಲು ಗಮನಹರಿಸಬೇಕು.

ಎನ್‌ಆರ್ ವಿಶೇಷ ಶಾಲೆಯ ಮಕ್ಕಳು ಸಂವಿಧಾನ ಪೀಠಿಕೆಯನ್ನು ಓದಿದ್ದು ಸಂತೋಷವನ್ನುಂಟು ಮಾಡಿದೆ. ಪ್ರಿಯಾಂಬಲ್ ಆಫ್ ಇಂಡಿಯಾದಲ್ಲಿ ಭಾರತದ ಪ್ರಜೆಗಳಾದ ನಾವು ಎನ್ನುತ್ತೇವೆ. ನಾವು ಎಂದಾಗ ತಾರತಮ್ಯ, ಕೋಮುವಾದ, ಜಾತಿ, ಧರ್ಮ ಎಂದು ಯಾಕೆ ಹೊಡೆದಾಡುತ್ತೇವೆ ಎಂದು ಅರ್ಥವಾಗುತ್ತಿಲ್ಲ ಎಂದು ವಿಷಾದಿಸಿದರು.

ಇದಕ್ಕೂ ಮುನ್ನ ಎನ್‌ಆರ್ ಫೌಂಡೇಶನ್‌ನ ಚೇರ್‌ಮನ್ ಆರ್. ಗುರು ಮಾತನಾಡಿ, ಈ ಯೋಜನೆಯು ಕೇವಲ ಸ್ಮಾರ್ಟ್ ಫೋನ್‌ಗಳ ವಿತರಣೆ ಮಾತ್ರವೇ ಅಲ್ಲ, ಬದಲಿಗೆ ಇದೊಂದು ಅವಕಾಶಗಳ ಬಾಗಿಲು ತೆರೆಯುವ ಯೋಜನೆಯಾಗಿದೆ. ರಂಗರಾವ್ ಸ್ಮಾರಕ ವಿಶೇಷಚೇತನ ಮಕ್ಕಳ ಶಾಲೆಯಲ್ಲಿ ನಾವು ಎಲ್ಲಾ ಮಕ್ಕಳನ್ನೂ ಸವಾಲುಗಳನ್ನು ಜಯಿಸಲು ಸಜ್ಜುಗೊಳಿಸಲಾಗುತ್ತಿದೆ ಎಂದರು.

ವಿದ್ಯಾರ್ಥಿಗಳಿಗೆ ಉಡುಗೊರೆಯಾಗಿ ನೀಡಲಾದ ಈ ಸ್ಮಾರ್ಟ್ ಫೋನ್ ಆಪ್ಟಿಕಲ್ ಕ್ಯಾರೆಕ್ಟರ್ ರೆಕಗ್ನಿಷನ್ (ಓಸಿಆರ್), ಎನ್‌ವಿಡಿಎ ಸ್ಕ್ರೀನ್ ರೀಡರ್ ಇಂಟಿಗ್ರೇಷನ್ ಮತ್ತು ಇನ್‌ಸ್ಟಾ ರೀಡರ್ ಮತ್ತು ಬಿಮೈಐಸ್‌ನಂತಹ ವಿಶೇಷ ಆ್ಯಪ್ ಹೊಂದಿದೆ. ಇದರಿಂದ ವಿದ್ಯಾರ್ಥಿಗಳಿಗೆ ಮುದ್ರಿತ ಅಕ್ಷರವನ್ನು ಓದಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಎನ್.ಆರ್.ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಂ.ಆರ್.ಸುರೇಶ್ ಇನ್ನಿತರರು ಉಪಸ್ಥಿತರಿದ್ದರು.

ಉದ್ಯೋಗದಾತರು–ಉದ್ಯೋಗಿಗಳ ನೋಂದಣಿ ಉತ್ತೇಜಿಸುವ ಯೋಜನೆಗೆ ಅನುಮೋದನೆ

ಮೈಸೂರು, ಜು.12(ಎಂಕೆ)– ಕಾರ್ಮಿಕರ ರಾಜ್ಯ ವಿಮಾ ನಿಗಮ (ಇಎಸ್‌ಐಸಿ)ವು ‘ಉದ್ಯೋಗದಾತರು ಮತ್ತು ಉದ್ಯೋಗಿಗಳ ನೋಂದಣಿಯನ್ನು ಉತ್ತೇಜಿಸುವ ಯೋಜನೆ(ಎಸ್‌ಪಿಆರ್‌ಇಇ)–2025 ಅನುಮೋದಿಸಿದೆ.

ಹಿಮಾಚಲಪ್ರದೇಶದ ಶಿಮ್ಲಾದಲ್ಲಿ ನಡೆದ ಕಾರ್ಮಿಕರ ರಾಜ್ಯ ವಿಮಾ ನಿಗಮದ 196ನೇ ಸಭೆಯಲ್ಲಿ ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಹಾಗೂ ಯುವಜನ ಮತ್ತು ಕ್ರೀಡಾ ಸಚಿವ ನವೀಕೃತ ಎಸ್‌ಪಿಆರ್‌ಇಇ ಯೋಜನೆಗೆ ಅನುಮೋದನೆ ನೀಡಿದ್ದಾರೆ.

ಸಾಮಾಜಿಕ ಭದ್ರತಾ ವ್ಯಾಪ್ತಿಯನ್ನು ವಿಸ್ತರಿಸಲು ಅನುಮೋದಿಸುವ ಯೋಜನೆ ಇದಾಗಿದ್ದು, ಜು.1 ರಿಂದ ಡಿ.31 ರವರೆಗೆ ಸಕ್ರಿಯವಾಗಿರಲಿದೆ. ಗುತ್ತಿಗೆ ಹಾಗೂ ತಾತ್ಕಾಲಿಕ ಕಾರ್ಮಿಕರು ಸೇರಿದಂತೆ ಇಎಸ್‌ಐ ಅಡಿಯಲ್ಲಿ ಇನ್ನೂ ನೋಂದಾವಣಿಯಾಗದ ಉದ್ಯೋಗದಾತರು ಮತ್ತು ಉದ್ಯೋಗಿಗಳು ಯಾವುದೇ ಪರಿಶೀಲನೆ ಅಥವಾ ಹಿಂದಿನ ಅವಧಿಯ ಯಾವುದೇ ಬಾಕಿಯ ಬೇಡಿಕೆ ಇಲ್ಲದೇ ನೋಂದಾಯಿಸಿಕೊಳ್ಳಲು ಒಂದು ಬಾರಿಯ ಅವಕಾಶ ನೀಡಲಾಗಿದೆ. ಇಎಸ್‌ಐಸಿ ಪೋರ್ಟಲ್, ಶ್ರಮ್ ಸುವಿಧಾ ಮತ್ತು ಎಂಸಿಎ ಪೋರ್ಟಲ್ ಮೂಲಕ ನೋಂದಾಯಿಸಿಕೊಳ್ಳಬಹುದಾಗಿದ್ದು, ಇನ್ನೂ ನೋಂದಣಿಯಾಗದ 10 ಮತ್ತು ಅದಕ್ಕಿಂತ ಹೆಚ್ಚಿನ ಕಾರ್ಮಿಕರನ್ನು ಹೊಂದಿರುವ ಉದ್ಯೋಗದಾತರು ತಮ್ಮ ಕಾರ್ಖಾನೆ ಮತ್ತು ಘಟಕಗಳನ್ನು ನೋಂದಾಯಿಸುವ ಅವಕಾಶ ನೀಡಲಾಗಿದೆ.

ಇದರಿಂದ ಕಾರ್ಮಿಕರು ನೋಂದಣಿಯಾದ ದಿನದಿಂದ ಕಾರ್ಮಿಕ ಮತ್ತು ಆತನ ಕುಟುಂಬಸ್ಥರಿಗೆ ವೈದ್ಯಕೀಯ ಆರೈಕೆ, ಅನಾರೋಗ್ಯ, ಪ್ರಸವ(ಹೆರಿಗೆ), ಅಪಘಾತ ಅಥವಾ ಉದ್ಯೋಗಕ್ಕೆ ಸಂಬಂಧಿಸಿದ ಮರಣದ ಸಂದರ್ಭದಲ್ಲಿ ನಗದು ಸೌಲಭ್ಯ ಜೊತೆಗೆ ಇಎಸ್‌ಐ ಕಾಯ್ದೆ 1948ರ ಅಡಿಯಲ್ಲಿ ದೀರ್ಘಾವಧಿ ಭದ್ರತೆ ದೊರೆಯಲಿದೆ. ಹೆಚ್ಚಿನ ಮಾಹಿತಿಗೆ https://esic.gov.in ಅಥವಾ ನಿಮ್ಮ ಹತ್ತಿರದ ಇಎಸ್‌ಐಸಿ ಶಾಖಾ ಅಥವಾ ಪ್ರಾದೇಶಿಕ ಕಚೇರಿ ಸಂಪರ್ಕಿಸಬಹುದಾಗಿದೆ.

ಗುಜರಾತಿ ಸಮಾಜದಿಂದ ಧನಸಹಾಯ...



ಮೈಸೂರು ಗುಜರಾತಿ ಸಮಾಜದ ವತಿಯಿಂದ ಬಾಲಕಿಯೊಬ್ಬಳ ಶ್ರವಣದೋಷ ಚಿಕಿತ್ಸೆಗಾಗಿ ಧನಸಹಾಯ ನೀಡಲಾಯಿತು. ಸಮಾಜದ ಅಧ್ಯಕ್ಷ ಮೆಹುಲ್ ಜೆ.ಪಟೇಲ್, ಕಾರ್ಯದರ್ಶಿ ಕಮಲೇಶ್ ಮೋಧ, ಖಜಾಂಚಿ ಜತಿನ್, ಜಂಟಿ ಕಾರ್ಯದರ್ಶಿ ವಿಶಾಲ್ ಶಾ, ಕಾರ್ಯಕಾರಿ ಸಮಿತಿ ಸದಸ್ಯರಾದ ನಿರ್ಮಲ್ ಶಾ, ದಾತೇಶ್ ಸೋನಿ ಅವರು ಚೆಕ್ ಅನ್ನು ಮಕ್ಕಳ ತಜ್ಞರೂ ಆದ ಆಡಿಯಾಲಜಿಸ್ಟ್ ಡಾ.ರಾಧಾ ಸಿಂಹಾದ್ರಿ ಅವರಿಗೆ ಹಸ್ತಾಂತರಿಸಿದರು.

ರಾಜ್ಯದಲ್ಲಿ ಪರ್ಯಾಯ ಸರ್ಕಾರ ರಚನೆಗೆ ಮುಂದಾಗುವುದು ಬೇಡ!

■ ರಾಜ್ಯ ಬಿಜೆಪಿ ನಾಯಕರಿಗೆ ವರಿಷ್ಠರ ಸಂದೇಶ ■ ಡಿಸಿಎಂ ಡಿ.ಕೆ.ಶಿವಕುಮಾರ್ ಸಿಎಂ ಆಗುವುದು ಗ್ಯಾರಂಟಿ; ಅಲ್ಲಿಂದಲೇ ಭಿನ್ನಮತ ಬೀಜಾಂಕುರವಾಗುತ್ತೆ ■ ಪರಿಸ್ಥಿತಿ ಕೈಮೀರಿದರೆ 2026ರ ಮಾರ್ಚ್–ಏಪ್ರಿಲ್‌ಗೆ ಮಧ್ಯಂತರ ಚುನಾವಣೆ ಅನಿವಾರ್ಯ; ಸಿದ್ಧರಾಗಿ

ಬೆಂಗಳೂರು,ಜು. 12(ಕೆಎಂಶಿ)–ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಆಂತರಿಕ ಬಿಕ್ಕಟ್ಟಿನಿಂದ ಪತನಗೊಳ್ಳಲಿದ್ದು, ಈ ಸಂದರ್ಭದಲ್ಲಿ ಸಮ್ಮಿಶ್ರ ಸರ್ಕಾರ ರಚನೆಗೆ ಮುಂದಾಗದಂತೆ ರಾಜ್ಯ ನಾಯಕರಿಗೆ ಬಿಜೆಪಿ ವರಿಷ್ಠರು ಸಂದೇಶ ನೀಡಿದ್ದಾರೆ.

ಕರ್ನಾಟಕ ಕಾಂಗ್ರೆಸ್‌ನಲ್ಲಿನ ಒಳಜಗಳ ಮತ್ತಷ್ಟು ಉಲ್ಬಣಗೊಂಡು ಸರ್ಕಾರ ಪತನಗೊಳ್ಳುವ ಸ್ಥಿತಿಯೆಡೆಗೆ ಸಾಗುತ್ತಿದೆ. ಎಐಸಿಸಿ ಅಕ್ಟೋಬರ್–ನವೆಂಬರ್‌ನಲ್ಲಿ ಸಿದ್ದರಾಮಯ್ಯ ಅವರಿಂದ ಅಧಿಕಾರ ಕಸಿದು ಉಪಮುಖ್ಯಮಂತ್ರಿ ಡಿ.ಕೆ.ಶಿವ ಕುಮಾರ್ ಅವರಿಗೆ ಹಸ್ತಾಂತರಿಸಲಿದೆ. ಶಿವ ಕುಮಾರ್ ಮುಖ್ಯಮಂತ್ರಿಯಾಗಿ ಅಧಿಕಾರವನ್ನೂ ವಹಿಸಿಕೊಳ್ಳುತ್ತಾರೆ. ಆದರೆ, ಇದು ಹೆಚ್ಚು ದಿನ ಉಳಿಯುವುದಿಲ್ಲ. ನಮಗೆ ಬಂದಿರುವ ಮಾಹಿತಿ ಯಂತೆ ಅಧಿಕಾರ ಹಸ್ತಾಂತರವಾದ ದಿನದಿಂದಲೇ ಸಿದ್ದರಾಮಯ್ಯ ಆಪ್ತ ಸಚಿವರು, ಶಾಸಕರು ಭಿನ್ನ ಮತಕ್ಕೆ ನಾಂದಿ ಹಾಡಲಿದ್ದಾರೆ. ಇದು ಯಾವ ಸ್ವರೂಪಕ್ಕಾದರೂ ತಿರುಗಬಹುದು. ಅಂತಹ ಸನ್ನಿವೇಶದಲ್ಲಿ ಕಾಂಗ್ರೆಸ್‌ನಿಂದ ಸಿಡಿಯುವ ಯಾವುದೇ ಗುಂಪಿನೊಂದಿಗೆ ಕೈಜೋಡಿಸಿ ಸರ್ಕಾರ ರಚನೆ ಪ್ರಯತ್ನ ಬೇಡ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಅವರಿಗೆ ಸ್ಪಷ್ಟ ಸಂದೇಶ ನೀಡಿದ್ದಾರೆ.

ಒಂದು ಹೆಜ್ಜೆ ಮುಂದೆ ಹೋಗಿರುವ ಬಿಜೆಪಿ ವರಿಷ್ಠರು, ಕರ್ನಾಟಕ ವಿಧಾನಸಭೆಗೆ 2026ರ ಮಾರ್ಚ್–ಏಪ್ರಿಲ್ ವೇಳೆಗೆ ಮಧ್ಯಂತರ ಚುನಾವಣೆ ಎದುರಾಗಬಹುದು, ಇದಕ್ಕಾಗಿ ಸಿದ್ಧರಾಗಿ ಎಂದಿದ್ದಾರೆ. ಕರ್ನಾಟಕ ಕಾಂಗ್ರೆಸ್‌ನಲ್ಲಿನ ಬೆಳವಣಿಗೆ ಬಗ್ಗೆ ವಿಜಯೇಂದ್ರ, ಅಶೋಕ್ ಅಲ್ಲದೆ, ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಷಿ, ಎಚ್.ಡಿ.ಕುಮಾರ ಸ್ವಾಮಿ, ವಿ.ಸೋಮಣ್ಣ, ಶೋಭಾ ಕರಂದ್ಲಾಜೆ ಅವರಿಂದಲೂ ಮಾಹಿತಿ ಪಡೆದುಕೊಂಡಿದ್ದಾರೆ. ಕಳೆದ ಕೆಲವು ದಿನಗಳ ಹಿಂದೆ ವಿಜಯೇಂದ್ರ ಮತ್ತು ಅಶೋಕ್ ಅವರನ್ನು ದೆಹಲಿಗೆ ಕರೆಸಿಕೊಂಡಿದ್ದ ವರಿಷ್ಠರು, 6 ದಿನ ಅಲ್ಲಿಯೇ ಉಳಿಸಿಕೊಂಡು, ಎಲ್ಲಾ ಮಗ್ಗಲುಗಳಿಂದ ಮಾಹಿತಿ ಪಡೆದಿದ್ದಾರೆ.

ಇದಾದ ನಂತರ ಕುಮಾರಸ್ವಾಮಿ ಬಳಿಯೂ ಮಾಹಿತಿ ಪಡೆದಿದ್ದಾರೆ, ಈ ಸಮಯದಲ್ಲಿ ಕಾಂಗ್ರೆಸ್ ಸರ್ಕಾರ ಪತನಗೊಂಡರೆ ನಾವು ಯಾವುದೇ ಗುಂಪಿನೊಂದಿಗೆ ಸೇರಿ ಮೈತ್ರಿ ಆಡಳಿತ ನಡೆಸುವುದು ಬೇಡ. ಸಿದ್ದರಾಮಯ್ಯ ಆಡಳಿತ ವೈಖರಿಗೆ ಅಧಿಕಾರಿಗಳು ತಿರುಗಿಬಿದ್ದಿರುವುದಲ್ಲದೆ, ಜನರೂ ಬೇಸರಗೊಂಡಿದ್ದಾರೆ. ಸರ್ಕಾರ ಪತನ ಸನ್ನಿವೇಶದಲ್ಲಿ ಮಧ್ಯಂತರ ಚುನಾವಣೆ ಎದುರಿಸಿದರೆ ಬಿಜೆಪಿ–ಜೆಡಿಎಸ್ ಮೈತ್ರಿಕೂಟ 150ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿ ಅಧಿಕಾರದ ಚುಕ್ಕಾಣಿ ಹಿಡಿಯಲಿದೆ ಎಂಬ ಮಾಹಿತಿ ನೀಡಿದ್ದಾರೆ. ಕುಮಾರಸ್ವಾಮಿ ಅಭಿಪ್ರಾಯಕ್ಕೆ ಬೊಮ್ಮಾಯಿ, ಶೋಭಾ ಅದೇ ಧಾಟಿಯಲ್ಲಿ ಮಾಹಿತಿ ನೀಡಿದ್ದಾರೆ. ಈ ಬೆಳವಣಿಗೆ ನಂತರ ಪ್ರಹ್ಲಾದ್ ಜೋಷಿ ಅವರನ್ನು ರಾಜ್ಯಕ್ಕೆ ಕಳುಹಿಸಿದ ವರಿಷ್ಠರು, ಬಿಜೆಪಿಯಲ್ಲಿನ ಆಂತರಿಕ ಭಿನ್ನಮತ ಪರಿಹರಿಸುವ ಹೊಣೆಗಾರಿಕೆ ನೀಡಿದ್ದಾರೆ. ಅವರು ಈ ದಿಸೆಯಲ್ಲಿ ಈಗಾಗಲೇ ಎರಡು ಸಭೆ ನಡೆಸಿದ್ದಾರೆ. ಕರ್ನಾಟಕದ ರಾಜಕೀಯ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವುದಲ್ಲದೆ, ಕಾಂಗ್ರೆಸ್‌ನ ಆಂತರಿಕ ಕಚ್ಚಾಟದ ಪೂರ್ಣ ಚಿತ್ರಣ ಹೊರಬರುವವರೆಗೂ ರಾಜ್ಯ ಬಿಜೆಪಿ ನಾಯಕತ್ವ ವಿಚಾರದಲ್ಲಿ ಯಾವುದೇ ನಿರ್ಧಾರ ಕೈಗೊಳ್ಳದಿರಲು ತೀರ್ಮಾನಿಸಿದ್ದಾರೆ. ಈ ಬೆಳವಣಿಗೆ ನಡುವೆ, ಬಿ.ವೈ.ವಿಜಯೇಂದ್ರ ಅವರನ್ನು ವರಿಷ್ಠರು ಮತ್ತೆ ದೆಹಲಿಗೆ ಕರೆಸಿಕೊಂಡಿದ್ದಾರೆ.

6ನೇ ವರ್ಷದ ಸವಿನೆನಪು



ಶ್ರೀ ನಿಂಗೇಗೌಡರು
ನಿಧನ: 13.07.2019
ನೀವು ನಮ್ಮನ್ನಗಲಿ ಇಂದಿಗೆ 6 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಮಗ ಶಿವಣ್ಣ, ಸೊಸೆ ಜ್ಯೋತಿ, ಸ್ವರೂಪ್‌ಗೌಡ, ಶ್ವೇತಾ, ಕುಟುಂಬವರ್ಗದವರು, ಯರಗನಹಳ್ಳಿ

'ಚಿರ ನೆನಪಿನ ಸ್ಮರಣೆಗಳೊಂದಿಗೆ'



ಎಸ್. ದಾಕ್ಷಾಯಣಮ್ಮ ನಿಶಾನಿ ಮಠ್
(106 ವರ್ಷಗಳು)

ಜೀವನದ ಅವಿಸ್ಮರಣೀಯ ಪ್ರೀತಿ ತುಂಬಿದ ನೆನಪುಗಳೊಂದಿಗೆ ಸಂತೃಪ್ತ ಜೀವನ ನಡೆಸಿ, ಅಂತರಾಳದ ಹೃದಯ ತುಂಬಿದ ಉತ್ಸಾಹ ಹಾಗೂ ಸ್ಫೂರ್ತಿಯುತ ಬುದ್ಧಿವೈಭವದ ಮಾರ್ಗದರ್ಶನ ಮಾಡುತ್ತಿದ್ದ, ನಮಗೆ ಸದಾ ಸ್ಫೂರ್ತಿಯ ಸೆಲೆಯಾಗಿದ್ದ ಪೂಜ್ಯ ಮಾತೃಶ್ರೀ ಎಸ್. ದಾಕ್ಷಾಯಣಮ್ಮ ನಿಶಾನಿ ಮಠ್, ಲಿಂಗೈಕ್ಯ ಶ್ರೀ ಎಸ್. ಶಿವಕುಮಾರಸ್ವಾಮಿಯವರ ಧರ್ಮಪತ್ನಿ ಅವರ 106 ಸಂವತ್ಸರಗಳ ಸಾರ್ಥಕ ಸಮೃದ್ಧ ಜೀವನ ನಡೆಸಿ, ದಿನಾಂಕ: 11–07–2025ರಂದು ರಾತ್ರಿ 11.30ರ ವೇಳೆಗೆ ನಮ್ಮನ್ನಗಲಿದ್ದಾರೆ ಎಂದು ತಿಳಿಸಲು ವಿಷಾದಿಸುತ್ತೇವೆ. ಪೂಜ್ಯ ಮಾತೃಶ್ರೀಯವರ ಕ್ರಿಯಾಸಮಾಧಿಯು ದಿನಾಂಕ: 12–07–2025ರಂದು ವಿಧಿವತ್ತಾಗಿ ನೆರವೇರಿತು. ಎಲ್ಲಾ ಬಂಧುಗಳು ಹಾಗೂ ಹಿತೈಷಿಗಳು ಸಕಾಲಕ್ಕೆ ಆಗಮಿಸಿ ನಮ್ಮೊಂದಿಗೆ ಭಾಗಿಗಳಾಗಿ ನಮ್ಮ ಶೋಕದಲ್ಲಿ ಕಲೆತು ಧೈರ್ಯ–ಸ್ಥೈರ್ಯಗಳನ್ನು ತುಂಬಿದ್ದಕ್ಕಾಗಿ ತುಂಬು ಹೃದಯದ ಧನ್ಯವಾದಗಳು.

ಹೃದಯ ತುಂಬಿದ ನೆನಪುಗಳೊಂದಿಗೆ
ಎಸ್. ಜ್ಞಾನಶಂಕರ್ ಮತ್ತು ಕುಟುಂಬದವರು
ನಂದಿಕೇಶ್ವರ ಆಫ್‌ಸೆಟ್ ಮುದ್ರಣ ಮತ್ತು ಸಿಗ್ಮ ಕುಟುಂಬ, ಮೈಸೂರು

6ನೇ ವರ್ಷದ ಸವಿನೆನಪು



ಶ್ರೀ ನಿಂಗೇಗೌಡರು
ನಿಧನ: 13.07.2019
#563/2, ಟೆರಿಷಿಯನ್ ಕಾಲೇಜು ಸರ್ಕಲ್, ಮೈಸೂರು
ನೀವು ನಮ್ಮನ್ನಗಲಿ ಇಂದಿಗೆ 6 ವರ್ಷ ಕಳೆದರೂ ಸದಾ ನಿಮ್ಮ ನೆನಪು ನಮ್ಮ ಮನದಲ್ಲಿದೆ.
ದುಃಖತಪ್ತರು: ಮಗ: ಮಹದೇವು
ಸೊಸೆ: ಲಕ್ಷ್ಮಮ್ಮ, ಮೊಮ್ಮಕ್ಕಳು, ಶಿವರಾಜು, ರಕ್ಷಿತ, ಕಿರಣ್, ಲಕ್ಷ್ಮಿದೇವಿ, ಪ್ರವೀಣ್, ತೇಜಸ್ಮಿತಗೌಡ ಕುಟುಂಬವರ್ಗದವರು, ಯರಗನಹಳ್ಳಿ

ಎರಡನೇ ವರ್ಷದ ಸವಿನೆನಪು



ದಿ॥ ಜೀವನ್.ಆರ್
ನಿಧನ: 13.07.2023
ಸದಾ ನಿಮ್ಮ ನೆನಪಿನಲ್ಲಿರುವ ತಂದೆ: ರೇವಣ್ಣ, ತಾಯಿ: ಮಹದೇವಿ, ಅಣ್ಣ: ಹರ್ಷವರ್ಧನ್ ಹಾಗೂ ಕುಟುಂಬವರ್ಗದವರು ಮತ್ತು ಬಂಧುಗಳು ಸ್ನೇಹಿತರು.

9ನೇ ವರ್ಷದ ಪುಣ್ಯಸ್ಮರಣೆ



ಜೆ.ಎಸ್.ಮಮತ
ಜನನ: 25.08.1989
ಮರಣ: 13.07.2016
ನೀವು ನಮ್ಮನ್ನಗಲಿ ಇಂದಿಗೆ 9 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ
ದುಃಖತಪ್ತರು: ತಂದೆ, ತಾಯಿ, ತಂಗಿಯರು, ದೊಡ್ಡಮ್ಮ, ಜೆನ್ನೂರು ಗ್ರಾಮ, ಚಾಮರಾಜನಗರ ತಾ॥ ಮತ್ತು ಜಿಲ್ಲೆ.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರಾದ ಶ್ರೀಮತಿ. ಯಶೋಧ ಬಿನ್ ಲೇಟ್ ರಾಮಣ್ಣ ಮತ್ತು ಲೇಟ್ ನಿಂಗಮ್ಮ ಕೋಂ ರಾಮೇಗೌಡ ಇವರು ಷೆಡ್ಯೂಲ್ ಸ್ವತ್ತಿನಲ್ಲಿ ಭಾಗಾಂಶಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಕೋರಿ ಹಾಗೂ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ದಿನಾಂಕ 29.05.2025 ರಂದು ನೋಂದಣಿಯಾಗಿರುವ ನೋಂದಾಯಿತ ವಿಭಾಗ ಪತ್ರವು ನಮ್ಮ ಕಕ್ಷಿದಾರರ ಹಿಸ್ಸೆಗೆ ಬದ್ಧಪಡಿಸುವುದಿಲ್ಲವೆಂದು ಕೋರಿ ನಮ್ಮ ಕಕ್ಷಿದಾರರ ಸಹೋದರ, ಸಹೋದರಿಯರು ಮತ್ತು ಅವರ ಮಕ್ಕಳುಗಳ ವಿರುದ್ಧ ಅಂದರೆ, ನಿಂಗಣ್ಣ ಮತ್ತು ಇತರರ ವಿರುದ್ಧ ಮೈಸೂರಿನ ಮಾನ್ಯ ಮೂರನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು ಇಲ್ಲಿ ಅಸಲು ದಾವಾ ಸಂಖ್ಯೆ: 811/2025 ರಂತೆ ದಾವೆಯನ್ನು ದಾಖಲಿಸಿದ್ದು, ಸದರಿ ದಾವೆಯು ದಿನಾಂಕ 20.08.2025 ಕ್ಕೆ ವಿಚಾರಣೆಗಾಗಿ ಮುಂದೂಡಲ್ಪಟ್ಟಿದ್ದು. ಈ ಮಧ್ಯೆ ನಮ್ಮ ಕಕ್ಷಿದಾರರ ಸಹೋದರ ಮತ್ತು ಸಹೋದರಿಯರು ಘನ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿರುವುದನ್ನು ಮರೆಮಾಚಿ ಷೆಡ್ಯೂಲ್ ಆಸ್ತಿಗಳಲ್ಲಿ ನಮ್ಮ ಕಕ್ಷಿದಾರರಿಗೆ ಇರುವ ಹಿಸ್ಸೆಯನ್ನು ಕಡೆಗಣಿಸಿ ಮೂರನೇ ವ್ಯಕ್ತಿಗಳಿಗೆ ಮಾರಾಟ ಮಾಡಲು ಇಚ್ಛಿಸುತ್ತಿರುವ ವಿಚಾರ ನಮ್ಮ ಕಕ್ಷಿದಾರರ ಗಮನಕ್ಕೆ ಬಂದಿರುತ್ತದೆ. ಆದ್ದರಿಂದ ಸಾರ್ವಜನಿಕರು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಕರಾರು, ಕ್ರಯ, ಮತ್ತಿತೆ ಯಾವುದೇ ವ್ಯವಹರಣೆಗಳನ್ನು ಮಾಡಬಾರದೆಂದು ಎಂದು ಈ ಮೂಲಕ ತಿಳಿಯಪಡಿಸಲಾಗಿದ್ದು, ಒಂದು ವೇಳೆ ಮುಂದುವರೆದು ಯಾವುದೇ ರೀತಿಯ ವ್ಯವಹರಣೆ ಮಾಡಿದಲ್ಲಿ ಸದರಿ ವ್ಯವಹರಣೆಯು ನಮ್ಮ ಕಕ್ಷಿದಾರರ ಹಕ್ಕಿಗೆ ಬದ್ಧಪಡಿಸುವುದಿಲ್ಲವೆಂದು ಹಾಗೂ ಮುಂದೆ ಉಂಟಾಗಬಹುದಾದ ಕಷ್ಟನಷ್ಟಗಳಿಗೆ ಅವರುಗಳೇ ಜವಾಬ್ದಾರರಾಗಿರುತ್ತಾರೆ ಎಂದು ಈ ಮೂಲಕ ತಿಳಿಯಪಡಿಸುತ್ತೇವೆ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ದಟ್ಟಗಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 187/3, 187/8 187/9 187/10 187/11 2 187/12 ರ ಒಟ್ಟು ವಿಸ್ತೀರ್ಣ 1-04.08 ಗುಂಟೆ ವ್ಯವಸಾಯೇತರ ವಸತಿ ಉದ್ದೇಶಕ್ಕಾಗಿ ಅನ್ಯಕಾಂತವಾಗಿರುವ ಜಮೀನಿನಲ್ಲಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಿಂದ ಅನುಮೋದನೆಗೊಂಡ ವಸತಿ, ವಿನ್ಯಾಸ, ನಕ್ಷೆ ರೀತ್ಯಾ ನಿರ್ಮಿಸಿ, ಅಭಿವೃದ್ಧಿಪಡಿಸಿ, ನಿವೇಶನಗಳಾಗಿ ವಿಂಗಡಿಸಿರುವ ಹಾಲೀ ಮೈಸೂರು ಮಹಾನಗರ ಪಾಲಿಕೆಗಳ ಪ್ರಕಾರ (ಖಾತಾ ನಮೂನೆ-2ರಂತೆ) ವಾರ್ಡ್ ಸಂಖ್ಯೆ: 19,

1) ಸ್ವತ್ತಿನ ಹಳೆ ಸಂಖ್ಯೆ: 10, ನಿರ್ದರಣಾ ಸಂಖ್ಯೆ. 10, ಸ್ವತ್ತಿನ ಸಂಖ್ಯೆ: 19-8-941-10, ನಿವೇಶನ ಸಂಖ್ಯೆ:10, ಇದರ ವಿಸ್ತೀರ್ಣ ಪೂರ್ವ-ಪಶ್ಚಿಮ:12.00 ಮೀಟರ್‌ಗಳು, ಉತ್ತರ-ದಕ್ಷಿಣ: (11.14+9)/2 ಮೀಟರ್‌ಗಳು, ಒಟ್ಟು 120.84 ಚದರ ಮೀಟರ್‌ಗಳುಳ್ಳ ಖಾಲಿ ನಿವೇಶನ,

2) ಸ್ವತ್ತಿನ ಹಳೆ ಸಂಖ್ಯೆ. 19, ನಿರ್ದರಣಾ ಸಂಖ್ಯೆ. 19, ಸ್ವತ್ತಿನ ಸಂಖ್ಯೆ. 19-8-941-19, ನಿವೇಶನ ಸಂಖ್ಯೆ: 19, ಇದರ ವಿಸ್ತೀರ್ಣ ಪೂರ್ವ-ಪಶ್ಚಿಮ: 12.00 ಮೀಟರ್‌ಗಳು, ಉತ್ತರ-ದಕ್ಷಿಣ: 9.00 ಮೀಟರ್‌ಗಳು, ಒಟ್ಟು 108.00 ಚದರ ಮೀಟರ್‌ಗಳುಳ್ಳ ಖಾಲಿ ನಿವೇಶನ,

3) ಸ್ವತ್ತಿನ ಹಳೆ ಸಂಖ್ಯೆ. 17, ನಿರ್ದರಣಾ ಸಂಖ್ಯೆ. 17, ಸ್ವತ್ತಿನ ಸಂಖ್ಯೆ. 19-8-941-17, ನಿವೇಶನ ಸಂಖ್ಯೆ. 17, ಇದರ ವಿಸ್ತೀರ್ಣ ಪೂರ್ವ-ಪಶ್ಚಿಮ: 12.00 ಮೀಟರ್‌ಗಳು, ಉತ್ತರ-ದಕ್ಷಿಣ:9.00 ಮೀಟರ್‌ಗಳು, ಒಟ್ಟು 108.00 ಚದರ ಮೀಟರ್‌ಗಳುಳ್ಳ ಖಾಲಿ ನಿವೇಶನ,

4) ಸ್ವತ್ತಿನ ಹಳೆ ಸಂಖ್ಯೆ. 18, ನಿರ್ದರಣಾ ಸಂಖ್ಯೆ. 18, ಸ್ವತ್ತಿನ ಸಂಖ್ಯೆ. 19-8-941-18, ನಿವೇಶನ ಸಂಖ್ಯೆ. 18, ಇದರ ವಿಸ್ತೀರ್ಣ ಪೂರ್ವ-ಪಶ್ಚಿಮ: 12.00 ಮೀಟರ್‌ಗಳು, ಉತ್ತರ-ದಕ್ಷಿಣ: 9.00 ಮೀಟರ್‌ಗಳು, ಒಟ್ಟು 108.00 ಚದರ ಮೀಟರ್‌ಗಳುಳ್ಳ ಖಾಲಿ ನಿವೇಶನ,

5) ಸ್ವತ್ತಿನ ಹಳೆ ಸಂಖ್ಯೆ. 16, ನಿರ್ದರಣಾ ಸಂಖ್ಯೆ. 16, ಸ್ವತ್ತಿನ ಸಂಖ್ಯೆ. 19-8-941-16, ನಿವೇಶನ ಸಂಖ್ಯೆ. 16, ಇದರ ವಿಸ್ತೀರ್ಣ ಪೂರ್ವ ಪಶ್ಚಿಮ 12.00 ಮೀಟರ್‌ಗಳು, ಉತ್ತರ-ದಕ್ಷಿಣ: 9.00 ಮೀಟರ್‌ಗಳು, ಒಟ್ಟು 108.00 ಚದರ ಮೀಟರ್‌ಗಳುಳ್ಳ ಖಾಲಿ ನಿವೇಶನ

6) ಸ್ವತ್ತಿನ ಹಳೆ ಸಂಖ್ಯೆ. 06, ನಿರ್ದರಣಾ ಸಂಖ್ಯೆ. 06, ಸ್ವತ್ತಿನ ಸಂಖ್ಯೆ, 19-8-941-06, ನಿವೇಶನ ಸಂಖ್ಯೆ. 06, ಇದರ ವಿಸ್ತೀರ್ಣ ಪೂರ್ವ-ಪಶ್ಚಿಮ : (11.12+10.86)/2 ಮೀಟರ್‌ಗಳು, ಉತ್ತರ-ದಕ್ಷಿಣ: 9.00 ಮೀಟರ್‌ಗಳು, ಒಟ್ಟು 98.91 ಚದರ ಮೀಟರ್‌ಗಳುಳ್ಳ ಖಾಲಿ ನಿವೇಶನ,

7) ಸ್ವತ್ತಿನ ಹಳೆ ಸಂಖ್ಯೆ. 09, ನಿರ್ದರಣಾ ಸಂಖ್ಯೆ. 09, ಸ್ವತ್ತಿನ ಸಂಖ್ಯೆ. 19-8-941-09, ನಿವೇಶನ ಸಂಖ್ಯೆ.09, ಇದರ ವಿಸ್ತೀರ್ಣ ಪೂರ್ವ-ಪಶ್ಚಿಮ: 10.36,18,7.79 ಮೀಟರ್‌ಗಳು, ಉತ್ತರ-ದಕ್ಷಿಣ: 9,2.78,5.45 ಮೀಟರ್‌ಗಳು, ಒಟ್ಟು 136.25 ಚದರ ಮೀಟರ್‌ಗಳುಳ್ಳ ಪೂರ್ತಾ ನಿವೇಶನ

8) ಸ್ವತ್ತಿನ ಹಳೆ ಸಂಖ್ಯೆ. 20, ನಿರ್ದರಣಾ ಸಂಖ್ಯೆ. 20, ಸ್ವತ್ತಿನ ಸಂಖ್ಯೆ 19-8-941-20, ನಿವೇಶನ ಸಂಖ್ಯೆ. 20, ಇದರ ವಿಸ್ತೀರ್ಣ ಪೂರ್ವ-ಪಶ್ಚಿಮ: 12.00 ಮೀಟರ್‌ಗಳು, ಉತ್ತರ-ದಕ್ಷಿಣ: 9.00 ಮೀಟರ್‌ಗಳು, ಒಟ್ಟು, 108.00 ಚದರ ಮೀಟರ್‌ಗಳುಳ್ಳ ಖಾಲಿ ನಿವೇಶನ,

9) ಸ್ವತ್ತಿನ ಹಳೆ ಸಂಖ್ಯೆ. 21, ನಿರ್ದರಣಾ ಸಂಖ್ಯೆ. 21, ಸ್ವತ್ತಿನ ಸಂಖ್ಯೆ. 19-8-941-21, ನಿವೇಶನ ಸಂಖ್ಯೆ. 21, ಇದರ ವಿಸ್ತೀರ್ಣ ಪೂರ್ವ-ಪಶ್ಚಿಮ: 12.00 ಮೀಟರ್‌ಗಳು, ಉತ್ತರ-ದಕ್ಷಿಣ: (11.12+1134)/2 ಮೀಟರ್‌ಗಳು, ಒಟ್ಟು 134.76 ಚದರ ಮೀಟರ್‌ಗಳುಳ್ಳ ಖಾಲಿ ನಿವೇಶನ,

10) ಸ್ವತ್ತಿನ ಹಳೆ ಸಂಖ್ಯೆ. 02, ನಿರ್ದರಣಾ ಸಂಖ್ಯೆ. 02, ಸ್ವತ್ತಿನ ಸಂಖ್ಯೆ. 19-8-941-02, ನಿವೇಶನ ಸಂಖ್ಯೆ. 02 ರ ವಿಸ್ತೀರ್ಣ ಪೂರ್ವ-ಪಶ್ಚಿಮ: (12.2+11.91)/2 ಮೀಟರ್‌ಗಳು ಉತ್ತರ-ದಕ್ಷಿಣ: 9.00 ಮೀಟರ್‌ಗಳು, ಒಟ್ಟು, 108.50 ಚದರ ಮೀಟರ್‌ಗಳುಳ್ಳ ಖಾಲಿ ನಿವೇಶನ,

11) ಸ್ವತ್ತಿನ ಹಳೆ ಸಂಖ್ಯೆ:05, ನಿರ್ದರಣಾ ಸಂಖ್ಯೆ:05, ಸ್ವತ್ತಿನ ಸಂಖ್ಯೆ.19-8-941-05, ನಿವೇಶನ ಸಂಖ್ಯೆ. 05 ರ ವಿಸ್ತೀರ್ಣ ಪೂರ್ವ-ಪಶ್ಚಿಮ : (11.38+11.12)/2 ಮೀಟರ್‌ಗಳು, ಉತ್ತರ-ದಕ್ಷಿಣ: 9.00 ಮೀಟರ್‌ಗಳು, ಒಟ್ಟು 101.25 ಚದರ ಮೀಟರ್‌ಗಳುಳ್ಳ ಖಾಲಿ ನಿವೇಶನ,

12) ಸ್ವತ್ತಿನ ಹಳೆ ಸಂಖ್ಯೆ. 07, ನಿರ್ದರಣಾ ಸಂಖ್ಯೆ. 07, ಸ್ವತ್ತಿನ ಸಂಖ್ಯೆ. 19-8-941-07, ನಿವೇಶನ ಸಂಖ್ಯೆ. 07, ಇದರ ವಿಸ್ತೀರ್ಣ ಪೂರ್ವ-ಪಶ್ಚಿಮ : 10.86+10.59)/2 ಮೀಟರ್‌ಗಳು, ಉತ್ತರ-ದಕ್ಷಿಣ: 9.00 ಮೀಟರ್‌ಗಳು, ಒಟ್ಟು 96.53 ಚದರ ಮೀಟರ್‌ಗಳುಳ್ಳ ಖಾಲಿ ನಿವೇಶನ,

13) ಸ್ವತ್ತಿನ ಹಳೆ ಸಂಖ್ಯೆ. 14, ನಿರ್ದರಣಾ ಸಂಖ್ಯೆ. 14, ಸ್ವತ್ತಿನ ಸಂಖ್ಯೆ. 19-8-941-14, ನಿವೇಶನ ಸಂಖ್ಯೆ. 14 ಇದರ ವಿಸ್ತೀರ್ಣ ಪೂರ್ವ-ಪಶ್ಚಿಮ: 12.00 ಮೀಟರ್‌ಗಳು, ಉತ್ತರ-ದಕ್ಷಿಣ: 9.00 ಮೀಟರ್‌ಗಳು, ಒಟ್ಟು 108.00 ಚದರ ಮೀಟರ್‌ಗಳುಳ್ಳ ಖಾಲಿ ನಿವೇಶನ,

14) ಸ್ವತ್ತಿನ ಹಳೆ ಸಂಖ್ಯೆ. 15, ನಿರ್ದರಣಾ ಸಂಖ್ಯೆ. 15, ಸ್ವತ್ತಿನ ಸಂಖ್ಯೆ. 19-8-941-15, ನಿವೇಶನ ಸಂಖ್ಯೆ. 15, ಇದರ ವಿಸ್ತೀರ್ಣ ಪೂರ್ವ-ಪಶ್ಚಿಮ: 12.00 ಮೀಟರ್‌ಗಳು, ಉತ್ತರ-ದಕ್ಷಿಣ:9.00 ಮೀಟರ್‌ಗಳು, ಒಟ್ಟು, 108.00 ಚದರ ಮೀಟರ್‌ಗಳುಳ್ಳ ಪೂರ್ತಾ ನಿವೇಶನ,

15) ಸ್ವತ್ತಿನ ಹಳೆ ಸಂಖ್ಯೆ. 08, ನಿರ್ದರಣಾ ಸಂಖ್ಯೆ. 08, ಸ್ವತ್ತಿನ ಸಂಖ್ಯೆ. 19-8-941-08, ನಿವೇಶನ ಸಂಖ್ಯೆ. 08, ಇದರ ವಿಸ್ತೀರ್ಣ ಪೂರ್ವ-ಪಶ್ಚಿಮ: 9.00 ಮೀಟರ್‌ಗಳು, ಉತ್ತರ-ದಕ್ಷಿಣ: (10.59+10.36)/2 ಮೀಟರ್‌ಗಳು, ಒಟ್ಟು 94.28 ಚದರ ಮೀಟರ್‌ಗಳುಳ್ಳ ಖಾಲಿ ನಿವೇಶನ,

16) ಸ್ವತ್ತಿನ ಹಳೆ ಸಂಖ್ಯೆ. 03, ದಾಖಲಾತಿಗಳ ಪ್ರಕಾರ ಸ್ವತ್ತಿನ ಸಂಖ್ಯೆ, 19-3-941-03, ನಿವೇಶನ ಸಂಖ್ಯೆ. 03, ಇದರ ವಿಸ್ತೀರ್ಣ ಪೂರ್ವ-ಪಶ್ಚಿಮ: (11.91+11.64)/2 ಮೀಟರ್‌ಗಳು, ಉತ್ತರ-ದಕ್ಷಿಣ: 9.00 ಮೀಟರ್‌ಗಳು, ಒಟ್ಟು 105.98 ಚದರ ಮೀಟರ್‌ಗಳುಳ್ಳ ಖಾಲಿ ನಿವೇಶನ,

17) ಸ್ವತ್ತಿನ ಹಳೆ ಸಂಖ್ಯೆ. 04, ನಿರ್ದರಣಾ ಸಂಖ್ಯೆ. 04, ಸ್ವತ್ತಿನ ಸಂಖ್ಯೆ. 19-8-941-04, ನಿವೇಶನ ಸಂಖ್ಯೆ.: 04 ಇದರ ವಿಸ್ತೀರ್ಣ ಪೂರ್ವ-ಪಶ್ಚಿಮ : (11.64+11.38)/2 ಮೀಟರ್‌ಗಳು, ಉತ್ತರ-ದಕ್ಷಿಣ: 9.00 ಮೀಟರ್‌ಗಳು, ಒಟ್ಟು 103.59 ಚದರ ಮೀಟರ್‌ಗಳುಳ್ಳ ಖಾಲಿ ನಿವೇಶನ,

ಸಹಿ/– ಬಿ.ಪಿ.ರಾಜೇಶ, ವಕೀಲರು No.514, Bindya Complex,Thyagaraja Road, K.R.Mohallla, Mysuru. Ph. 9448336811
Date : 11.07.2025

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರು ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ಅದರ ಮಾಲೀಕರು ಎಂದು ಪ್ರತಿನಿಧಿಸುತ್ತಿರುವ ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕು ಬಿಳಿಕೆರೆ ಹೋಬಳಿ ಗೋಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ಲೇಟ್ ಕೆ.ಎ. ಹೊನ್ನಬಸವಯ್ಯರವರ ಮಗನಾದ ಕೆ.ಹೆಚ್. ಜಗದೀಶ್ ಇವರಿಂದ ಖರೀದಿಸಲು ಇಚ್ಛಿಸಿರುತ್ತಾರೆ.

ಈ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದ ಹಾಗೇ ಯಾರಿಗಾದರೂ ಹಕ್ಕು, ಋಣ, ಮೈನರ್ ಕ್ಲೈಂಗಳು ಅಥವಾ ಇತರೆ ಯಾವುದೇ ರೀತಿಯಾದ ಬಾಧ್ಯತೆಗಳು ಇದ್ದಲ್ಲಿ ಸಾರ್ವಜನಿಕರು ಈ ಸಾರ್ವಜನಿಕ ಪ್ರಕಟಣೆ ನೀಡಿದ ಹದಿನೈದು (15) ದಿನದೊಳಗಾಗಿ ಈ ಕೆಳಕಾಣಿಸಿರುವ ವಕೀಲರ ಕಛೇರಿಗೆ ಅಂತಹ ಹಕ್ಕು, ಋಣ, ಮೈನರ್ ಕ್ಲೈಮ್‌ಗಳು ಅಥವಾ ಇತರೆ ಯಾವುದೇ ರೀತಿಯಾದ ಬಾಧ್ಯತೆ ಗಳನ್ನು ಪ್ರತಿಪಾದಿಸುವಂತಹ ದಾಖಲೆ ಸಮೇತವಾಗಿ ಲಿಖಿತವಾಗಿ ಹಾಗೂ ಖುದ್ದಾಗಿ ಸಂಪರ್ಕಿಸತಕ್ಕದ್ದು.

ಈ ಹದಿನೈದು ದಿವಸದೊಳಗಾಗಿ ಅಂತಹ ಯಾವುದೇ ರೀತಿಯಾದ ಹಕ್ಕು, ಋಣ, ಮೈನರ್ ಕ್ಲೈಂಗಳು ಅಥವಾ ಇತರೆ ಯಾವುದೇ ರೀತಿಯಾದ ಬಾಧ್ಯತೆಗಳನ್ನು ಪ್ರತಿಪಾದಿಸುವಂತಹ ಯಾವುದೇ ರೀತಿಯಾದಂತಹ ಹೇಳಿಕೆ ಅಥವಾ ದಾಖಲಾತಿಗಳು ಎದುರು ಬರದ ಪಕ್ಷದಲ್ಲಿ ಈ ಕೆಳಕಂಡ ಷೆಡ್ಯೂಲ್ ಸ್ವತ್ತಿಗೆ ಸಾರ್ವಜನಿಕರಿಂದ ಅಂತಹ ಯಾವುದೇ ರೀತಿಯಾದ ಹಕ್ಕು, ಋಣ, ಮೈನರ್ ಕ್ಲೈಮ್‌ಗಳು ಅಥವಾ ಇತರೆ ಯಾವುದೇ ತರಹದ ರೀತಿಯಾದ ಹಕ್ಕು ಮತ್ತು ಬಾಧ್ಯತೆಗಳು ಇರುವುದಿಲ್ಲವೆಂದು ತಿಳಿದುಕೊಂಡು ನನ್ನ ಕಕ್ಷಿದಾರರು ಈ ಕೆಳಕಂಡ ಸ್ವತ್ತನ್ನು ಅದರ ಮೇಲ್ಕಾಣಿಸಿರುವ ಮಾಲೀಕರೊಡನೆ ಕ್ರಯ ಪತ್ರವನ್ನು ಮಾಡಿಸಿಕೊಂಡು ಖಾತೆ ವರ್ಗಾಯಿಸಿಕೊಳ್ಳಲು ಮುಂದಾಗುತ್ತಾರೆ. ಈ ಹದಿನೈದು ದಿನಗಳ ನಂತರ ಬಂದಂತಹ ಯಾವುದೇ ತಂಟೆ ತಕರಾರುಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್

ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ತಾಲ್ಲೂಕು, ಹಂಪಾಪುರ ಹೋಬಳಿ, ಕೊತ್ತೇಗಾಲ ಗ್ರಾಮಕ್ಕೆ ಸೇರಿದ ಸರ್ವೆ ನಂ. 68/4 ರಲ್ಲಿ ಇರುವ ವಿಸ್ತೀರ್ಣ 5.20.00.00 (ಐದು ಎಕರೆ ಇಪ್ಪತ್ತು ಗುಂಟೆ) ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಬಸವೇಗೌಡರವರ ಜಮೀನು ; ಪಶ್ಚಿಮಕ್ಕೆ: ಸಿದ್ದೇಗೌಡರವರ ಜಮೀನು ; ಉತ್ತರಕ್ಕೆ: ಗಣೇಶರವರ ಜಮೀನು ; ದಕ್ಷಿಣಕ್ಕೆ: ಹೊಸಹಳ್ಳಿ ಕೃಷ್ಣೇಗೌಡರ ಜಮೀನು.

Sd/- N.K. Somanna, BAL., LL.B.
Advocate. Off: No. 35, Kuvempu Trust Building, Kalidasa Road, Jayalakshmipuram, Mysore-02. Mob: 9986685754
Date: 12-7-2025. Place: Mysuru

PUBLIC NOTICE

This is to notify the general public that our client intends to purchase all that piece and parcel of the immovable agricultural properties bearing Survey No. 159/50, 159/51 and 159/92, totally admeasuring 9 Acres 38 Guntas, all situated at Maregowdanahalli Village, Halaguru Hobli, Malavalli Taluk, Mandya District, which is morefully described in the Schedule mentioned hereunder and hereinafter referred to as "Schedule Properties" from its rightful owner Mrs. K. Padma wife of Late B.V Somesh.

Any person having any right, claim, title, interest in the Schedule Properties or having any objection to the sale must notify the undersigned with documentary proof thereof within 15 days of this publication, failing which it shall be deemed that no person has any objection to our Client purchasing the Schedule Properties.

SCHEDULE
(description of the Schedule Properties)

All that piece and parcel of the immovable agricultural properties totally admeasuring 9 Acres 38 Guntas, comprised in the below mentioned survey numbers, all situated at Maregowdanahalli Village, Halaguru Hobli, Malavalli Taluk, Mandya District.

Sl. No.	Survey No.	Extent		Boundaries			
		Acres	Guntas	East	West	North	South
1.	159/50	06	00	Survey No. 159/48, and 159/49	Survey No. 159/39	Survey No. 159/51	Government River
2.	159/51	03	15	Survey No. 159/39, 159/47 and 159/48	Survey No. 159/39	Survey No. 159/39	Survey No. 159/50
3.	159/52	00	23	Government Stream	Survey No. 159/88	Survey No. 159/91	Government River

Place: Bengaluru
Dated: 11.07.2025

Sriraksha Vajapeyam,
M/s Agraa Legal, 3rd Floor,
Shravanee Krishna Mansion,
Ashoka Pillar Road, Jayanagar 2nd Block,
Bengaluru 560011.
Ph: (080) 2962001/02
Email: admin@agraalegal.com